ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಫೆಬ್ರವರಿ 28 ಶನಿವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 309 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಇಂದಿನಿಂದ ದ್ವಿತೀಯ ಪಿಯು ಪರೀಕ್ಷೆ

■ ಮೈಸೂರು ಜಿಲ್ಲೆಯಲ್ಲಿ 51 ಕೇಂದ್ರಗಳು ■ ಒಟ್ಟು 35,835 ವಿದ್ಯಾರ್ಥಿಗಳು ನೋಂದಣಿ
■ ಶಾಲಾ ಶಿಕ್ಷಣ ಇಲಾಖೆ(ಪದವಿ ಪೂರ್ವ)ಯಿಂದ ಸುಗಮ ಪರೀಕ್ಷೆಗೆ ಎಲ್ಲಾ ಕ್ರಮ


ಮೈಸೂರಿನ ಮಹಾರಾಣಿ ಮಹಿಳಾ ಪದವಿ ಪೂರ್ವ ಕಾಲೇಜು ಪರೀಕ್ಷಾ ಕೇಂದ್ರದಲ್ಲಿ ಟೇಬಲ್‌ಗಳ ಮೇಲೆ ಪರೀಕ್ಷಾ ರಿಜಿಸ್ಟರ್ ನಂಬರ್ ನಮೂದಿಸುತ್ತಿರುವ ಉಪನ್ಯಾಸಕರನ್ನು ಕಾಣಬಹುದು.

ಮೈಸೂರು, 27 (ಎಂಕೆ)– ಮೈಸೂರು ನಗರ ಸೇರಿದಂತೆ ಜಿಲ್ಲೆಯಾದ್ಯಂತ ನಾಳೆ(ಫೆ.28)ಯಿಂದ ದ್ವಿತೀಯ ಪಿಯುಸಿ ಪರೀಕ್ಷೆ ಆರಂಭವಾಗಲಿದ್ದು, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಅಗತ್ಯ ಎಲ್ಲಾ ಸಿದ್ಧತೆ ಮಾಡಿಕೊಂಡಿದೆ.

ಮೈಸೂರು ಜಿಲ್ಲೆಯಲ್ಲಿ 35,835 ವಿದ್ಯಾರ್ಥಿಗಳು ದ್ವಿತೀಯ ಪಿಯು ಪರೀಕ್ಷೆ ಬರೆಯಲಿದ್ದು, ಅವರಲ್ಲಿ 15,660 ಬಾಲಕರು, 20,122 ಬಾಲಕಿಯರು ಪರೀಕ್ಷೆ ಎದುರಿಸಲಿದ್ದಾರೆ. ಹೊಸದಾಗಿ 13,929 ಬಾಲಕರು, 18,901 ಬಾಲಕಿಯರು ಪರೀಕ್ಷೆ ಬರೆಯುತ್ತಿದ್ದರೆ, 1382 ಬಾಲಕರು ಮತ್ತು 827 ಬಾಲಕಿಯರು ಪುನರಾವರ್ತಿತ ವಿದ್ಯಾರ್ಥಿಗಳಾಗಿದ್ದಾರೆ. ಹಾಗೆಯೇ ಖಾಸಗಿ ಅಭ್ಯರ್ಥಿಗಳಾಗಿ 349 ಬಾಲಕರು ಮತ್ತು 394 ಬಾಲಕಿಯರು ಪರೀಕ್ಷೆ ಬರೆಯುತ್ತಿದ್ದಾರೆ.

ಜಿಲ್ಲೆಯ 51 ಪರೀಕ್ಷಾ ಕೇಂದ್ರಗಳಲ್ಲಿ ಪಿಯು ಪರೀಕ್ಷೆ ನಡೆಯಲಿದ್ದು, ಮೈಸೂರು ನಗರದಲ್ಲಿ 28, ಮೈಸೂರು ಗ್ರಾಮಾಂತರದಲ್ಲಿ 23, ಕೆ.ಆರ್.ನಗರ 3, ಹುಣಸೂರು 4, ನಂಜನಗೂಡು 5, ಹೆಚ್‌ಡಿ ಕೋಟೆಯಲ್ಲಿ 3, ಪಿರಿಯಾಪಟ್ಟಣದಲ್ಲಿ 4 ಹಾಗೂ ಟಿ.ನರಸೀಪುರದ 2 ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ. ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿನ ಪರೀಕ್ಷಾ ಕೊಠಡಿಗಳು ಹಾಗೂ ಪ್ರಶ್ನೆ ಪತ್ರಿಕೆ, ■10ನೇ ಪುಟಕ್ಕೆ

ನಾಳೆ(ಫೆ.28) ಯಿಂದ ಮಾ.17ರ ವರೆಗೆ ನಡೆಯುವ ದ್ವಿತೀಯ ಪಿಯುಸಿ ಪರೀಕ್ಷೆಗೆ ಮೈಸೂರು ನಗರ ಮತ್ತು ಜಿಲ್ಲೆಯಾದ್ಯಂತ ಎಲ್ಲಾ ಸಿದ್ಧತೆ ಮಾಡಿಕೊಳ್ಳಲಾಗಿದೆ. ವಿದ್ಯಾರ್ಥಿಗಳು



ಯಾವುದೇ ಭಯ, ಆತಂಕವಿಲ್ಲದೆ ಪರೀಕ್ಷೆ ಬರೆಯಬೇಕು. ಹಾಗೆಯೇ ಫಲಿತಾಂಶ ಹೆಚ್ಚಳಕ್ಕೆ ವಿಶೇಷ ತರಗತಿಗಳನ್ನು ನಡೆಸಲಾಗಿದೆ. ಇದೇ ಮೊದಲ ಬಾರಿಗೆ ಎರಡು ಬಾರಿ ಪೂರ್ವ ಸಿದ್ಧತಾ ಪರೀಕ್ಷೆ ನಡೆಸಲಾಗಿದೆ.

– ಎಂ.ಪಿ.ನಾಗಮ್ಮ,
ಉಪ ನಿರ್ದೇಶಕರು,
ಶಾಲಾ ಶಿಕ್ಷಣ ಇಲಾಖೆ(ಪದವಿ ಪೂರ್ವ)

ಡಿಕೆಶಿಗೆ ಸಿಎಂ ಪಟ್ಟ ಸುಳಿವು!



● ಮಾಗಡಿ ಶಾಸಕ ಬಾಲಕೃಷ್ಣರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಡಿಕೆಶಿ ಬಣದ 40 ಶಾಸಕರ ಡಿನ್ನರ್ ಮೀಟಿಂಗ್ ● ದೆಹಲಿ ವರಿಷ್ಠರ ಭೇಟಿ ಸಂಬಂಧ ಮಾಜಿ ಸಂಸದ ಡಿ.ಕೆ.ಸುರೇಶ್ ಜೊತೆ ಚರ್ಚೆಗೆ ಶಾಸಕರ ನಿರ್ಧಾರ!

ಬೆಂಗಳೂರು, ಫೆ.27(ಕೆಎಂಶಿ)– ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಮುಖ್ಯಮಂತ್ರಿ ಪಟ್ಟ ದಕ್ಕುವ ಸುಳಿವನ್ನು ಕಾಂಗ್ರೆಸ್ ಹೈಕಮಾಂಡ್ ನೀಡಿದೆ ಎಂದು ಡಿಕೆಶಿ ಆಪ್ತ ಬಳಗದ ಶಾಸಕರು ವಿಶ್ವಾಸದಲ್ಲಿದ್ದಾರೆ.

ಈ ಸುಳಿವು ದೊರೆತ ಹಿನ್ನೆಲೆಯಲ್ಲಿ ಮಾಗಡಿ ಶಾಸಕ ಎಚ್.ಸಿ.ಬಾಲಕೃಷ್ಣ ಹುಟ್ಟುಹಬ್ಬದ ನೆಪದಲ್ಲಿ ನಿನ್ನೆ ರಾತ್ರಿ ಸಂಭ್ರಮ ಆಚರಿಸಿದ್ದಾರೆ. ಬಳ್ಳಾರಿ ರಸ್ತೆಯ ಪಂಚತಾರಾ ಹೋಟೆಲ್‌ನಲ್ಲಿ ಸೇರಿದ್ದ 40ಕ್ಕೂ ಹೆಚ್ಚು ಶಾಸಕರು, ಪಕ್ಷದ ಆಂತರಿಕ ವಿಷಯಗಳ ಕುರಿತು ಚರ್ಚಿಸಿ, ವಿಳಂಬ ಮಾಡದೆ, ನಾಯಕತ್ವ ಬದಲಾವಣೆ ಆಗಲಿ ಎಂಬ ಅಭಿಲಾಷೆ ವ್ಯಕ್ತಪಡಿಸಿದ್ದಾರೆ.

ಬಜೆಟ್‌ಗೂ ಮುನ್ನವೇ ನಾಯಕತ್ವ ಬದಲಾವಣೆಗೆ ಒತ್ತಾಯಿಸಿ, ಬೇಕಿದ್ದರೆ ನಾವು 40–50 ಶಾಸಕರು ದೆಹಲಿಗೆ ತೆರಳಿ ವರಿಷ್ಠರನ್ನು ಆಗ್ರಹಿಸೋಣ ಎಂದು ಚರ್ಚೆ ಸಂದರ್ಭದಲ್ಲಿ ಪ್ರಸ್ತಾಪ ಇಟ್ಟಿದ್ದಾರೆ. ವರಿಷ್ಠರು ಈಗಾಗಲೇ ತೀರ್ಮಾನ ಕೈಗೊಂಡಾಗಿದೆ. ನಾವು ನಿಯೋಗ ಹೋಗಿ ಏನೂ ಮಾಡಲಾಗದು ಎಂದಿರುವ ಸಿ.ಪಿ.ಯೋಗೇಶ್ವರ್, ಒತ್ತಡ ತಂದರೆ ತಕ್ಷಣವೇ ಅಧಿಕಾರ ದೊರೆಯುತ್ತದೆ ಎನ್ನುವುದಾದರೆ 70–80 ಶಾಸಕರೇ ಹೋಗಬಹುದು.

ಡಿಕೆಸು ಭೇಟಿ ನಿರ್ಧಾರ: ಆದರೆ, ಇದರಿಂದ ಏನೂ ಪ್ರಯೋಜನ ಆಗುವುದಿಲ್ಲ. ಮಾಜಿ ಸಂಸದ ಡಿ.ಕೆ.ಸುರೇಶ್ ಅವರನ್ನು ಎಲ್ಲರೂ ಸೇರಿ ಸೋಮವಾರ ಭೇಟಿ ಮಾಡೋಣ. ಅವರ ಸಲಹೆ–ಸೂಚನೆ ಪಡೆದು ಅಗತ್ಯ ಬಿದ್ದಲ್ಲಿ ದೆಹಲಿಗೆ ಹೋಗೋಣ ಎಂದಿದ್ದಾರೆ. ಈ ಸಂದರ್ಭದಲ್ಲಿ ಮಧ್ಯಪ್ರವೇಶಿಸಿದ ಬಾಲಕೃಷ್ಣ, ನಾಯಕತ್ವ ಬದಲಾವಣೆಗೆ ವರಿಷ್ಠರು ತೀರ್ಮಾನ ಮಾಡಿಯಾಗಿದೆ. ಅದು ಯಾವಾಗ ಎಂಬ ದಿನಾಂಕ ಪ್ರಕಟಿಸಬೇಕಷ್ಟೆ.

ನನಗಿರುವ ಮಾಹಿತಿಯಂತೆ ಸಿದ್ದರಾಮಯ್ಯ ಕರೆದಿರುವ ಬಜೆಟ್ ಅಧಿವೇಶನದ ನಂತರವೇ ಎಲ್ಲಾ ಗೊಂದಲಕ್ಕೆ ವರಿಷ್ಠರು ತೆರೆ ಎಳೆಯಲಿದ್ದಾರೆ. ಶಿವಕುಮಾರ್ ಅಧಿಕಾರ ವಹಿಸಿಕೊಳ್ಳುವುದು ಖಚಿತ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ■10ನೇ ಪುಟಕ್ಕೆ

ಅದು ಔತಣಕೂಟ; ಶಕ್ತಿ ಪ್ರದರ್ಶನ ಅಲ್ಲ!

ಬೆಂಗಳೂರು, ಫೆ.27(ಕೆಎಂಶಿ)– ಮಾಗಡಿ ಶಾಸಕ ಬಾಲಕೃಷ್ಣ ಹುಟ್ಟುಹಬ್ಬದ ಸಂದರ್ಭದಲ್ಲಿ ಪಕ್ಷದ ಕೆಲವು ಶಾಸಕರು ಔತಣಕೂಟ ನಡೆಸಿದ್ದಾರೆಯೇ ಹೊರತು ಅದು ಶಕ್ತಿ ಪ್ರದರ್ಶನ ಅಲ್ಲ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಇಂದಿಲ್ಲಿ ಸ್ಪಷ್ಟಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೆಲವರು ವಿಶ್ರಾಂತಿಗೆಂದು ವಿದೇಶ ಹಾಗೂ ಅಧ್ಯಯನ ಪ್ರವಾಸ ಹೋಗುತ್ತಾರೆ. ಮತ್ತೆ ಕೆಲವರು ದೆಹಲಿಗೆ ಹೋಗುತ್ತಾರೆ. ಅದೆಲ್ಲವನ್ನೂ ಶಕ್ತಿ ಪ್ರದರ್ಶನ ಎನ್ನಲಾಗುತ್ತದೆಯೇ ಎಂದರು.

ನಿನ್ನೆ ರಾತ್ರಿ ಕೆಲವರು ಔತಣಕ್ಕೆ ಸೇರಿದ್ದಾರೆ. ಅದರಲ್ಲಿ ಏನು ತಪ್ಪಿದೆ. ಅಲ್ಲಿ ನಾನು ಮುಖ್ಯಮಂತ್ರಿ ಆಗಬೇಕೆಂದು ಪ್ರಸ್ತಾಪ ಮಾಡಿರಬಹುದು. ಅದಕ್ಕೆ ನಾನೇನು ಉತ್ತರ ಕೊಡಲಿ. ■10ನೇ ಪುಟಕ್ಕೆ

ಹಿಂದೂ ಪರ ಸಂಘಟನೆ ಕಾರ್ಯಕರ್ತನ ಮೇಲೆ ಹಲ್ಲೆ; ನಾಪೋಕ್ಲುವಿನಲ್ಲಿ ಬಿಗುವಿನ ಪರಿಸ್ಥಿತಿ

● ಬಲ್ಲಮಾವಟಿಯಲ್ಲಿ ಇಂದು ನಡೆಯುವ ಹಿಂದೂ ಸಂಗಮ ಸಮಾವೇಶ ಪ್ರಚಾರದ ವೇಳೆ ಘಟನೆ
● ಜೀಪಿನಲ್ಲಿ ಕಟ್ಟಿದ ಕೇಸರಿ ಧ್ವಜಕ್ಕೆ ಆಕ್ಷೇಪಿಸಿ ಹಲ್ಲೆ ಆರೋಪ ● ಆರೋಪಿಗಳ ಬಂಧನಕ್ಕೆ ಆಗ್ರಹಿಸಿ ಮಾಜಿ ಸ್ಪೀಕರ್ ಕೆ.ಜಿ.ಬೋಪಯ್ಯ ನೇತೃತ್ವದಲ್ಲಿ ರಸ್ತೆ ತಡೆ, ಪೊಲೀಸರ ಭರವಸೆ ಹಿನ್ನೆಲೆಯಲ್ಲಿ ಇಂದು ಮಧ್ಯಾಹ್ನದವರೆಗೆ ಗಡುವು



ಹಲ್ಲೆಗೊಳಗಾದ ಗೌತಮ್. ಘಟನೆ ಖಂಡಿಸಿ ಹಿಂದೂ ಮುಖಂಡರ ಧರಣಿ.

ನಾಪೋಕ್ಲು, ಫೆ.27(ಸದಾನಂದ)– ಜೀಪಿಗೆ ಕೇಸರಿ ಧ್ವಜ ಕಟ್ಟಿಕೊಂಡು ಹಿಂದೂ ಪರ ಸಂಘಟನೆ ಸಮಾವೇಶದ ಪ್ರಚಾರ ಮಾಡುತ್ತಿದ್ದ ಯುವಕನ ಮೇಲೆ ಅನ್ಯಕೋಮಿನ ಗುಂಪೊಂದು ಕಬ್ಬಿಣದ ರಾಡು, ಬ್ಯಾಟು ಮತ್ತು ದೊಣ್ಣೆಯಿಂದ ಹಲ್ಲೆ ನಡೆಸಿದ್ದು, ಆರೋಪಿಗಳ ಬಂಧನಕ್ಕೆ ಆಗ್ರಹಿಸಿ, ಹಿಂದೂ ಪರ ಸಂಘಟನೆಗಳ ಮುಖಂಡರು ಮೂರು ಗಂಟೆಗಳ ಕಾಲ ರಸ್ತೆ ತಡೆ ನಡೆಸಿದ್ದರಿಂದ ನಾಪೋಕ್ಲುವಿನಲ್ಲಿ ಪ್ರಕ್ಷುಬ್ಧ ವಾತಾವರಣ ನಿರ್ಮಾಣಗೊಂಡಿದೆ.

ಬಲ್ಲಮಾವಟಿಯ ವಾಸಿ ಗೌತಮ್ ಹಲ್ಲೆಯಿಂದ ಗಾಯಗೊಂಡವರಾಗಿದ್ದು, ಅವರನ್ನು ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಅವರ ತಲೆ ಮುಖ ಮತ್ತು ಮೈ-ಕೈಗಳಿಗೆ ಗಾಯಗಳಾಗಿವೆ.



ಹಲ್ಲೆ ನಡೆಸಿದ ಆರೋಪಿಗಳನ್ನು ಬಂಧಿಸುವಂತೆ ಆಗ್ರಹಿಸಿ ವಿಧಾನ ಸಭೆಯ ಮಾಜಿ ಸ್ಪೀಕರ್ ಕೆ.ಜಿ. ಬೋಪಯ್ಯ, ಮುಖಂಡರುಗಳಾದ ಮನು ಮುತ್ತಪ್ಪ, ಸರವಂಡ ಲವ ನಾಣಯ್ಯ, ತಳೂರು ಕಿಶೋರ್ ಕುಮಾರ್, ರಮೇಶ್, ಅಪ್ಪಣ್ಣ, ಪ್ರತೀಪ್, ವಾಸು ಮುತ್ತಪ್ಪ, ಅಜಿತ್ ನಾಣಯ್ಯ, ಉಷ ಪ್ರಭು, ನೀಲಮ್ಮ, ಸೋಮಣ್ಣ ಮತ್ತು ವಿನಯ ಸೇರಿದಂತೆ ನೂರಾರು ಮಂದಿ ನಾಪೋಕ್ಲು ಮುಖ್ಯ ರಸ್ತೆಯಲ್ಲಿ ಘೋಷಣೆ ಕೂಗುತ್ತ, ರಸ್ತೆ ತಡೆ ನಡೆಸಿದರು.

ಹಲ್ಲೆಯ ವಿಷಯ ತಿಳಿದು ಕ್ಷಿಪ್ರ ಗತಿಯಲ್ಲಿ ಜನಸಾಗರವೇ ಸೇರಿದ್ದರಿಂದ ನಾಪೋಕ್ಲುವಿನಲ್ಲಿ ಉದ್ರಿಕ್ತ ವಾತಾವರಣ ನಿರ್ಮಾಣಗೊಂಡಿತ್ತು. ■10ನೇ ಪುಟಕ್ಕೆ

ರಾಜ್ಯದಲ್ಲಿ ಸ್ಥಿರಾಸ್ತಿ ಮಾರ್ಗಸೂಚಿ ದರ ಏ.1ರಿಂದ ಶೇ.15ರಿಂದ 20ರಷ್ಟು ಹೆಚ್ಚಳ ಸಾಧ್ಯತೆ

ಬೆಂಗಳೂರು, ಫೆ.27– ರಾಜ್ಯದಲ್ಲಿ ಸ್ಥಿರಾಸ್ತಿಗಳ ಮಾರ್ಗಸೂಚಿ ದರ ಏರಿಕೆಗೆ ಸರಕಾರ ಸಿದ್ಧತೆ ನಡೆಸಿದ್ದು, ಏಪ್ರಿಲ್ 1ರಿಂದ ಅನ್ವಯವಾಗುವಂತೆ ಶೇ.15ರಿಂದ ಶೇ.20ರಷ್ಟು ಹೆಚ್ಚಳವಾಗುವ ಸಾಧ್ಯತೆಗಳಿವೆ. ಈ ಹಿಂದೆ 2023ರ ಅಕ್ಟೋಬರ್‌ನಲ್ಲಿ ರಾಜ್ಯಾದ್ಯಂತ ಸ್ಥಿರಾಸ್ತಿಗಳ ಮಾರ್ಗಸೂಚಿ ದರ ಶೇ.30ರವರೆಗೆ ಹೆಚ್ಚಳವಾಗಿತ್ತು. ಈಗ ಎರಡೂವರೆ ವರ್ಷಗಳ ಬಳಿಕ ಮತ್ತೆ ಮಾರ್ಗಸೂಚಿ ದರ ಪರಿಷ್ಕರಣೆಗೆ ಚಿಂತನೆ ನಡೆದಿದ್ದು, ಇದರಿಂದ ವಾರ್ಷಿಕ 2,500 ಕೋಟಿ ರೂ. ಹೆಚ್ಚುವರಿ ಆದಾಯ ಸಂಗ್ರಹ ನಿರೀಕ್ಷೆ ಇದೆ.

ದಿನ ಕಳೆದಂತೆ ಭೂಮಿಯ ಮಾರುಕಟ್ಟೆ ಮೌಲ್ಯವು ಏರುಮುಖವಾಗಿರಲಿದ್ದು, ಮಾರ್ಗಸೂಚಿ ದರಕ್ಕೆ ಪೂರಕವಾಗಿ ಮಾರುಕಟ್ಟೆ ದರ ನಿರ್ಧಾರವಾಗುತ್ತದೆ. 'ಗ್ಯಾರಂಟಿ' ಯೋಜನೆಗಳಿಗೆ ಹಣ ಹೊಂದಿಸಲು ಪರದಾಡುತ್ತಿರುವ ಸರಕಾರ ಸಾಧ್ಯವಿರುವ ಎಲ್ಲ ಮೂಲಗಳಿಂದಲೂ ಸಂಪನ್ಮೂಲ ಕ್ರೋಢೀಕರಣಕ್ಕೆ ಒತ್ತು ನೀಡಿದ್ದು, ಏಪ್ರಿಲ್ 1ರಿಂದ ಜಾರಿಗೆ ಬರುವಂತೆ ಮಾರ್ಗಸೂಚಿ ದರ ಪರಿಷ್ಕರಣೆಗೆ ಸಿದ್ಧತೆ ನಡೆದಿದೆ ಎಂದು ಗೊತ್ತಾಗಿದೆ.

ಪ್ರಸಕ್ತ 2025–26ನೇ ಆರ್ಥಿಕ ವರ್ಷದಲ್ಲಿ ಮುದ್ರಾಂಕ ಮತ್ತು ನೋಂದಣಿ ಶುಲ್ಕ ಮೂಲದಿಂದ ಸರಕಾರ 28,000 ಕೋಟಿ ರೂಪಾಯಿ ಆದಾಯ ನಿರೀಕ್ಷಿಸಿದ್ದು, 25,000 ಕೋಟಿ ರೂಪಾಯಿ ಮಾತ್ರ ಸಂಗ್ರಹವಾಗುವ ■10ನೇ ಪುಟಕ್ಕೆ

ಪ್ರಭಾವಿ ಕಾಂಗ್ರೆಸ್ ನಾಯಕನ ಮಾಲೀಕತ್ವದ ಕಾರ್ಖಾನೆಯಿಂದ ರೇಷ್ಮೆ ನೂಲು ಖರೀದಿಸುವ ಸಲುವಾಗಿ ಕೆಎಸ್‌ಐಸಿಗೆ ಎಳ್ಳು–ನೀರು!

ರಾಜ್ಯ ಸರ್ಕಾರದ ವಿರುದ್ಧ ವಿಪಕ್ಷ ನಾಯಕ ಆರ್.ಅಶೋಕ್ ಆರೋಪ–ಆಕ್ರೋಶ

● ಚೈನಾ ರೇಷ್ಮೆ ಖರೀದಿಸಿ 400 ಪರ್ಸೆಂಟ್ ಕಮಿಷನ್ ಪಡೆಯುವ ಹುನ್ನಾರ ● ಕೆಎಸ್‌ಐಸಿ ಆಪೋಶನಕ್ಕೆ ಸರ್ಕಾರದ ತಯಾರಿ ● 98 ಕೋಟಿ ಲಾಭದ ಕಾರ್ಖಾನೆ ಬೀಗ ಹಾಕಿಸುವುದು ಎಷ್ಟು ಸರಿ ● ಕ್ರೀಡಾಂಗಣ ಪಕ್ಕದ ಬಾಯ್ಲರ್ ಸ್ಫೋಟವಾದರೆ ಯಾರು ಹೊಣೆ


ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಶುಕ್ರವಾರ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರು, ಫೆ.27(ಬಿಎಲ್‌ಯು)– ಕಾಂಗ್ರೆಸ್‌ನ ಪ್ರಭಾವಿ ನಾಯಕನ ಕಾರ್ಖಾನೆಯಿಂದ ರೇಷ್ಮೆ ನೂಲು ಖರೀದಿಸಲು, ಜೊತೆಗೆ ಚೈನಾ ರೇಷ್ಮೆ ಖರೀದಿಸಿ 400 ಪರ್ಸೆಂಟ್ ಕಮಿಷನ್ ಹೊಡೆಯಲು ತಿ.ನರಸೀಪುರದ ಕೆಎಸ್‌ಐಸಿ ಫಿಲೇಚರ್ ಫ್ಯಾಕ್ಟರಿಯನ್ನು ಮುಚ್ಚಿಸುವ ವ್ಯವಸ್ಥಿತ ಹುನ್ನಾರವನ್ನು ರಾಜ್ಯ ಸರ್ಕಾರ ಮಾಡಿದೆ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಗಂಭೀರ ಆರೋಪ ಮಾಡಿದ್ದಾರೆ.

ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ತಿ.ನರಸೀಪುರದ ಕೆಎಸ್‌ಐಸಿ ಫಿಲೇಚರ್ ಫ್ಯಾಕ್ಟರಿ ಮುಚ್ಚಿಸಿದರೆ ಬೇರೊಂದು ಕಡೆ ನೂಲು ತರಿಸಿಕೊಳ್ಳುವ ಅನಿವಾರ್ಯತೆ ಸೃಷ್ಟಿಸುತ್ತಾರೆ. ತರುವಾಯ ಪ್ರಭಾವಿ ಕಾಂಗ್ರೆಸ್ ನಾಯಕನ ಕಾರ್ಖಾನೆಯಿಂದ ರೇಷ್ಮೆ ನೂಲು ತರಿಸಿಕೊಳ್ಳುವ ಯೋಜನೆ ರೂಪಿಸಿದ್ದಾರೆ ಎಂದು ಅಶೋಕ್ ದೂರಿದರು.

ಚೈನಾ ರೇಷ್ಮೆಗೆ ಬೆಲೆ ತುಂಬಾ ಕಡಿಮೆ. ಈ ಸಂದರ್ಭದಲ್ಲಿ 400 ಪರ್ಸೆಂಟ್ ಕಮಿಷನ್ ಪಡೆದು, ಅಲ್ಲಿಂದ ಖರೀದಿ ಮಾಡುವ ಹುನ್ನಾರ ಕೂಡ ರೂಪಿಸಿದ್ದಾರೆ. ಕಾಂಗ್ರೆಸ್ ನಾಯಕನೊಬ್ಬನ ಹಿತರಕ್ಷಣೆಗಾಗಿ ಹಾಗೂ ಚೈನಾ ರೇಷ್ಮೆಯಿಂದ ಭಾರೀ ಕಮಿಷನ್ ದೃಷ್ಟಿಯಿಂದ ಐತಿಹಾಸಿಕ ಹಿನ್ನೆಲೆ ಇರುವ ಈ ಕಾರ್ಖಾನೆ ಮುಳುಗಿಸಿ, ಅದಕ್ಕೆ ಎಳ್ಳು ನೀರು ಬಿಡುತ್ತಿದ್ದಾರೆ ಎಂದು ದೂರಿದರು.

ಕಾರ್ಖಾನೆಯು 13 ಎಕರೆ ಪ್ರದೇಶದಲ್ಲಿದ್ದು, ಇದರಲ್ಲಿ ಸುಮಾರು 6 ಎಕರೆಯನ್ನು ಕ್ರೀಡಾಂಗಣಕ್ಕೆ ನೀಡಿದ್ದಾರೆ. ಆ ಮೂಲಕ ಕಾರ್ಖಾನೆಯ ಅರ್ಧ ಜಾಗವನ್ನು ಆಪೋಶನ ಮಾಡಿದ್ದಾರೆ. ಮುಂದೊಂದು ದಿನ ಕ್ರೀಡಾಂಗಣ ಉಳಿಸಿ, ಕಾರ್ಖಾನೆ ಮುಚ್ಚಿಸಿ ಎಂಬ ಅಭಿಯಾನ ಆರಂಭಿಸಿ ಉಳಿದ ಜಾಗವನ್ನು ವಶಕ್ಕೆ ಪಡೆದು ಇಡೀ ಕೆಎಸ್‌ಐಸಿಗೆ ಕಂಟಕ ಪ್ರಾಯರಾಗಲಿದ್ದಾರೆ ಎಂದು ಆಪಾದಿಸಿದರು.

ಕಾರ್ಖಾನೆಯಲ್ಲಿ ಬಾಯ್ಲರ್ ಇದ್ದು, ಸದಾ ತಾಪಮಾನ ಹೆಚ್ಚಾಗಿರುತ್ತದೆ. ಅಲ್ಲದೆ ರೇಷ್ಮೆ ಗೂಡು ಬೇಯಿಸುವುದರಿಂದ ಕೆಟ್ಟ ರಸಾಯನಿಕ ವಾಸನೆ ಬರುತ್ತದೆ. ಈಗ ಅಲ್ಲಿರುವ ಮರಗಳು ತಾಪಮಾನ ಹೀರಿಕೊಳ್ಳುತ್ತಿವೆ. ಶ್ರೀಗಂಧ, ತೇಗ, ಹೊನ್ನೆ ಸೇರಿದಂತೆ ಹಲವು ಅಪರೂಪದ, ಕೋಟ್ಯಾಂತರ ರೂಪಾಯಿ ■10ನೇ ಪುಟಕ್ಕೆ

ಮೈಸೂರು ಮಹಾರಾಜರನ್ನು ಕಂಡರೆ ಕಾಂಗ್ರೆಸ್ ನಾಯಕರು ಕೆಂಡ ಕಾರುತ್ತಾರೆ

ದೇಶದಲ್ಲೇ ಮಾದರಿ ಮೈಸೂರು ನಿರ್ಮಾಣ ಮಾಡಿದ ಮೈಸೂರು ಮಹಾರಾಜರನ್ನು ಕಂಡರೆ ಕಾಂಗ್ರೆಸ್ ನಾಯಕರು ಕೆಂಡಕಾರುತ್ತಾರೆ ಎಂದು ಅಶೋಕ್ ಹೇಳಿದರು.

ಮೈಸೂರು ಮಹಾರಾಜರ ಬಗ್ಗೆ ಸಿಎಂ ಸಿದ್ದರಾಮಯ್ಯ ಹಾಗೂ ಸಚಿವ ಡಾ.ಮಹದೇವಪ್ಪ, ಇದೂವರೆಗೆ ನೀಡಿರುವ ಹೇಳಿಕೆಗಳು ಇವರ ವರ್ತನೆಯನ್ನು ತೋರಿಸುತ್ತದೆ ಎಂದು ತಿಳಿಸಿದರು.

ಕೆಆರ್‌ಎಸ್ ನಿರ್ಮಾಣ ಮಾಡಿದವರು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು, ಆದರೆ ಡಾ.ಮಹದೇವಪ್ಪ ಅವರು ಕೆಆರ್‌ಎಸ್ ನಿರ್ಮಾಣವಾಗಲು ಟಿಪ್ಪು ಕಾರಣ ಎಂದು ಹೇಳಿಬಿಟ್ಟರು. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರನ್ನು ಮೀರಿಸುವ ಅಭಿವೃದ್ಧಿ ಮಾಡಿದ್ದೇನೆ ಎಂದು ಸಿದ್ದರಾಮಯ್ಯ ಕೂಡ ಹೇಳುತ್ತಾರೆ. ಅಲ್ಲದೆ ಮೈಸೂರು ಮಹಾರಾಜರ ಜನಪರ ಯೋಜನೆಗಳನ್ನು ಮುಳುಗಿಸುವ ಹುನ್ನಾರ ರೂಪಿಸಿದ್ದಾರೆ ಎಂದು ಅಶೋಕ್ ಆರೋಪಿಸಿದರು.

ಕ್ರೀಡಾಂಗಣ ನಿರ್ಮಿಸಲು ಮುಂದಾದರೆ ತಿ.ನರಸೀಪುರದಿಂದ ಬೆಂಗಳೂರಿಗೆ ಪಾದಯಾತ್ರೆ

ಸರ್ಕಾರಕ್ಕೆ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಎಚ್ಚರಿಕೆ


ತಿ.ನರಸೀಪುರದ ಕೆಎಸ್‌ಐಸಿ ಆವರಣದಲ್ಲಿ ಕ್ರೀಡಾಂಗಣ ನಿರ್ಮಾಣ ವಿರೋಧಿಸಿ ಕಾರ್ಮಿಕರ ಪ್ರತಿಭಟನಾ ಸ್ಥಳಕ್ಕೆ ಶುಕ್ರವಾರ ಭೇಟಿ ನೀಡಿದ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಅವರು ಹೋರಾಟಕ್ಕೆ ಬೆಂಬಲ ಸೂಚಿಸಿದರು.

ತಿ.ನರಸೀಪುರ, ಫೆ.27(ಬಿಎಲ್‌ಯು, ಎಸ್‌ಕೆ)– ತಿ.ನರಸೀಪುರದ ರೇಷ್ಮೆ ನೂಲು ತೆಗೆಯುವ ಫ್ಯಾಕ್ಟರಿ ಆವರಣದಲ್ಲಿನ ಉದ್ದೇಶಿತ ಕ್ರೀಡಾಂಗಣ ಯೋಜನೆ ಕೈ ಬಿಡದಿದ್ದರೆ ತಿ.ನರಸೀಪುರದಿಂದ ಬೆಂಗಳೂರಿಗೆ ಪಾದಯಾತ್ರೆ ಕೈಗೊಳ್ಳಲಾಗುವುದು ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ್, ರಾಜ್ಯ ಸರ್ಕಾರಕ್ಕೆ ಎಚ್ಚರಿಸಿದ್ದಾರೆ.

ತಿ.ನರಸೀಪುರದ ಭೈರಾಪುರದಲ್ಲಿರುವ ರೇಷ್ಮೆ ನೂಲು ತೆಗೆಯುವ ಫ್ಯಾಕ್ಟರಿ ಆವರಣದಲ್ಲಿ ಕ್ರೀಡಾಂಗಣ ವಿರೋಧಿಸಿ ಇಲ್ಲಿನ ನೌಕರರು ನಡೆಸುತ್ತಿರುವ ಪ್ರತಿಭಟನೆ ಬೆಂಬಲಿಸಿ ಮಾತನಾಡಿದ ಅವರು, ಮಾರ್ಚ್ 6ರಿಂದ ಆರಂಭವಾಗುವ ವಿಧಾನಸಭಾ ಅಧಿವೇಶನದಲ್ಲಿ ಕೂಡ ಈ ವಿಚಾರವಾಗಿ ಧ್ವನಿ ಎತ್ತಲಾಗುವುದು. ಒಂದು ವೇಳೆ ಸರ್ಕಾರ ತನ್ನ ಮೊಂಡುತನ ಮುಂದುವರೆಸಿದರೆ ಸದನದ ಹೊರಗೂ ಹೋರಾಟ ತೀವ್ರಗೊಳಿಸುತ್ತೇವೆ ಎಂದು ಎಚ್ಚರಿಕೆ ನೀಡಿದರು.

ತಿ.ನರಸೀಪುರ, ಮೈಸೂರು, ಚನ್ನಪಟ್ಟಣದ ಕೆಎಸ್‌ಐಸಿ ಕಾರ್ಖಾನೆಯಲ್ಲಿ 2 ಸಾವಿರಕ್ಕೂ ಹೆಚ್ಚು ಕಾರ್ಮಿಕರಿದ್ದಾರೆ. ಈಗ ಈ ಮೂರು ಕಾರ್ಖಾನೆಗಳ ಮುಚ್ಚಿ ಸರ್ಕಾರ ಇಲ್ಲಿನ ಕಾರ್ಮಿಕ ಕುಟುಂಬವನ್ನು ಬೀದಿಗೆ ತರುತ್ತಿದೆ. ಕಾರ್ಮಿಕರ ಕಲ್ಯಾಣಕ್ಕೆ ಸರ್ಕಾರ ಮುಂದಾಗಬೇಕೇ ಹೊರತು, ಕಂಟಕವಾಗಬಾರದು ಎಂದು ಅಶೋಕ್ ಸಲಹೆ ನೀಡಿದರು. ಸರ್ಕಾರದ ಈ ಕ್ರಮದ ಬಗ್ಗೆ ಕಾರ್ಮಿಕರು ಆತಂಕಗೊಳ್ಳಬಾರದು. ನಿಮ್ಮ ಹೋರಾಟ ನೀವು ಮುಂದುವರೆಸಿ, ನಾವು ಕೂಡ ನಮ್ಮ ಹಂತದಲ್ಲಿ ಹೋರಾಟ ಮಾಡುತ್ತೇವೆ ಎಂದು ಭರವಸೆ ನೀಡಿದರು.

ಬಿಎಸ್‌ವೈ ಅವರಿಗೆ ಜನ್ಮದಿನದ ಶುಭಾಶಯ



ಶಿವಮೊಗ್ಗ ಜಿಲ್ಲೆ ಶಿಕಾರಿಪುರದಲ್ಲಿ ಶುಕ್ರವಾರ ಆಯೋಜಿಸಿದ್ದ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರ ಅದ್ಧೂರಿ ಹುಟ್ಟುಹಬ್ಬ ಸಮಾರಂಭದಲ್ಲಿ ಅವರಿಗೆ ಮೈಸೂರು ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಶುಭಾಶಯ ಕೋರಿದರು.



ಬಿಜೆಪಿ ಮೈಸೂರು ನಗರಾಧ್ಯಕ್ಷ ಹಾಗೂ ಚಾಮರಾಜ ಕ್ಷೇತ್ರದ ಮಾಜಿ ಶಾಸಕ ಎಲ್.ನಾಗೇಂದ್ರ, ಶಿಕಾರಿಪುರದಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರನ್ನು ಅಭಿನಂದಿಸಿ, ಹುಟ್ಟುಹಬ್ಬದ ಶುಭಾಶಯ ಕೋರಿದರು.



ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪನವರ ಹುಟ್ಟುಹಬ್ಬದ ಪ್ರಯುಕ್ತ ಶಿಕಾರಿಪುರದಲ್ಲಿ ನಡೆದ ಅದ್ದೂರಿ ಅಭಿನಂದನಾ ಸಮಾರಂಭದಲ್ಲಿ ಅವರನ್ನು ಮೈಸೂರು ಜಿಲ್ಲಾ ಬಿಜೆಪಿ ಮಾಜಿ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಅಭಿನಂದಿಸಿ, ಶುಭಾಶಯ ತಿಳಿಸಿದರು. ಈ ವೇಳೆ ಶಿವಮೊಗ್ಗದ ಸಂಸದ ಬಿ.ವೈ.ರಾಘವೇಂದ್ರ, ಶಂಕರ್ ರಾವ್, ಎಸ್.ಸಿ.ಅಶೋಕ್, ಮಹೇಶ್, ಹೇಮಾ ಶಂಕರ್, ಗುರುಪಾದಸ್ವಾಮಿ ಮತ್ತಿತರರಿದ್ದರು.



ಶಿವಮೊಗ್ಗದ ಶಿಕಾರಿಪುರದಲ್ಲಿ ಮಾಜಿ ಸಿಎಂ ಯಡಿಯೂರಪ್ಪನವರನ್ನು ಮೈಸೂರಿನ ಬಿಜೆಪಿ ಮುಖಂಡರಾದ ಖ್ಯಾತ ವಕೀಲ ಎಸ್.ಅರುಣ್ ಕುಮಾರ್, ಕೇಬಲ್ ಮಹೇಶ್, ದೂರ ರಾಜಣ್ಣ, ಲೋಹಿತ್ ದೊರೆಸ್ವಾಮಿ ಮತ್ತಿತರರು ಅಭಿನಂದಿಸಿ, ಹುಟ್ಟುಹಬ್ಬದ ಶುಭಾಶಯ ಕೋರಿದರು.



ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರ ಹುಟ್ಟುಹಬ್ಬ ಸಮಾರಂಭದಲ್ಲಿ ಅವರಿಗೆ ಮುಡಾ ಮಾಜಿ ಸದಸ್ಯೆ ಎಸ್.ಲಕ್ಷ್ಮೀದೇವಿ, ಬಿಜೆಪಿ ಮಹಿಳಾ ಘಟಕದ ರೇಣುಕಾರಾಜು, ತಿ.ನರಸೀಪುರ ಮುಖಂಡರಾದ ಮಹದೇವಸ್ವಾಮಿ, ಭಗವಾನ್, ಶಿವರಾಜು ಮತ್ತಿತರರು ಅಭಿನಂದಿಸಿ, ಶುಭಾಶಯ ಕೋರಿದರು.

ಆಶೀರ್ವಾದ



ಮೈಸೂರು ಜಿಲ್ಲೆ ಜೆಡಿಎಸ್ ನೂತನ ಅಧ್ಯಕ್ಷರಾದ ಮಾಜಿ ಶಾಸಕ ಅಶ್ವಿನ್ ಕುಮಾರ್ ಹಾಗೂ ನಗರ ಅಧ್ಯಕ್ಷರಾದ ನಗರ ಪಾಲಿಕೆ ಮಾಜಿ ಸದಸ್ಯ ಎಸ್‌ಬಿಎಂ ಮಂಜು ಅವರು ಮಾಜಿ ಪ್ರಧಾನಿ ಹಾಗೂ ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾದ ಹೆಚ್.ಡಿ.ದೇವೇಗೌಡರನ್ನು ಭೇಟಿಯಾಗಿ, ಆಶೀರ್ವಾದ ಪಡೆದರು.

ಬೆಂಗಳೂರಿನಲ್ಲಿ ರಾಬರ್ಟ್ ವಾದ್ರಾ

ಇಸ್ಕಾನ್ ದೇವಾಲಯಕ್ಕೆ ಭೇಟಿ, ಮಸೀದಿಯಲ್ಲಿ ಪ್ರಾರ್ಥನೆ, ಇಫ್ತಾರ್ ಕೂಟದಲ್ಲಿ ಭಾಗಿ!



ಬೆಂಗಳೂರು: ಸಂಸದೆ ಪ್ರಿಯಾಂಕಾ ವಾದ್ರಾ ಪತಿ ರಾಬರ್ಟ್ ವಾದ್ರಾ ಬೆಂಗಳೂರಿನಲ್ಲಿ ಮೊಕ್ಕಾಂ ಹೂಡಿದ್ದಾರೆ. ಕಳೆದ ಎರಡು ದಿನಗಳಿಂದ ಕರ್ನಾಟಕ ಕಾಂಗ್ರೆಸ್ ಹಿರಿಯ ನಾಯಕನ ಪುತ್ರನ ಜೊತೆ ಸಿಟಿ ರೌಂಡ್ಸ್ ಹೊಡೆಯುತ್ತಿದ್ದಾರೆ.

ಖಾಸಗಿ ಕಾರ್ಯಕ್ರಮದ ನಿಮಿತ್ತ ಬೆಂಗಳೂರಿಗೆ ಆಗಮಿಸಿರುವ ರಾಬರ್ಟ್ ವಾದ್ರಾ, ನಿನ್ನೆ (ಫೆಬ್ರವರಿ 25) ಇಸ್ಕಾನ್ ದೇವಸ್ಥಾನಕ್ಕೆ ಭೇಟಿ ನೀಡಿದ್ದರು. ಬಳಿಕ ರಂಜಾನ್ ಮಾಸ ನಿಮಿತ್ತ ಬೆಂಗಳೂರಿನ ಮಸೀದಿಯಲ್ಲಿ ಪ್ರಾರ್ಥನೆ ಸಲ್ಲಿಸಿದ್ದಾರೆ.

ನಂತರ ಖಾಸಗಿ ಹೋಟೆಲ್‌ನಲ್ಲಿ ಹಿರಿಯ ನಾಯಕನ ಜೊತೆ ಮಾತುಕತೆ ನಡೆಸಿದ್ದರು. ಇನ್ನು ಕೆಲ ಹಿರಿಯ ನಾಯಕರು ಭೇಟಿಗೆ ಸಮಯ ಕೇಳಿದ್ದಾರೆ ಎನ್ನುವ ಮಾಹಿತಿ ತಿಳಿದುಬಂದಿದ್ದು, ಇದು ಕಾಂಗ್ರೆಸ್ ಮನೆಯಲ್ಲಿ ಭಾರಿ ಚರ್ಚೆಗೆ ಗ್ರಾಸವಾಗಿದೆ.

ಮಾಜಿ ಸಿಎಂ ಬಿಎಸ್‌ವೈ ಹುಟ್ಟುಹಬ್ಬ ಸಡಗರದಿಂದ ಆಚರಣೆ





ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ 84ನೇ ಹುಟ್ಟುಹಬ್ಬದ ಅಂಗವಾಗಿ ಮೈಸೂರಿನ ಅಗ್ರಹಾರದ 101 ಗಣಪತಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿ ಸಾರ್ವಜನಿಕರಿಗೆ ಸಿಹಿ ವಿತರಿಸಲಾಯಿತು. ಮತ್ತೊಂದು ಚಿತ್ರದಲ್ಲಿ ಬಿಜೆಪಿ ಕಚೇರಿ ಮುಂಭಾಗ ಶಾಸಕ ಟಿ.ಎಸ್.ಶ್ರೀವತ್ಸ ಮತ್ತು ಮಾಜಿ ಸಂಸದ ಪ್ರತಾಪ್‌ಸಿಂಹ ಸಿಹಿ ಹಂಚಿಕೊಂಡರು.

ಮೈಸೂರು,ಫೆ.27(ಜಿಎ)–ಮೈಸೂರಿನಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ 84ನೇ ಹುಟ್ಟು ಹಬ್ಬವನ್ನು ಬಿಜೆಪಿಯ ಮುಖಂಡರು, ಕಾರ್ಯಕರ್ತರು ಸಂಭ್ರಮ ಸಡಗರದಿಂದ ಆಚರಿಸಿದರು.

ನಗರದ ಅಗ್ರಹಾರದಲ್ಲಿರುವ 101 ಗಣಪತಿ ದೇವಸ್ಥಾನದಲ್ಲಿ ಶಾಸಕ ಟಿ.ಎಸ್. ಶ್ರೀವತ್ಸ ನೇತೃತ್ವದಲ್ಲಿ ಬಿ.ಎಸ್.ಯಡಿಯೂರಪ್ಪ ಅವರ ಹೆಸರಿನಲ್ಲಿ ಕೆ.ಆರ್. ಕ್ಷೇತ್ರದ ಬಿಜೆಪಿ ಕಾರ್ಯಕರ್ತರು ಬಿಎಸ್‌ವೈ ಫೋಟೋ ಹಿಡಿದು ವಿಶೇಷ ಪೂಜೆ ಸಲ್ಲಿಸಿ, ಸಾರ್ವಜನಿಕರಿಗೆ ಸಿಹಿ ವಿತರಿಸಿದರು.


ನಂತರ ಶಾಸಕ ಶ್ರೀವತ್ಸ ಮಾತನಾಡಿ, ಕರ್ನಾಟಕದಲ್ಲಿ ಬಿಜೆಪಿ ಅಧಿಕಾರದ ರುಚಿ ಪಡೆದುಕೊಳ್ಳಲು ಬಿ.ಎಸ್.ಯಡಿಯೂರಪ್ಪ ಅವರೇ ಮುಖ್ಯ ಕಾರಣ. ಭಾರತೀಯ ಜನತಾ ಪಕ್ಷದ ಧೀಮಂತ ನಾಯಕರಾದ ಅವರು ಗೆಲುವು ಮಾತ್ರ ಸ್ವೀಕರಿಸುತ್ತಿರಲಿಲ್ಲ. ಕಾರ್ಯಕರ್ತರನ್ನು ಗಣನೆಗೆ ತೆಗೆದುಕೊಳ್ಳುತ್ತಿದ್ದರು. ಮುಖ್ಯಮಂತ್ರಿಗಳಾಗಿ ಭಾಗ್ಯಲಕ್ಷ್ಮಿ ಬಾಂಡ್, ರೈತರಿಗೆ ಕೃಷಿ ಬಜೆಟ್ ಮಂಡನೆ ಮಾಡಿದ್ದಾರೆ ಅವರು ಮತ್ತಷ್ಟು ವರ್ಷ ಆರೋಗ್ಯವಾಗಿದ್ದು ನಮಗೆಲ್ಲ ಮಾರ್ಗದರ್ಶನ ನೀಡಬೇಕು. ಈ ಹಿನ್ನೆಲೆಯಲ್ಲಿ ಆರೋಗ್ಯ ವೃದ್ಧಿಸಬೇಕು ಎಂಬ ಉದ್ದೇಶದಿಂದ ವಿಶೇಷ ಪೂಜೆ ಸಲ್ಲಿಸಿದ್ದೇವೆ ಎಂದರು.

ಈ ಸಂದರ್ಭದಲ್ಲಿ ಮಾಜಿ ಮೇಯರ್ ಶಿವಕುಮಾರ್, ಕೆ.ಆರ್.ಕ್ಷೇತ್ರದ ಬಿಜೆಪಿ ಅಧ್ಯಕ್ಷ ಗೋಪಾಲ್ ರಾಜೇ ಅರಸ್, ಪ್ರಧಾನ ಕಾರ್ಯದರ್ಶಿಗಳಾದ ಜೈ ಶಂಕರ್ ಜಯರಾಮ್, ನಗರ ಪ್ರಧಾನ ಕಾರ್ಯದರ್ಶಿ ಸೋಮ ಸುಂದರ. ಬಿ.ಎಂ.ರಘು, ಪಾಲಿಕೆ ಮಾಜಿ ಸದಸ್ಯರಾದ ಮಾ.ವಿ. ರಾಮ್‌ಪ್ರಸಾದ್. ಸೌಮ್ಯ ಉಮೇಶ್, ಪಾರ್ಥಸಾರಥಿ, ಬಿ.ವಿ.ಮಂಜುನಾಥ್, ಚಂಪಕಾ, ಬಿಜೆಪಿ ಮುಖಂಡರಾದ ವಿಶ್ವೇಶ್ವರಯ್ಯ, ರಾಕೇಶ್ ಗೌಡ, ಪ್ರದೀಪ್ ಕುಮಾರ್, ಗೋಕುಲ್ ಗೋವರ್ಧನ್, ನಿಶಾಂತ್, ಬಿಲ್ಲಯ್ಯ ನವೀನ್, ಗಿರಿಶ್ ಗೌಡ, ಹೇಮಂತ, ಸಂದೀಪ ಕೀರ್ತಿ, ಮಂಜುನಾಥ್, ರೇಖಾ, ಕಾವೇರಿ, ನಾಗಶ್ರೀ, ಜಯಂತಿ ಮತ್ತಿತರರು ಪಾಲ್ಗೊಂಡಿದ್ದರು.

ಪಕ್ಷದ ವತಿಯಿಂದ ಆಚರಣೆ : ನಗರ ಮತ್ತು ಗ್ರಾಮಾಂತರ ಬಿಜೆಪಿ ವತಿಯಿಂದ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹುಟ್ಟುಹಬ್ಬವನ್ನು ಮೈಸೂರಿನಲ್ಲಿರುವ ಬಿಜೆಪಿ ಕಚೇರಿ ಮುಂಭಾಗ ಆಚರಿಸಲಾಯಿತು.

ಬಿಎಸ್‌ವೈ ಅವರಿಗೆ ಜೈಕಾರ ಕೂಗಿ ಪಟಾಕಿ ಸಿಡಿಸಿ, ನಂತರ ಎಲ್ಲರೂ ಸಿಹಿ ಹಂಚಿಕೊಂಡು ಹುಟ್ಟುಹಬ್ಬವನ್ನು ಸಂಭ್ರಮಿಸಿದರು. ಈ ಸಂದರ್ಭದಲ್ಲಿ ಮಾಜಿ ಸಂಸದ ಪ್ರತಾಪ್ ಸಿಂಹ, ಪರಿಕ್ಷಿತ್ ರಾಜ ಅರಸ್, ರಾಜ್ಯ ಅಲ್ಪಸಂಖ್ಯಾತ ಮೋರ್ಚಾ ರಾಜ್ಯಾಧ್ಯಕ್ಷ ಅನಿಲ್ ಥಾಮಸ್, ಯುವ ಮೋರ್ಚಾ ಅಧ್ಯಕ್ಷ ರಾಕೇಶ್ ಗೌಡ, ಚಾಮರಾಜ ಕ್ಷೇತ್ರ ಅಧ್ಯಕ್ಷ ದಿನೇಶ್ ಗೌಡ, ಚಾಮುಂಡೇಶ್ವರಿ ನಗರ ಮಂಡಲ ಅಧ್ಯಕ್ಷ ರಾಕೇಶ್ ಭಟ್, ಪಡುವಾರಹಳ್ಳಿ ರಾಮ ಕೃಷ್ಣ, ಜೋಗಿ ಮಂಜು, ವಿಶ್ವೇಶ್ವರಯ್ಯ, ಪ್ರಧಾನ ಕಾರ್ಯದರ್ಶಿ ಜಯರಾಮ್, ಕಾರ್ತಿಕ್ ಮರಿಯಪ್ಪ, ಪುನೀತ್, ಲೀಲಾ ಶೆಣೈ, ಸವಿತಾ ಗೌಡ ಮತ್ತಿತರರು ಉಪಸ್ಥಿತರಿದ್ದರು.

ಕೇಂದ್ರ, ರಾಜ್ಯ ಸರ್ಕಾರದ ವ್ಯಾಪ್ತಿಯ ಖಾಲಿ ಹುದ್ದೆಗಳ ಭರ್ತಿಗೆ ಆಗ್ರಹಿಸಿ ಎಐಡಿವೈಒ ಪ್ರತಿಭಟನೆ



ಮೈಸೂರಿನ ಚಿಕ್ಕಗಡಿಯಾರದ ಎದುರು ಎಐಡಿವೈಒ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಮೈಸೂರು, 27(ಎಂಕೆ)– ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತಮ್ಮ ತಮ್ಮ ವ್ಯಾಪ್ತಿಯ ವಿವಿಧ ಇಲಾಖೆಗಳಲ್ಲಿನ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವಂತೆ ಆಗ್ರಹಿಸಿ ಎಐಡಿವೈಒ(ಆಲ್ ಇಂಡಿಯಾ ಡೆಮಾಕ್ರೆಟಿಕ್ ಯೂತ್ ಆರ್ಗನೈಸೇಷನ್) ವತಿಯಿಂದ ಶುಕ್ರವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಚಿಕ್ಕಗಡಿಯಾರದ ಎದುರು ಜಮಾವಣೆಗೊಂಡ ನೂರಾರು ಮಂದಿ, ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಲಕ್ಷಾಂತರ ಹುದ್ದೆಗಳು ಖಾಲಿ ಇದ್ದರೂ ನೇಮಕಾತಿ ಮಾಡುತ್ತಿಲ್ಲ ಎಂದು ಆಕ್ರೋಶ ಹೊರಹಾಕಿದರು.

ನಿರಂತರ ಹೋರಾಟದ ಫಲವಾಗಿ ಮುಖ್ಯಮಂತ್ರಿಗಳು ಕಳೆದ ಡಿಸೆಂಬರ್‌ನಲ್ಲಿ 56,432 ಹುದ್ದೆಗಳ ಭರ್ತಿಗೆ ಹಾಗೂ ಬೆಳಗಾವಿ ಅಧಿವೇಶನದಲ್ಲಿ 24,300 ಹುದ್ದೆಗಳ ನೇಮಕಾತಿಗೆ ಆರ್ಥಿಕ ಇಲಾಖೆಯಿಂದ ಅನುಮೋದನೆ ದೊರೆತಿದೆ ಎಂದು ಘೋಷಿಸಿದ್ದರು. ಆದರೆ, ಘೋಷಣೆಯಾಗಿ ಹಲವು ತಿಂಗಳು ಕಳೆದರೂ ನೇಮಕಾತಿ ಪ್ರಕ್ರಿಯೆ ಆರಂಭವಾಗಲಿಲ್ಲ ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಈಗ ಮತ್ತೆ ಸಂಪುಟ ಸಭೆಯಲ್ಲಿ 56,000 ಹುದ್ದೆಗಳ ನೇಮಕಾತಿಗೆ ಅನುಮೋದನೆ ದೊರೆತಿದೆ ಎಂದು ಸರ್ಕಾರ ಹೇಳುತ್ತಿದೆ. ಆದರೆ, ಇದು ಕೇವಲ ಬಾಯಿ ಮಾತಾಗದೇ ಕೂಡಲೇ ನೇಮಕಾತಿ ಅಧಿಸೂಚನೆ ಹೊರಡಿಸಬೇಕು. ಜೊತೆಗೆ ಖಾಲಿ ಇರುವ ಎಲ್ಲಾ 2,84,881 ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಭ್ರಷ್ಟಾಚಾರ ನಿಲ್ಲಿಸಿ: ನೇಮಕಾತಿಯಲ್ಲಿ ಪಾರದರ್ಶಕತೆ ಕಾಪಾಡಬೇಕು. ಭ್ರಷ್ಟಾಚಾರ ಇರಬಾರದು. ನೇಮಕಾತಿಯ ವಾರ್ಷಿಕ ಕ್ಯಾಲೆಂಡರ್ ಬಿಡುಗಡೆ ಮಾಡಬೇಕು. ಅರ್ಜಿ ಶುಲ್ಕ ಕಡಿತ ಮಾಡಬೇಕು. ಶಿಕ್ಷಣ ಕ್ಷೇತ್ರದಲ್ಲಿ ಉದ್ಯೋಗಗಳನ್ನು ನಾಶ ಮಾಡುವ ಕೆಪಿಎಸ್ ಮ್ಯಾಗ್ನೆಟ್ ಶಾಲೆ ಯೋಜನೆ ಕೈಬಿಡಬೇಕು ಎಂದು ಆಗ್ರಹಿಸಿದರು.

ಮನವಿ ಸಲ್ಲಿಕೆ: ಬಳಿಕ ಕಳೆದ ನವೆಂಬರ್ ತಿಂಗಳಿಂದ ಫೆಬ್ರವರಿವರೆಗೆ ಮೈಸೂರಿನ ಯುವಜನರು, ಉದ್ಯೋಗಾಕಾಂಕ್ಷಿಗಳು ಮತ್ತು ಸಾರ್ವಜನಿಕರಿಂದ ಸಂಗ್ರಹಿಸಿದ 5167 ಸಹಿಗಳಿರುವ ಮನವಿ ಪತ್ರವನ್ನು ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ್ ರೆಡ್ಡಿಯವರ ಮೂಲಕ ಕೇಂದ್ರ ಹಾಗೂ ರಾಜ್ಯ ಸರ್ಕಾರಕ್ಕೆ ಸಲ್ಲಿಸಲಾಯಿತು.

ಎಐಡಿವೈಒ ಜಿಲ್ಲಾಧ್ಯಕ್ಷ ಟಿ.ಆರ್.ಸುನೀಲ್, ಕಾರ್ಯದರ್ಶಿ ಎಸ್.ಸುಮಾ, ಉದ್ಯೋಗ ಆಕಾಂಕ್ಷಿಗಳ ಹೋರಾಟ ಸಮಿತಿಯ ಜಿಲ್ಲಾ ಸಂಚಾಲಕಿ ನೀತುಶ್ರೀ, ಸದಸ್ಯರಾದ ಪೂರ್ಣಿಮಾ, ರಣಜಿತ್ ಹಾಗೂ ಉದ್ಯೋಗ ಆಕಾಂಕ್ಷಿಗಳಾದ ಮಹೇಶ್, ಮೋಹನ್, ರವಿಚಂದ್ರನ್, ಲೋಕೇಶ್, ಆಕಾಶ್, ಶಿವಕುಮಾರ್, ಚಂದ್ರೇಶ್, ಶಶಿಕುಮಾರ್, ಕುಮಾರ್, ರಕ್ಷಿತಾ, ಸುಶ್ಮಿತಾ ಮತ್ತಿತರರಿದ್ದರು.

ಸಿಎಸ್‌ಆರ್ ಅನುದಾನದಡಿ ವಿಶೇಷ ಚೇತನರಿಗೆ ತ್ರಿಚಕ್ರ ವಾಹನ ವಿತರಣೆ



ಮೈಸೂರು,ಫೆ.27(ಎಂಟಿವೈ)– ಖಾಸಗಿ ಸಂಸ್ಥೆಗಳು ಸಿಎಸ್‌ಆರ್ ಅನುದಾನದಲ್ಲಿ ವಿಶೇಷ ಚೇತನರಿಗೆ ಅಗತ್ಯ ಸೌಲಭ್ಯ ಸೇರಿದಂತೆ ಸಮಾಜಮುಖಿ ಕೆಲಸಗಳಿಗೆ ಮುಂದಾಗಬೇಕು ಎಂದು ಶಾಸಕ ತನ್ವೀರ್ ಸೇಠ್ ಸಲಹೆ ನೀಡಿದ್ದಾರೆ.

ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಜಿಲ್ಲಾ ಡಳಿತ, ಜಿಪಂ, ಕಾರ್ಮಿಕ ಇಲಾಖೆ, ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ, ವಿಕಲಚೇತನರು ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆ ಹಾಗೂ ವಿವಿಧ ಕಂಪನಿಗಳ ಸಹಯೋಗದಲ್ಲಿ ನಡೆದ ಸಿಎಸ್‌ಆರ್ ಅನುದಾನದಡಿ ವಿಶೇಷ ಚೇತನರಿಗೆ ತ್ರಿಚಕ್ರ ವಾಹನ ವಿತರಣಾ ಕಾರ್ಯಕ್ರಮದಲ್ಲಿ ವಿಶೇಷ ಚೇತನರಿಗೆ ತ್ರಿಚಕ್ರ ವಾಹನ ವಿತರಿಸಿ ಮಾತನಾಡಿದ ಅವರು, ವಿಶೇಷ ಚೇತನರಿಗಾಗಿ ವಿನ್ಯಾಸಗೊಳಿಸಿರುವ ವಾಹನಗಳು ವಿಶೇಷ ಚೇತನರು ಸ್ವಾವಲಂಭಿಗಳಾಗಿ ಜೀವನ ರೂಪಿಸಿಕೊಳ್ಳಲು ಸಹಕಾರಿ ಯಾಗುತ್ತವೆ. ತ್ರಿಚಕ್ರ ವಾಹನಗಳ ವಿನ್ಯಾಸ ಮಾಡಿರುವುದನ್ನು ವಿಶೇಷ ಚೇತನರಿಗೆ ಪೂರಕವಾಗಿದೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಯೋಜನೆಗಳನ್ನು ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ 22 ಮಂದಿ ವಿಶೇಷ ಚೇತನರಿಗೆ ತ್ರಿಚಕ್ರ ವಾಹನ ನೀಡಲಾಯಿತು. ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಜಿ. ಲಕ್ಷ್ಮೀಕಾಂತ್ ರೆಡ್ಡಿ, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆಯ ಕಾರ್ಖಾನೆ, ಬಾಯ್ಲರ್‌ಗಳು, ಕಾರ್ಖಾನೆಗಳ ಜಂಟಿ ನಿರ್ದೇಶಕ ಹೆಚ್.ಎಸ್.ನರೇಂದ್ರಬಾಬು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉಪ ನಿರ್ದೇಶಕ ಬಿ.ಬಸವರಾಜು, ಕಾರ್ಖಾನೆ ಬಾಯ್ಲರ್‌ಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆಯ ಉಪನಿರ್ದೇಶಕ ಎಂ.ಎಸ್. ಮಹದೇವ್ರು, ಸಹಾಯಕ ಕಾರ್ಮಿಕ ಆಯುಕ್ತರಾದ ಎಲ್.ಲಲಿತಾ ಬಾಯಿ, ಕಾರ್ಮಿಕ ಅಧಿಕಾರಿ ಚೇತನ್ ಕುಮಾರ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

28.2.2026 ಶನಿವಾರ, ಮಳೆ ನಕ್ಷತ್ರ: ಶತಭಿಷ 19.02.2026 ರಿಂದ 03.03.2026
ವಿಶ್ವಾವಸು ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಶುಕ್ಲ ಪಕ್ಷ,
ತಿಥಿ: ದ್ವಾದಶಿ, ನಕ್ಷತ್ರ: ಪುನರ್ವಸು, ರಾಹುಕಾಲ: ಬೆಳಗ್ಗೆ 9ರಿಂದ 10.30ರವರೆಗೆ

- **ಶ್ರೀ ಪ್ರಸನ್ನ ನಂಜುಂಡೇಶ್ವರಸ್ವಾಮಿ ದೇವಸ್ಥಾನ, ಧಾರ್ಮಿಕ ದತ್ತಿ ಇಲಾಖೆ :** ಶ್ರೀ ಪ್ರಸನ್ನ ನಂಜುಂಡೇಶ್ವರ ಸ್ವಾಮಿಯವರ ಬ್ರಹ್ಮೋತ್ಸವ, ಶ್ರೀ ಮದ್ದಿವ್ಯ ರಥಾರೋಹಣ ಮಹೋತ್ಸವ, ರಾತ್ರಿ ವೃಷಭಾರೋಹಣ, ಸ್ಥಳ: ಶ್ರೀ ಪ್ರಸನ್ನ ನಂಜುಂಡೇಶ್ವರಸ್ವಾಮಿ ದೇವಸ್ಥಾನ, ಹಳೇ ಸಂತೇಪೇಟೆ.
- **ಕಾವೇರಿ ಆಯುರ್ವೇದಿಕ್ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆ :** ಸ್ವರ್ಣಪ್ರಾಶನ ಅಭಿಯಾನ, ಸ್ಥಳ: ಆಸ್ಪತ್ರೆ ಆವರಣ, ದೇವೇಗೌಡ ಸರ್ಕಲ್, ಬೆಳಗ್ಗೆ 9.30 ರಿಂದ.
- **ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ :** ನೈಪುಣ್ಯ ವಿದ್ಯಾರ್ಥಿಗಳ ರಾಷ್ಟ್ರೀಯ ವಿಜ್ಞಾನ ದಿನಾಚರಣೆ, ಉದ್ಘಾಟನೆ : ಕೃಷಿ ವಿಜ್ಞಾನಿ ಡಾ. ವಸಂತಕುಮಾರ ತಿಮಕಾಪುರ, ಉಪಸ್ಥಿತರು : ಸಂಸ್ಥೆ ಅಧ್ಯಕ್ಷ ಆರ್. ರಘು, ಕಾರ್ಯದರ್ಶಿ ಆರ್. ಕೌಟಿಲ್ಯ, ಪ್ರಾಂಶುಪಾಲ ಎಂ.ಎನ್.ಮಹೇಂದ್ರ, ಸಂಯೋಜಕಿ ಶ್ರೀಮತಿ ಕೆ.ಎಸ್. ಶ್ವೇತಾ, ಸ್ಥಳ: ಶಾಲೆ ಆವರಣ, ಬೆಳಗ್ಗೆ 10 ರಿಂದ.
- **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ವರ್ಧಮಾನ ಚಾರಿಟಬಲ್ ಟ್ರಸ್ಟ್, ಅರಮನೆ ಪದ್ಮರಾಜ ಪಂಡಿತರ ಜೈನ ಬ್ರಾಹ್ಮಣ ವಿದ್ಯಾರ್ಥಿ ನಿಲಯ :** ಎ. ಶಾಂತಿನಾಥ ಶಾಸ್ತ್ರಿ ಮತ್ತು ಪ್ರೊ. ಜಿ. ಬ್ರಹ್ಮಪ್ಪ ದತ್ತಿ ಉಪನ್ಯಾಸ ಕಾರ್ಯಕ್ರಮ, ಉದ್ಘಾಟನೆ : ಟ್ರಸ್ಟ್ ಅಧ್ಯಕ್ಷೆ ಶ್ರೀಮತಿ ಲತಾ ಸುದರ್ಶನ್, ಅಧ್ಯಕ್ಷತೆ : ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮುಖ್ಯ ಅತಿಥಿಗಳು : ವಿದ್ಯಾರ್ಥಿ ನಿಲಯ ಅಧ್ಯಕ್ಷ ಲಕ್ಷ್ಮೀ ರಮಣ, ಸಾಹಿತಿ ಡಾ. ನೀರಜಾ ನಾಗೇಂದ್ರಕುಮಾರ್ ಅವರಿಂದ ಜೈನ ಧಾರ್ಮಿಕ ಸಾಹಿತ್ಯ, ಅತ್ತಿಮಬ್ಬೆ ಕುರಿತು ಉಪನ್ಯಾಸ, ಸ್ಥಳ: ಅರಮನೆ ಪದ್ಮರಾಜ ಪಂಡಿತರ ಜೈನ ಬ್ರಾಹ್ಮಣ ವಿದ್ಯಾರ್ಥಿ ನಿಲಯ, ಜೆಎಲ್‌ಬಿ ರಸ್ತೆ, ಮಧ್ಯಾಹ್ನ 3 ರಿಂದ.
- **ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು:** ವಿದ್ವತ್–2ಕೆ26, ರಾಜ್ಯ ಮಟ್ಟದ ಅಂತರ ಕಾಲೇಜು ಬಿಜ್‌ಟೆಕ್ ಎಕ್ಸ್‌ಟ್ರಾವಗಂಜಾ ಸೀಸನ್–18 ಸಮಾರೋಪ ಸಮಾರಂಭ, ಅಧ್ಯಕ್ಷತೆ: ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಗೌರವ ಅತಿಥಿಗಳು: ಕಾರ್ಯದರ್ಶಿ ಪಿ.ವಿಶ್ವನಾಥ್, ಖಜಾಂಚಿ ಶ್ರೀಶೈಲ ರಾಮಣ್ಣವರ್, ಕಾಲೇಜು ಅಧ್ಯಕ್ಷ ಟಿ.ನಾಗರಾಜು, ಪ್ರಿನ್ಸಿಪಾಲ್ ಡಾ.ಎಸ್.ಮರೀಗೌಡ, ಸ್ಥಳ: ಪಿ.ಎಂ. ಚಿಕ್ಕಬೋರಯ್ಯ ಸಭಾಂಗಣ, ಕಾಲೇಜು ಆವರಣ, ಸಂಜೆ 4.30ಕ್ಕೆ.

* **ಸುರುಚಿ ರಂಗಮನೆ :** ಕಥೆ ಕೇಳೋಣ ಬನ್ನಿ ಕಾರ್ಯಕ್ರಮ – 921, ಕಥೆ ಹೇಳುವವರು: ಶ್ರೀಯುತ ರಂಗನಾಥ್, ಯೋಗ ಶಿಕ್ಷಕರು, ಮೈಸೂರು. ಸ್ಥಳ: ಸುರುಚಿ ರಂಗಮನೆ, 476, ಚಿತ್ರಭಾನು ರಸ್ತೆ, ಕುವೆಂಪುನಗರ, ಸಂಜೆ 4.30 ರಿಂದ 5–30 ರವರೆಗೆ

- **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ :** ವಿಶೇಷ ಪ್ರವಚನ ಕಾರ್ಯಕ್ರಮ, ವಿದ್ವಾನ್ ಖೇಡಾ ವೇದವ್ಯಾಸಾಚಾರ್ ಅವರಿಂದ ರುಕ್ಮೀಶವಿಜಯ ಪ್ರವಚನ, ಸ್ಥಳ: ಶ್ರೀ ರಾಘವೇಂದ್ರಸ್ವಾಮಿ ಮಠ, ಜಯಲಕ್ಷ್ಮಿಪುರಂ, ಸಂಜೆ 5ಕ್ಕೆ.
- **ಹಳೇ ಬೇರು ಹೊಸ ಚಿಗುರು ಕಲ್ಚರಲ್ ಟ್ರಸ್ಟ್ :** ವಾರ್ಷಿಕೋತ್ಸವ ಸಮಾರಂಭ ಮತ್ತು ಹಳೇ ಕನ್ನಡ, ಹಿಂದಿ ಹಾಡುಗಳ ಗೀತಗಾಯನ ಕಾರ್ಯಕ್ರಮ, ಉದ್ಘಾಟನೆ : ಪ್ರೊ. ಭಾಷ್ಯಂ ಸ್ವಾಮೀಜಿ, ಅಧ್ಯಕ್ಷತೆ : ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಮುಖ್ಯ ಅತಿಥಿಗಳು : ಕರ್ನಾಟಕ ಸುಗಮ ಸಂಗೀತ ಪರಿಷತ್ ಅಧ್ಯಕ್ಷ ನಾಗರಾಜ್ ವಿ. ಭೈರಿ, ನೆಹರು ಯುವ ಕೇಂದ್ರದ ನಿವೃತ್ತ ನಿರ್ದೇಶಕ ನಟರಾಜು, ಸಮಾಜ ಸೇವಕ ಡಾ. ಕೆ. ರಘುರಾಮ್ ವಾಜಪೇಯಿ, ವಕೀಲ ಹೆಚ್. ಹರೀಶ್ ಹೆಗ್ಡೆ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಲಾ ಗೈಡ್ ಎಚ್.ಎನ್. ವೆಂಕಟೇಶ್, ವಕೀಲ ಎಸ್.ಜೆ. ಮಧ್ವರಾಜ್, ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ಜೆಎಲ್‌ಬಿ ರಸ್ತೆ, ಸಂಜೆ 5ಕ್ಕೆ.
- **ಎನ್.ಆರ್. ಮೊಹಲ್ಲಾ ಸಂಗೀತ ಸಭಾ ಚಾರಿಟೆಬಲ್ ಟ್ರಸ್ಟ್ :** ಶ್ರೀ ತ್ಯಾಗರಾಜ ಮತ್ತು ಶ್ರೀ ಪುರಂದರದಾಸರ ಆರಾಧನೆ ಪ್ರಯುಕ್ತ ವಾರ್ಷಿಕ ಸಂಗೀತೋತ್ಸವ ಕಾರ್ಯಕ್ರಮ, ವಿದುಷಿ ನಿಶಾ ರಾಜಗೋಪಾಲನ್‌ರಿಂದ ಗಾಯನ, ಪಕ್ಕವಾದ್ಯದಲ್ಲಿ ವಿದುಷಿ ಅದಿಥಿ ಕೃಷ್ಣಪ್ರಕಾಶ್ –ಪಿಟೀಲು, ವಿದ್ವಾನ್ ಬಿ.ಎಸ್. ಪ್ರಶಾಂತ್ – ಮೃದಂಗ, ವಿದ್ವಾನ್ ಓಂಕಾರ್‌ರಾವ್–ಘಟಂ, ಸ್ಥಳ: ಫೋರ್ಟ್ ಮೊಹಲ್ಲಾದ ಶ್ರೀ ಶೃಂಗೇರಿ ಶಂಕರ ಮಠದ ಗುರು ಭವನ, ಸಂಜೆ 6.15ಕ್ಕೆ.
- **ಶ್ರೀ ಕೃಷ್ಣ ಗಾನಸಭಾ :** 24ನೇ ವಾರ್ಷಿಕೋತ್ಸವ ಪ್ರಯುಕ್ತ ಸಂಗೀತ, ತ್ಯಾಗರಾಜ ಮತ್ತು ಪುರಂದರ ದಾಸರ ಆರಾಧನಾ ಮಹೋತ್ಸವ, ಡಾ. ಸಿ.ಎಂ. ಮುನಿರಾಮಪ್ಪನವರಿಂದ ಅವರ ತಂದೆ ತಾಯಿಗಳ ಸ್ಮರಣಾರ್ಥ ಸಂಗೀತ ಕಾರ್ಯಕ್ರಮ, ವಿದುಷಿ ಮೇದಾ ಮಂಜುನಾಥ್ ಅವರಿಂದ ಗಾಯನ, ವಿದ್ವಾನ್ ಎಂ.ಡಿ. ಅರ್ಜುನ–ಪಿಟೀಲು, ವಿದ್ವಾನ್ ಪಿ.ಎಸ್. ಶ್ರೀಧರ–ಮೃದಂಗ, ವಿದ್ವಾನ್ ವಿ.ಎಸ್. ರಮೇಶ್–ಮೋರ್ಚಿಂಗ್, ಸ್ಥಳ: ಆಳ್ವಾರ್ ಕಲಾ ಭವನ, ಸಂಜೆ 6.30ಕ್ಕೆ.
- **ಶ್ರೀ ರಾಮಾಭ್ಯುದಯ ಸಭಾ ಚಾರಿಟಬಲ್ ಟ್ರಸ್ಟ್ :** ಪಿಟೀಲು ವಿದ್ವಾನ್ ಹೆಚ್.ಎಸ್. ತಾಂಡವಮೂರ್ತಿ ಅವರ ಶಿಷ್ಯರಾದ ಕು. ಸಿರಿ ಪರಮಾತ್ಮ, ಕು. ವಿ. ಮನಸ್ವಿನಿ ಮತ್ತು ಕು. ಸೌಜನ್ಯ ಪ್ರಕಾಶ್ ಅವರಿಂದ ವಿಶೇಷ ಪಿಟೀಲು ತ್ರಯ ಕಾರ್ಯಕ್ರಮ, ವಿದ್ವಾನ್ ಎನ್. ಕುಮಾರ್–ಮೃದಂಗ, ಸ್ಥಳ: ಶ್ರೀರಾಮಮಂದಿರ, ಶಿವರಾಂಪೇಟೆ, ಸಂಜೆ 6.30ಕ್ಕೆ.
- **ಅಭಿಯಂತರರು :** ರಾಷ್ಟ್ರೀಯ ರಂಗ ಉತ್ಸವ, ಅಭಿಯಂತರರು ಕಲಾವಿದರಿಂದ ಮರಣ ಮೃದಂಗ (ಕನ್ನಡ) ನಾಟಕ ಪ್ರದರ್ಶನ, ರಚನೆ–ನಿರ್ದೇಶನ : ರಾಜೇಂದ್ರ ಕಾರಂತ್, ಸ್ಥಳ: ಕಿರು ರಂಗಮಂದಿರ, ಸಂಜೆ 7ಕ್ಕೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಪತ್ರಿಕಾಧ್ವನಿ – ಮೈಸೂರು ಸೀಮೆಯ ಪತ್ರಕರ್ತರ ಪರಿಚಯಾತ್ಮಕ ಕಾರ್ಯಕ್ರಮ, ಪ್ರಸ್ತುತಿ : ಹಿರಿಯ ಪತ್ರಕರ್ತರಾದ ಡಾ. ಕೂಡ್ಲಿಗಿ ಗುರುರಾಜು, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಡಿ. ಪುರುಷೋತ್ತಮ್ ಹಾಗೂ ಎಸ್. ಸಂಗೀತಾ, ವ್ಯಾಖ್ಯಾನ–ಡಾ. ಕಬ್ಬಿನಾಲೆ ವಸಂತಭಾರದ್ವಾಜ್, 6.50 ರೈತರಿಗೆ ಸಲಹೆ, 7.15 ಭಾವಗೀತೆ, 9.05 ಕ್ಯಾನ್ಸರ್ ಕುರಿತ ಮಿಥ್ಯೆಗಳು, ಪ್ರಾಯೋಜಕರು–ಇಂಡಿಯನ್ ಕ್ಯಾನ್ಸರ್ ಸೊಸೈಟಿ, ಕರ್ನಾಟಕ ಚಾಪ್ಟರ್, 9.10 ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಲಯ ವಿನ್ಯಾಸ–ತುಮಕೂರು ಟಿ.ವಿ. ಭದ್ರಾಚಾರ್, 10.30 ಹಿಂದಿ ಚಿತ್ರಗೀತೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ, ನಮ್ಮೂರ್ ಹೆಸರು, ಪ್ರಸ್ತುತಿ : ಡಾ. ಮೈಸೂರು ಉಮೇಶ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಹಿಂದಿ ಚಿತ್ರಗೀತೆಗಳು, 3.00 ಜನಪದ ಸಂಗೀತ, 3.30 ಮಕ್ಕಳ ಮಂಟಪ – ಮಕ್ಕಳ ಸಾಹಿತ್ಯ ರಂಗ, ಮಕ್ಕಳ ಬರಹಗಳನ್ನಾಧರಿಸಿದ ಸಾಹಿತ್ಯ ಕಾರ್ಯಕ್ರಮ, ಪ್ರಸ್ತುತಿ–ಬಿ. ಜಿ. ಕವಿತಾ, ಚಿನ್ಮಯಿ ಕೆ.ಎಸ್., 4.00 ನಾಟಕ–ಗಡಿಗಳು, 4.30 ನೆನಪಿನಂಗಳ (ಧ್ವನಿ ಮುದ್ರಣ ಭಂಡಾರದಿಂದ), 6.50 ಕೃಷಿರಂಗ :ಕಿಸಾನ್ ವಾಣಿ, ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ, ತೋಟಗಾರಿಕಾ ಬೆಳೆಗಳ ಬೇಸಾಯದಲ್ಲಿ ಕೃತಕ ಬುದ್ಧಿಮತ್ತೆ ಬಳಕೆ ಕುರಿತು ಮಾತನಾಡುತ್ತಾರೆ ಮೈಸೂರು ತಾಲೂಕು ಯಲಚನಹಳ್ಳಿಯ ತೋಟಗಾರಿಕಾ ಮಹಾ ವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರಾದ ಡಾ. ಜಿ. ಕೆ. ರಾಮೇಗೌಡ, ಪ್ರಸ್ತುತಿ–ಎನ್. ಕೇಶವ ಮೂರ್ತಿ, 8.00 ಸವಿನೆನಪು, 9.30 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ

ಸದಾ ಜನದಟ್ಟಣೆಯ ಸಯ್ಯಾಜಿರಾವ್ ರಸ್ತೆಯ ಹಳೇ ಕಟ್ಟಡದ ಸಜ್ಜಾ ಕುಸಿತ

ಅದೃಷ್ಟವಶಾತ್ ಯಾವುದೇ ಹಾನಿಯಿಲ್ಲ



ಸಯ್ಯಾಜಿ ರಾವ್ ರಸ್ತೆಯ ಬದಿಯಲ್ಲಿರುವ ಖಾಸಗಿ ಕಟ್ಟಡದ ಮುಂಭಾಗದ ಸಜ್ಜಾ ಕುಸಿದು ಬಿದ್ದಿರುವುದು.

ಮೈಸೂರು, ಫೆ.27(ವಿವಿಹೆಚ್)– ಮೈಸೂರಿನ ಸಯ್ಯಾಜಿ ರಾವ್ (ಜಂಬೂ ಸವಾರಿ ರಸ್ತೆ) ರಸ್ತೆಯ ಬದಿಯಲ್ಲಿರುವ ಶತಮಾನಗಳಷ್ಟು ಹಳೆಯದಾದ ಖಾಸಗಿ ಕಟ್ಟಡ'ದ ಮುಂಭಾಗದ ಸಜ್ಜಾ (ಮೇಲ್ಛಾವಣಿಯ ಭಾಗ) ಕುಸಿದು ಬಿದ್ದಿದ್ದು, ಅದೃಷ್ಟವಶಾತ್ ಯಾವುದೇ ಅನಾಹುತ ಸಂಭವಿಸಿಲ್ಲ.

ಸದಾ ಜನದಟ್ಟಣೆ ಪ್ರದೇಶವಾದ ಸಯ್ಯಾಜಿ ರಾವ್ ರಸ್ತೆಯಲ್ಲಿ ಔಷಧಿ ಮಳಿಗೆ, ಹೋಟೆಲ್, ಲಾಡ್ಜಿಂಗ್, ವ್ಯಾಪಾರ ವಹಿವಾಟು ನಡೆಯುವ ಬಿಡುವಿಲ್ಲದ ಪ್ರದೇಶವಾಗಿದ್ದು, ಹಿರಿಯ ಫಿಸಿಷಿಯನ್ ಮತ್ತು ಕಾರ್ಡಿಯೊಲಜಿಸ್ಟ್ ಡಾ.ಸಿ.ಡಿ.ಶ್ರೀನಿವಾಸಮೂರ್ತಿ ಮಾಲೀಕತ್ವದ ಕಟ್ಟಡದ ಮುಂಭಾಗದ ಸಜ್ಜಾ ದಿಢೀರ್ ಕುಸಿದಿದೆ. ಅದರ ಪಕ್ಕದಲ್ಲೇ ಇದ್ದ ಶ್ರೀ ಕೃಷ್ಣ ಮೆಡಿಕಲ್‌ನ ಮೇಲ್ಭಾಗವೂ ಕುಸಿದಿದೆ.

ಇತ್ತ ಮುಖ್ಯದ್ವಾರದಲ್ಲಿಯೇ ಕೆಲ ಗೋಡೆಗಳು ಬಿರುಕು ಬಿಟ್ಟಿವೆ. ಕಟ್ಟಡದ ಮೇಲ್ಭಾಗದಲ್ಲಿ ಅರಳಿ ಮರ ಬೃಹದಾಕಾರವಾಗಿ ಬೆಳೆದು ನಿಂತಿದ್ದು, ಅದರ ಬೇರುಗಳು ನೆಲದತ್ತ ಚಾಚಿಕೊಂಡಂತಿವೆ ಶಿಥಿಲಾವಸ್ಥೆಯಿಂದ ಕೂಡಿದ ಕಟ್ಟಡದ ಮೇಲೆ ಮರ ಬೆಳೆದಿರುವುದು ಸೂಕ್ತ ನಿರ್ವಹಣೆ ಇಲ್ಲದೇ ಇರುವುದಕ್ಕೆ ಸಾಕ್ಷಿಯಾಗಿದೆ.


ಈ ಬಗ್ಗೆ 'ಮೈಸೂರು ಮಿತ್ರನೊಂದಿಗೆ ಮಾತನಾಡಿದ ಬೀದಿಬದಿ ಹೂ ವ್ಯಾಪಾರಿ ಕುಮಾರ್, ಮೂರ್ನಾಲ್ಕು ದಿನಗಳ ಹಿಂದೆ ಸುರಿದ ಅಕಾಲಿಕ ಮಳೆಯಿಂದಾಗಿ ಕಟ್ಟಡದ ಅಲ್ಪ ಭಾಗ ಕುಸಿದಿತ್ತು. ಮುಂಭಾಗದ ಸಜ್ಜಾಕ್ಕೆ ಕಬ್ಬಿಣದ ಪೋಲ್‌ಗಳನ್ನು ಹಾಕಿ ಬೀಳದಂತೆ ತಡೆಯಲಾಗಿತ್ತು. ಹಾಗಿದ್ದರೂ ಇಂದು ಬಿದ್ದಿದೆ ಎಂದರು.

ಸದಾ ಜನನಿಬಿಡ ಸ್ಥಳವಾಗಿದ್ದು, ಮೆಡಿಕಲ್ ಮುಂಭಾಗದಲ್ಲಿ ಯಾವಾಗಲೂ ಯಾರಾದರೊಬ್ಬರೂ ಕೂರುತ್ತಿದ್ದರು, ರಾತ್ರಿ ವೇಳೆ ಮಲಗುತ್ತಿದ್ದರು. ಅದೃಷ್ಟವಶಾತ್ ಇಂದು ಅಲ್ಲಿ ಯಾರೂ ಇರಲಿಲ್ಲ. ಹೂ ಮಾರುತ್ತ ನಿಂತಿದ್ದ ನನಗೆ ಸ್ವಲ್ಪ ಶಬ್ಧ ಕೇಳಿತು. ತಿರುಗಿ ನೋಡುವಷ್ಟರಲ್ಲಿ ಮೇಲ್ಛಾವಣಿ ಭಾಗವೇ ಕುಸಿದಿತ್ತು ಎಂದು ಘಟನೆಯನ್ನು ವಿವರಿಸಿದರು.

ಈ ಹಿಂದೆ ಮೈಸೂರಿನ ದೇವರಾಜ ಮಾರುಕಟ್ಟೆ ಹಾಗೂ ಲ್ಯಾನ್ಸ್‌ಡೌನ್ ಬಿಲ್ಡಿಂಗ್ ಪಾರಂಪರಿಕ ಕಟ್ಟಡಗಳು, ಇತ್ತೀಚೆಗೆ ವಾಣಿವಿಲಾಸ ಮಾರ್ಕೆಟ್‌ನ ಸಜ್ಜಾ ಕುಸಿತವಾಗಿದ್ದು, ಈಗ ಸಯ್ಯಾಜಿರಾವ್ ರಸ್ತೆಯಲ್ಲಿ ಖಾಸಗಿ ಕಟ್ಟಡ ಕುಸಿದಿದೆ. ಮೈಸೂರಲ್ಲಿ ದಿನೇ–ದಿನೆ ಒಂದಿಲ್ಲೊಂದು ಪ್ರಕರಣಗಳು ನಡೆಯುತ್ತಿವೆ. ಪಾರಂಪರಿಕ ಕಟ್ಟಡ ಸಂರಕ್ಷಿಸುವಲ್ಲಿ ಪಾಲಿಕೆ ತನ್ನ ನಿರ್ಲಕ್ಷ್ಯದಿಂದ ಮೈಸೂರಿಗರ ಕೆಂಗಣ್ಣಿಗೆ ಗುರಿಯಾಗಿದೆ.

ಅರವಿಂದ್ ಕೇಜ್ರಿವಾಲ್, ಮನೀಶ್ ಸಿಸೋಡಿಯಾ ಕೇಸಿನಿಂದ ಖುಲಾಸೆ


ಅರವಿಂದ್


ಮನೀಶ್

ನವದೆಹಲಿ: ಶುಕ್ರವಾರ ದೆಹಲಿ ನ್ಯಾಯಾಲಯವು ಸಿಬಿಐಯ ಅಬಕಾರಿ ನೀತಿ ಪ್ರಕರಣದಲ್ಲಿ ಮಾಜಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಮತ್ತು ಮಾಜಿ ಉಪ ಮುಖ್ಯಮಂತ್ರಿ ಮನೀಶ್ ಸಿಸೋಡಿಯಾ ಸೇರಿದಂತೆ ಒಟ್ಟು 23 ಮಂದಿಗೆ ಕೇಸಿನಿಂದ ಖುಲಾಸೆಗೊಳಿಸಿದೆ.

ಈ ಆದೇಶವನ್ನು ವಿಶೇಷ ನ್ಯಾಯಾಧೀಶ ಜಿತೇಂದ್ರಸಿಂಗ್ ಅವರು ಹೊರಡಿಸಿದ್ದು, ಆರೋಪಿಗಳ ವಿರುದ್ಧ ಅಭಿಯೋಜನಾ ಸಂಸ್ಥೆಯ ಸಾಕ್ಷ್ಯಗಳಿಗೆ ಬೆಂಬಲವಾಗುವ ಯಾವುದೇ ವಸ್ತುನಿಷ್ಠ ಸಾಕ್ಷ್ಯ ದೊರಕಿಲ್ಲವೆಂದು ಹೇಳಿದ್ದಾರೆ.

ದೆಹಲಿಯ ಅಬಕಾರಿ ನೀತಿ ಸಂಬಂಧಿತ ಭ್ರಷ್ಟಾಚಾರ ಪ್ರಕರಣದಲ್ಲಿ ಸಿಬಿಐ ಸಲ್ಲಿಸಿದ್ದ ಆರೋಪ ಪಟ್ಟಿಯನ್ನು ಪರಿಗಣಿಸಲು ನ್ಯಾಯಾಲಯ ನಿರಾಕರಿಸಿತು.

ದೆಹಲಿಯ ಹಿಂದಿನ ಆಪ್ ಸರ್ಕಾರದ ಈಗಿನ ಬಿಜೆಪಿ ಸರ್ಕಾರ ರದ್ದುಪಡಿಸಿ ರುವ ಅಬಕಾರಿ ನೀತಿಯ ಜಾರಿಗೆ ಸಂಬಂಧಿಸಿದ ಭ್ರಷ್ಟಾಚಾರದ ಆರೋಪಗಳ ಕುರಿತು ಸಿಬಿಐ ತನಿಖೆ ನಡೆಸಿ ಕೇಜ್ರಿವಾಲ್ ಮತ್ತು ಸಿಸೋಡಿಯಾ ಬಂಧಿತರಾಗಿದ್ದರು.

ದೆಹಲಿ ಅಬಕಾರಿ ನೀತಿ ಪ್ರಕರಣದ ತನಿಖೆ ವೇಳೆ ಫೆಡರಲ್ ಸಂಸ್ಥೆಯ ಸಮನ್ಸ್‌ಗಳನ್ನು ತಪ್ಪಿಸಿಕೊಂಡಿದ್ದಾರೆ ಎಂಬ ಆರೋಪದ ಎರಡು ಪ್ರಕರಣಗಳಲ್ಲಿ, ಜಾರಿ ನಿರ್ದೇಶನಾಲಯದ ಅರ್ಜಿಗಳನ್ನು ದೆಹಲಿ ನ್ಯಾಯಾಲಯವು ಜನವರಿಯಲ್ಲಿ ಅರವಿಂದ್ ಕೇಜ್ರಿವಾಲ್ ವಿರುದ್ಧದ ಕೇಸನ್ನು ವಜಾಗೊಳಿಸಿತ್ತು. ಅಬಕಾರಿ ನೀತಿ ಪ್ರಕರಣದಲ್ಲಿ ವಿನಾಯಿತಿ ನೀಡಿದ ಕೆಲವೇ ಕ್ಷಣಗಳಲ್ಲಿ ಅರವಿಂದ್ ಕೇಜ್ರಿ ವಾಲ್ ಅವರು ಮಾಧ್ಯಮಗಳ ಮುಂದೆ ಭಾವುಕರಾಗಿ ಕಣ್ಣೀರು ಹಾಕಿದರು.

ಯೋಗೇಶ್ ಗೌಡ ಕೊಲೆ ಪ್ರಕರಣ: ಶಾಸಕ ವಿನಯ್ ಕುಲಕರ್ಣಿಗೆ 'ಸುಪ್ರೀಂ' ಜಾಮೀನು!


ವಿನಯ್

ಬೆಂಗಳೂರು: ಯೋಗೇಶ್ ಗೌಡ ಕೊಲೆ ಪ್ರಕರಣದಲ್ಲಿ ಜೈಲು ವಾಸದಲ್ಲಿದ್ದ ಧಾರವಾಡದ ಕಾಂಗ್ರೆಸ್ ಶಾಸಕ ವಿನಯ್ ಕುಲಕರ್ಣಿಗೆ ಸುಪ್ರೀಂಕೋರ್ಟ್ ಜಾಮೀನು ನೀಡಿದೆ. ಎರಡು ತಿಂಗಳಲ್ಲಿ ವಿಚಾರಣೆ ಪೂರ್ಣಗೊಳಿಸುವಂತೆ ಸುಪ್ರೀಂ ಕೋರ್ಟ್ ಸೂಚನೆ ನೀಡಿದ್ದು, ಸದ್ಯ ಕುಲಕರ್ಣಿಗೆ ರಿಲೀಫ್ ಸಿಕ್ಕಿದೆ.

ಇತ್ತೀಚಿಗೆ ಹೈಕೋರ್ಟ್‌ನಲ್ಲಿ ಜಾಮೀನು ಅರ್ಜಿ ವಜಾ ಆಗಿತ್ತು. ಬಳಿಕ ವಿನಯ್ ಕುಲಕರ್ಣಿ ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದರು. ಕುಲಕರ್ಣಿ ಪರ ವಾದ ಮಂಡಿಸಿದ್ದ ವಕೀಲ ಶರಣಗೌಡ ಪಾಟೀಲ್ ಅವರ ತಂಡ ಜಾಮೀನು ಪಡೆಯುವಲ್ಲಿ ಯಶಸ್ವಿಯಾಗಿದೆ.

ಸುಪ್ರೀಂಕೋರ್ಟ್‌ನ ನ್ಯಾ. ಸಂಜಯ್ ಕರೋಲ ಅವರ ಪೀಠದಿಂದ ವಿನಯ್ ಕುಲಕರ್ಣಿ ಅವರಿಗೆ ಜಾಮೀನು ಮಂಜೂರಾಗಿದೆ. ಜನಪ್ರತಿನಿಧಿಗಳ ವಿಶೇಷ ಕೋರ್ಟ್‌ಗೆ ವಿನಯ್ ಕುಲಕರ್ಣಿ ಶರಣಾಗಿದ್ದರು. ಸಾಕ್ಷಿಗಳಿಗೆ ಬೆದರಿಕೆ ಆರೋಪದ ಮೇಲೆ ಜಾಮೀನು ರದ್ದಾಗಿತ್ತು. ಪ್ರಕರಣದ ಸಾಕ್ಷಿಗಳಿಗೆ ಬೆದರಿಕೆ ಹಾಕಿದ ಆರೋಪದಡಿ ವಿನಯ್ ಕುಲಕರ್ಣಿ ಅವರ ಜಾಮೀನು ರದ್ದು ಮಾಡುವಂತೆ ಸಿಬಿಐ ಮನವಿ ಮಾಡಿತ್ತು.

IN THE COURT OF HON'BLE DEPUTY DIRECTOR OF LAND RECORDS AT MYSORE . Appeal. No.809/2025

Appellant : Smt.P.Dhanalakshmi -Vs- Respondents : The Thasildhar & Other

NOTICE / SUMMONS TO RESPONDENTS No.3 to 15

To, Respondent no.03) Sri.S.Boraiah S/o Siddegowda, Respondent no.04) Sri-.T.Venkatanarayana S/o Bhaktavatsala, Respondent no.05) Smt. Puttamani W/o Late Chikkasiddiah, Respondent no.06) Sri.M.Suresh S/o M.Marthandaiah, Respondent no.07) Sri.M.Subhash S/o M.Marthandaiah, Respondent no.08) Sri.M.Mohan Kumar S/o M.Marthandaiah, Respondent no.09) Sri. Chikkathamme Gowda S/o Late Dodda-haidegowda, Respondent no.10) Sri. Shivananda Bharati S/o Late Maradandaiah, Respondent no.11) Sri.M.N.Vijaya Kumar S/o M.N.Nagachandra Chetti, Respondent no.12) Sri. Doddaramu S/o Chikkaramegowda, Respondent no.13) Sri.M.Anil Kumar S/o M.Marthandaiah, Respondent no.14) Smt. Sunanda P. W/o Shivaramegowda. Respondent no.15 Sri.M.S. Charan Gowda S/o Shivaramegowda, The Respondent no.3 to 15) are residing at Mandakalli Village, Kasaba Hobli, Mysuru Taluk, Mysuru District. Whereas, Appellant had filed a case against the Respondents for the relief of Cancellation of Phodi with respect to the Schedule Property, and thereupon, the appellant has taken Court Summons and RPAD and inspite of which you all have evaded to receive the Court Summons, as such, you are hereby directed to appear before this Hon'ble Court in person or through your counsel on 9/3/2026 at 3:00P.M, failure of which, you will be placed Ex-parte and the matter will be proceeded with and heard in your absence. Given under my hand and seal of the Court on this 25th day of Feb 2026 at Mysuru.

SCHEDULE PROPERTY

Sy.no.304/1 measuring 07 guntas Phoded to Sy.no.304/7, measuring 0.04.08 guntas and Sy.no.304/9 measuring 0.02.08 Guntas and having Otner Phodi numbers in Sy.-No.304/3,4,5,6,7,8,9 and 10 of Mandaakalli village, Kasaba Hobli, Mysuru taluk

Sd/- PRABHU ASSOCIATES,
H.P.DARSHAN SHETTY, H.P.GAGAN SHETTY,
Advocates for Appellant Holder No. 1533,
N.T.Street, K.R.Mohalla, Mysuru.
Cell:-9590807007, 8904040406

By Order of the Court
ಸಹಿ/– ಜಿಲ್ಲಾಧಿಕಾರಿಗಳ ತಾಂತ್ರಿಕ ಸಹಾಯಕರು ಹಾಗೂ ಪದನಿಮಿತ್ತ ಭೂ ದಾಖಲೆಗಳ ಉಪ ನಿರ್ದೇಶಕರು ಮೈಸೂರು ಜಿಲ್ಲೆ, ಮೈಸೂರು

ಸಂಬಂಧಿ ಸಾವಿಗೆ ಹೋಗುತ್ತಿದ್ದ ದಂಪತಿ ಅಪಘಾತದಲ್ಲಿ ಸಾವು

ಕೆ.ಆರ್.ನಗರ, ಫೆ.27– ಬೈಕ್‌ಗೆ ಕಾರು ಡಿಕ್ಕಿ ಹೊಡೆದ ಪರಿಣಾಮ ದಂಪತಿ ಸಾವನ್ನಪ್ಪಿರುವ ದಾರುಣ ಘಟನೆ ತಾಲೂಕಿನ ಕಗ್ಗರೆ–ನಾರಾಯಣಪುರ ಬಳಿ ಶುಕ್ರವಾರ ನಡೆದಿದೆ.

ಹುಣಸೂರು ತಾಲೂಕಿನ ಹನಗೋಡು ಹೋಬಳಿ ಬೀರನಹಳ್ಳಿ ಗ್ರಾಮದ ನಿವಾಸಿ ನಂಜುಂಡ ಸೋಮಚಾರ್ (51), ಪತ್ನಿ ನೇತ್ರಾವತಿ(48) ಮೃತಪಟ್ಟವರು.

ಮೈಸೂರಿನ ಹೆಬ್ಬಾಳು 3ನೇ ಹಂತದ ಸುಬ್ರಹ್ಮಣ್ಯ ನಗರದದ ಪುತ್ರಿ ಮೇಘನಾ ಮನೆಯಲ್ಲಿ ವಾಸವಾಗಿದ್ದ ನಂಜುಂಡ ಸೋಮಚಾರ್, ಕಟ್ಟಡ ಕಾರ್ಮಿಕರ ಸೆಂಟ್ರಿಂಗ್ ಮೇಸ್ತ್ರಿಯಾಗಿ ಕೆಲಸ ಮಾಡುತ್ತಿದ್ದರು ಎನ್ನಲಾಗಿದೆ.

ಅರಕಲಗೂಡು ತಾಲೂಕಿನ ರಾಮನಾಥಪುರ ಬಳಿಯ ಮುತ್ತಕದ ಹೊಸೂರು ಗ್ರಾಮದಲ್ಲಿ ಸಂಬಂಧಿಕರು ಸಾವಿಗೀಡಾಗಿದ್ದು, ಅಂತ್ಯಕ್ರಿಯೆಯಲ್ಲಿ ಭಾಗವಹಿಸಲು ಶುಕ್ರವಾರ ಬೆಳಗ್ಗೆ ನಂಜುಂಡ ಸೋಮಚಾರ್ ತಮ್ಮ ಪತ್ನಿ ನೇತ್ರಾವತಿ ಅವರೊಂದಿಗೆ


ಅಪಘಾತದಲ್ಲಿ ಮೃತಪಟ್ಟ ದಂಪತಿ

ಬಜಾಜ್ ಡಿಸ್ಕವರ್ ಬೈಕ್‌ನಲ್ಲಿ ಇಲವಾಲ, ಸಾಗರಕಟ್ಟೆ ಮಾರ್ಗವಾಗಿ ನಾರಾಯಣಪುರ–ಕಗ್ಗರೆ ಮೂಲಕ ರಾಮನಾಥಪುರಕ್ಕೆ ತೆರಳುತ್ತಿದ್ದರು. ಈ ವೇಳೆ ಎದುರಿನಿಂದ ಅತೀ ವೇಗವಾಗಿ ಬಂದ ಫೋರ್ಕ್ಸ್‌ಪಿಗೋ ಕಾರು ಬೈಕ್‌ಗೆ ಡಿಕ್ಕಿ ಹೊಡೆದಿದೆ. ಡಿಕ್ಕಿ ಹೊಡೆದ ರಭಸಕ್ಕೆ ಅನತಿ ದೂರ ಬೈಕ್‌ನಿಂದ ಹಾರಿ ಬಿದ್ದ ದಂಪತಿಗಳು ತೀವ್ರ ಗಾಯಗೊಂಡಿದ್ದರು. ತಕ್ಷಣ ಅವರನ್ನು ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ಆಂಬುಲೆನ್ಸ್‌ನಲ್ಲಿ ಕರೆತರುವ ಮಾರ್ಗಮಧ್ಯೆ ನಂಜುಂಡ ಸೋಮಚಾರ್ ಹಾಗೂ ಪತ್ನಿ ನೇತ್ರಾವತಿ ಸಾವನ್ನಪ್ಪಿದ್ದಾರೆ. ಘಟನೆ ಬಳಿಕ ಕಾರು ಚಾಲಕ ಸ್ಥಳದಿಂದ ಪರಾರಿಯಾಗಿದ್ದಾನೆ.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಪಟ್ಟಣ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಶಿವಪ್ರಕಾಶ್ ಹಾಗೂ ಸಿಬ್ಬಂದಿ ಪರಿಶೀಲಿಸಿ, ಬೈಕ್ ಹಾಗೂ ಕಾರನ್ನು ವಶಕ್ಕೆ ಪಡೆದು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ದಂಪತಿಯ ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ದೇಹಗಳನ್ನು ಹಸ್ತಾಂತರಿಸಿದರು. ಈ ಸಂಬಂಧ ಮೃತರ ಪುತ್ರ ರವಿಕುಮಾರ್ ನೀಡಿದ ದೂರಿನ ಮೇರೆಗೆ ಕೆ.ಆರ್.ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.







ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ
(ಕರ್ನಾಟಕ ರಾಜ್ಯ ಸರ್ಕಾರದ ಸ್ವಾಯತ್ತ ಸಂಸ್ಥೆ)
ಬನ್ನೇರುಘಟ್ಟ ರಸ್ತೆ, ಬೆಂಗಳೂರು – 560 069.
ದೂರವಾಣಿ: +91–80–22977666/276/433/216/217,
ಟೆಲಿ–ಫ್ಯಾಕ್ಸ್:080–26534625/477 । ಇ–ಮೇಲ್: director.sjicr@gmail.com

Ref:SJICR/2025-26/SE0026 **Date: 27.02.2026**

ಟೆಂಡರ್ ಪ್ರಕಟಣೆ

ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ, ಬನ್ನೇರುಘಟ್ಟ ರಸ್ತೆ, ಬೆಂಗಳೂರು, ಇವರು ಮೈಸೂರಿನ ಕೆಆರ್‌ಎಸ್ ರಸ್ತೆಯ ಎಸ್‌ಜೆಐಸಿಆರ್‌ನಲ್ಲಿ ಕ್ಯಾಂಟೀನ್ ಮತ್ತು ಡೈಯೆಟ್ರಿ ಸೇವೆಗಳನ್ನು ಒದಗಿಸಲು ಅರ್ಹ ಬಿಡ್‌ದಾರರಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಿದ್ದಾರೆ.

1. ಟೆಂಡರ್‌ದಾರರು ಟೆಂಡರ್ ದಸ್ತಾವೇಜುಗಳನ್ನು **https://kppp.karnataka.gov.in** ವೆಬ್‌ಸೈಟ್‌ನಿಂದ **ದಿನಾಂಕ: 02.03.2026** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಭರ್ತಿ ಮಾಡಿದ ಟೆಂಡರ್‌ಗಳನ್ನು ಇ–ಪೋರ್ಟಲ್ ಮೂಲಕ ಸಲ್ಲಿಸಲು ಕೊನೆಯ **ದಿನಾಂಕ: 30.03.2026ರ ಸಂಜೆ 4.00 ಗಂಟೆಯವರೆಗೆ.**
2. ಪೂರ್ವಭಾವಿ ಸಭೆಯ **ದಿನಾಂಕ: 09.03.2026 ರ ಬೆಳಿಗ್ಗೆ 11:30 ಗಂಟೆಗೆ.**
3. ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **01.04.2026 ಸಂಜೆ 4:00 ಗಂಟೆಗೆ.**
4. ಇ.ಎಂ.ಡಿ. : **ರೂ. 5,00,000/–**
5. ಹೆಚ್ಚಿನ ವಿವರಗಳಿಗಾಗಿ ನಮ್ಮ ವೆಬ್‌ಸೈಟ್: **www.jayadevacardiology.com** ನಲ್ಲಿ ನೋಡಬಹುದು.
6. ಟೆಂಡರನ್ನು ಯಾವುದೇ ಕಾರಣ ನೀಡದೆ ಭಾಗಶಃ/ಪೂರ್ಣವಾಗಿ ಒಪ್ಪಿಕೊಳ್ಳುವ/ ತಿರಸ್ಕರಿಸುವ / ರದ್ದುಪಡಿಸುವ ಅಧಿಕಾರವನ್ನು ಟೆಂಡರ್ ಅಂಗೀಕರಿಸುವ ಪ್ರಾಧಿಕಾರ ಕಾಯ್ದಿರಿಸಿದೆ.

ಸಹಿ/–
ಮುಖ್ಯ ಆಡಳಿತಾಧಿಕಾರಿಗಳು ಮತ್ತು ಅಧ್ಯಕ್ಷರು, ಟೆಂಡರ್ ಆಹ್ವಾನಿಸುವ ಪ್ರಾಧಿಕಾರ.

ವಾಸಾಸಂಇ/ವಾಪ್ರ/ಜಿಎ/5912/2025–26

ಕೋಲ್ಕತ್ತಾದಲ್ಲಿ 5.4 ರಷ್ಟು ತೀವ್ರತೆಯ ಭೂಕಂಪ

ಭಾಷಣ ಮಾಡುತ್ತಿದ್ದಾಗ ಅಲುಗಾಡಿದ ಕೇಂದ್ರ ಸಚಿವರು



ಕೋಲ್ಕತ್ತಾ: ಪಶ್ಚಿಮ ಬಂಗಾಳದ ರಾಜಧಾನಿ ಕೋಲ್ಕತ್ತಾದಲ್ಲಿ ಶುಕ್ರವಾರ 5.4 ತೀವ್ರತೆಯ ಪ್ರಬಲ ಭೂಕಂಪ ಸಂಭವಿಸಿದೆ. ಕೋಲ್ಕತ್ತಾ ಮತ್ತಿತರ ಭಾಗಗಳಲ್ಲಿ ಕಂಪನದ ಅನುಭವವಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಭೂಕಂಪದ ಕೇಂದ್ರ ಬಿಂದು ಬಾಂಗ್ಲಾದೇಶದಲ್ಲಿ ದಾಖಲಾಗಿದೆ ಎಂದು ವರದಿಯಾಗಿದೆ. ಪಶ್ಚಿಮ ಬೆನಾಲ್ ರಾಜಧಾನಿಯಲ್ಲಿ ಮಧ್ಯಾಹ್ನ 1.22 ರ ಸುಮಾರಿಗೆ ಭೂಕಂಪ ಸಂಭವಿಸಿದೆ. ಜನರು ತಮ್ಮ ಅನುಭವಗಳನ್ನು ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಂಡಿದ್ದಾರೆ.

ಇದುವರೆಗೆ ಯಾವುದೇ ಪ್ರಾಣಹಾನಿ ಅಥವಾ ಆಸ್ತಿ ನಷ್ಟದ ಬಗ್ಗೆ ವರದಿಯಾಗಿಲ್ಲ. ಕೋಲ್ಕತ್ತಾದಲ್ಲಿ ಈ ತಿಂಗಳು ಭೂಕಂಪ ಸಂಭವಿಸಿದ್ದು ಇದು ಎರಡನೇ ಬಾರಿ. ಈ ಹಿಂದೆ ಫೆಬ್ರುವರಿ 3 ರಂದು ಲಘು ಭೂಕಂಪ ಆಗಿತ್ತು.


ನೆರೆಯ ರಾಜ್ಯಗಳು ಮತ್ತು ಬಾಂಗ್ಲಾದೇಶದಲ್ಲಿಯೂ ಭೂಕಂಪದ ಅನುಭವವಾಗಿದೆ. EMSC ದತ್ತಾಂಶದ ಪ್ರಕಾರ, ಮ್ಯಾನ್ಮಾರ್‌ನ ಅಕ್ಯಾಬ್‌ನಿಂದ ಪೂರ್ವಕ್ಕೆ 70 ಮೈಲುಗಳಷ್ಟು ದೂರದಲ್ಲಿ ಭೂಕಂಪನ ಸಂಭವಿಸಿದೆ. ಕೋಲ್ಕತ್ತಾ ಸೇರಿದಂತೆ ಪಶ್ಚಿಮ ಬಂಗಾಳದ ಕೆಲವು ಭಾಗಗಳಲ್ಲಿ ಮತ್ತು ನೆರೆಯ ಬಾಂಗ್ಲಾದೇಶದಲ್ಲಿ ಕಂಪನದ ಅನುಭವವಾಗಿದೆ. 10 ಕಿಲೋಮೀಟರ್ ಅಥವಾ 6.21 ಮೈಲಿ ಆಳದಲ್ಲಿ ಭೂಕಂಪ ಸಂಭವಿಸಿದೆ ಎಂದು ಜರ್ಮನ್ ರಿಸರ್ಚ್ ಸೆಂಟರ್ ಫಾರ್ ಜಿಯೋಸೈನ್ಸ್ ಹೇಳಿದೆ.

ಕೇಂದ್ರ ಸಚಿವ ಸುಕಾಂತ ಮಜುಂದಾರ್ ಕೋಲ್ಕತ್ತಾದಲ್ಲಿ ಇಂದು ಮಧ್ಯಾಹ್ನ ಆಯೋಜಿಸಿದ್ದ ಸಾರ್ವಜನಿಕ ಸಭೆಯೊಂದರಲ್ಲಿ ಮಾತನಾಡುತ್ತಿದ್ದಾಗ ಭೂಕಂಪ ಸಂಭವಿಸಿದೆ. ಈ ಕುರಿತ ವಿಡಿಯೋವನ್ನು ಸುದ್ದಿ ಸಂಸ್ಥೆ ಐಎಎನ್‌ಎಸ್ ಹಂಚಿಕೊಂಡಿದೆ.

ವಿಡಿಯೋದಲ್ಲಿ ವೇದಿಕೆಯಲ್ಲಿದ್ದ ಮಜುಂದಾರ್, ನಡುಗುತ್ತಿರುವಂತೆ ಕಾಣಿಸುತ್ತದೆ. ನಾನು ಭಾಷಣ ನಿಲ್ಲಿಸಲೇ ಎಂದು ಅವರು ಕೇಳುತ್ತಾರೆ. ಕಾರ್ಯಕ್ರಮ ಸ್ಥಳದಲ್ಲಿದ್ದ ಲೈಟ್, ಕ್ಯಾಮರಾಗಳು ಕೂಡಾ ಅಲುಗಾಡುವುದು ಕಂಡುಬಂದಿದೆ.

ಸುಬ್ಬಾರೆಡ್ಡಿ ಶಾಸಕ ಸ್ಥಾನ ಅಸಿಂಧು ಆದೇಶಕ್ಕೆ ಸುಪ್ರೀಂ ತಡೆ!

ನವದೆಹಲಿ: ಬಾಗೇಪಲ್ಲಿಯ ಎನ್.ಎಸ್ ಸುಬ್ಬಾರೆಡ್ಡಿ ಶಾಸಕ ಸ್ಥಾನ ಅಸಿಂಧುಗೊಳಿಸಿ ಹೈಕೋರ್ಟ್ ನೀಡಿದ್ದ ಆದೇಶಕ್ಕೆ ಸುಪ್ರೀಂ ಕೋರ್ಟ್ ಮಧ್ಯಂತರ ತಡೆ ನೀಡಿದೆ.



ಎದುರಾಳಿ, ಚುನಾವಣಾ ಆಯೋಗ ಮತ್ತು ಸಂಬಂಧಪಟ್ಟ ವ್ಯಕ್ತಿಗಳಿಗೆ ಅಫಿಡವಿಟ್, ಕೌಂಟರ್ ಅಫಿಡವಿಟ್ ಸಲ್ಲಿಸಲು ಸುಪ್ರೀಂ ಕೋರ್ಟ್ 6 ವಾರಗಳ ಕಾಲಾವಕಾಶ ನೀಡಿದೆ. ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿ (ಭಾಗ್ಯನಗರ) ವಿಧಾನಸಭಾ ಕ್ಷೇತ್ರದ ಶಾಸಕ ಸ್ಥಾನದಿಂದ ಅನರ್ಹಗೊಳಿಸಿದ ಹೈಕೋರ್ಟ್ ಆದೇಶ ಪ್ರಶ್ನಿಸಿ ಕಾಂಗ್ರೆಸ್‌ನ ಎಸ್.ಎನ್. ಸುಬ್ಬಾರೆಡ್ಡಿ ಅವರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು.

ಮೈಸೂರಲ್ಲಿ ಹಾರುವ ಹಾವು ಪತ್ತೆ


ಹಾರುವ ಹಾವಿನೊಂದಿಗೆ ಸ್ನೇಕ್ ಶ್ಯಾಮ್

ಮೈಸೂರು,ಫೆ.27(ಪಿಎಂ)– ಮೈಸೂರಿನ ವಿಜಯನಗರದ ಮನೆಯೊಂದರಲ್ಲಿ ಅಪರೂಪದ ಹಾರುವ ಹಾವು ಪತ್ತೆಯಾಗಿದ್ದು, ಇದನ್ನು ಉರಗ ಸಂರಕ್ಷಕ ಸ್ನೇಕ್ ಶ್ಯಾಮ್ ರಕ್ಷಣೆ ಮಾಡಿದ್ದಾರೆ.

ಮೈಸೂರು ವಿಜಯನಗರ ಮೊದಲ ಹಂತದ ಮುಡಾ ನಿವೃತ್ತ ನೌಕರ ಗಂಗಾಧರಪ್ಪ ಅವರ ಮನೆಯ ಅಡುಗೆ ಕೋಣೆಯಲ್ಲಿ ದಿನಸಿ ಡಬ್ಬಿಯ ಹಿಂಭಾಗದಲ್ಲಿ ಸೇರಿಕೊಂಡಿದ್ದ ಈ ವಿಶೇಷ ಹಾವನ್ನು ಸ್ನೇಕ್ ಶ್ಯಾಮ್ ರಕ್ಷಣೆ ಮಾಡಿದ್ದಾರೆ. ಈ ಸಂಬಂಧ ಮಾಹಿತಿ ನೀಡಿರುವ ಸ್ನೇಕ್ ಶ್ಯಾಮ್, ಇದು ಹಾರುವ ಹಾವು, ಇದು ಬಹಳ ಅಪರೂಪ. ಇದರಲ್ಲಿ ವಿಷ ಇರುವುದಿಲ್ಲ. ಈ ರೀತಿಯ ಹಾವುಗಳು ಮಂಗಳೂರು ಭಾಗದಲ್ಲಿ ಹೆಚ್ಚು ಕಂಡು ಬರುತ್ತವೆ ಎಂದು ಹೇಳಿದ್ದಾರೆ.

ಜೆರ್ಸಿ ಹಸು ಕಳ್ಳತನ ; ಪ್ರಕರಣ ದಾಖಲು

ಮೈಸೂರು,ಫೆ.27(ಪಿಎಂ)– ಸುಮಾರು 20 ಸಾವಿರ ರೂ. ಮೌಲ್ಯದ ಹಸು ಕಳ್ಳತನ ಮಾಡಿರುವ ಸಂಬಂಧ ಎನ್‌ಆರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಎನ್‌ಆರ್ ಮೊಹಲ್ಲಾದ ಬಡೆಮಖಾನ್ ನಿವಾಸಿ ಸೈಯದ್ ಬುರ್ಹಾನ್ ತಮ್ಮ ಜೆರ್ಸಿ ಹಸು ಕಳ್ಳತನವಾಗಿದೆ. ಮಂಗಳವಾರ ರಾತ್ರಿ 10 ಗಂಟೆಗೆ ಮನೆ ಮುಂಭಾಗದಲ್ಲಿ ಕಟ್ಟಿ ಹಾಕಿದ್ದ ಹಸು ಬೆಳಗ್ಗೆ ನೋಡಲಾಗಿ ಇರಲಿಲ್ಲ. ಕಳ್ಳತನ ಮಾಡಲಾಗಿದೆ ಎಂದು ಆರೋಪಿಸಿ ನೀಡಿದ ದೂರಿನನ್ವಯ ಪ್ರಕರಣ ದಾಖಲಾಗಿದೆ.

ನ್ಯೂಜಿಲೆಂಡ್ ಮಣಿಸಿ ಅಗ್ರಸ್ಥಾನಕ್ಕೇರಿದ ಇಂಗ್ಲೆಂಡ್

ಕೊಲಂಬೊ, ಫೆ.27(ವಿವಿಹೆಚ್)– ವಿಲ್ ಜಾಕ್ಸ್ ಮತ್ತು ರೆಹನ್ ಅಹ್ಮದ್ ಅವರ ಆಲ್‌ರೌಂಡರ್ ಆಟದ ಬಲದಿಂದ ಬಲಿಷ್ಠ ನ್ಯೂಜಿಲೆಂಡ್ ತಂಡವನ್ನು, ಇಂಗ್ಲೆಂಡ್ 4 ವಿಕೆಟ್‌ಗಳಿಂದ ಮಣಿಸಿ ಸೂಪರ್–8 ಅಂಕಪಟ್ಟಿಯಲ್ಲಿ ಗ್ರೂಪ್–2ರಲ್ಲಿ ಅಗ್ರಸ್ಥಾನಕ್ಕೇರಿತು.

ಇಲ್ಲಿನ ಆರ್.ಪ್ರೇಮದಾಸ ಕ್ರೀಡಾಂಗಣದಲ್ಲಿ ನಡೆದ ಐಸಿಸಿ ಟಿ20 ವಿಶ್ವಕಪ್ 2026ರ ಸೂಪರ್–8 ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ನ್ಯೂಜಿಲೆಂಡ್ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 159 ರನ್ ಕಲೆಹಾಕಿತು. ಈ ಮೊತ್ತವನ್ನು ಸರಾಗವಾಗಿ ಬೆನ್ನಟ್ಟಿದ ಇಂಗ್ಲೆಂಡ್ 19.3 ಓವರ್‌ಗಳಲ್ಲಿ 6 ವಿಕೆಟ್ ಕಳೆದುಕೊಂಡು 161 ರನ್ ಗಳಿಸಿ ಗೆಲುವಿನ ನಗೆ ಬೀರಿತು.

ಮೊದಲು ಬ್ಯಾಟ್ ಮಾಡಿದ ಕಿವೀಸ್‌ಗೆ ಉತ್ತಮ ಆರಂಭ ದೊರೆಯಿತು. ಸೈಫರ್ಟ್ 35 ರನ್, ಫಿನ್ ಅಲೆನ್ 29 ರನ್, ರಚಿನ್ ರವೀಂದ್ರ 11, ಗ್ಲೆನ್



ಫಿಲಿಪ್ಸ್ 39, ಮಾರ್ಕ್ ಚಾಂಪ್‌ಮನ್ 15, ಡ್ಯಾರಿಲ್ ಮಿಚೆಲ್ 3, ಕೋಲ್ ಮೆಕ್‌ನ್ನಿ 14, ನಾಯಕ ಮಿಚೆಲ್ ಸ್ಯಾಂಟ್ನರ್ ಅಜೇಯ 9 ರನ್ ಹಾಗೂ ಮ್ಯಾಟ್ ಹೆನ್ರಿ ಅಜೇಯ 1 ರನ್ ಕಲೆಹಾಕಿದರು.

ಇಂಗ್ಲೆಂಡ್ ಪರ ಆದಿಲ್ ರಶೀದ್, ವಿಲ್ ಜ್ಯಾಕ್ಸ್ ರೆಹಾನ್ ಅಹ್ಮದ್ ತಲಾ 2 ವಿಕೆಟ್, ಲಿಯಾಮ್ ಡಾಸನ್ ಒಂದು ವಿಕೆಟ್ ಪಡೆದರು. ಈ ಮೊತ್ತ ಬೆನ್ನತ್ತಿದ ಇಂಗ್ಲೆಂಡ್‌ಗೆ ಆರಂಭಿಕ ಆಘಾತ ಎದುರಾಯಿತು. ಫಿಲಿಪ್ ಸಾಲ್ಟ್ 2, ಜಾಸ್ ಬಟ್ಲರ್ ಡಕ್‌ಔಟ್, ನಾಯಕ ಹ್ಯಾರಿ ಬ್ರೂಕ್ 26, ಜಾಕೋಬ್ ಬೆಥೆಲ್ 21 ರನ್ ಗಳಿಸಿ ಬೇಗನೇ ವಿಕೆಟ್ ಒಪ್ಪಿಸಿ ನಡೆದರು.

ಬಳಿಕ ಬಂದ ಟಾಮ್ ಬ್ಯಾಂಟನ್ 33(24 ಎ), ಸ್ಯಾಮ್ ಕರನ್ 24 ರನ್ ಗಳಿಸಿದರು. ಕೊನೆಯಲ್ಲಿ ಒಂದಾದ ವಿಲ್ ಜಾಕ್ಸ್ 32(18 ಎ) ಮತ್ತು ರೆಹನ್ ಅಹ್ಮದ್ 19(7 ಎ) ಅಜೇಯರಾಗಿ ಉಳಿದು ತಂಡವನ್ನು ಗೆಲ್ಲಿಸಿಕೊಟ್ಟರು. ಕಿವೀಸ್ ಪರ ರಚಿನ್ ರವೀಂದ್ರ 3 ವಿಕೆಟ್, ಗ್ಲೇನ್ ಫಿಲಿಪ್ಸ್, ಮ್ಯಾಟ್ ಹೆನ್ರಿ ಹಾಗೂ ಲೂಕಿ ಫರ್ಗ್ಯೂಸನ್ ತಲಾ ಒಂದೊಂದು ವಿಕೆಟ್ ಪಡೆದರು.

ನಕ್ಕರೆ ಅದೇ ಸ್ವರ್ಗ

ಗೀತಾ : ನನ್ನ ಗಂಡನಿಗೆ ತುಂಬಾ ಮರೆವು. ಆಲೂಗಡ್ಡೆ ತನ್ನಿ ಅಂದರೆ ಈರುಳ್ಳಿ ತರ್ತಾರೆ.

ಸೀತಾ : ಪರವಾಗಿಲ್ಲ ಬಿಡಿ, ನಿಮ್ಮ ಗಂಡನೇ ವಾಸಿ, ನನ್ನ ಗಂಡ ನನ್ನನ್ನು ನೋಡಿದಾಗಲೆಲ್ಲ ನಿನ್ನನ್ನು ಎಲ್ಲೋ ನೋಡಿದ ಹಾಗಿದೆ ಅಂತಾರೆ...!

ಮೈಸೂರು ಮಿತ್ರ

ಶನಿವಾರ, ಫೆಬ್ರವರಿ 28, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ನೀವು ಪ್ರೀತಿಸುವವರಿಗೆ ಹಾರಲು ರೆಕ್ಕೆಗಳನ್ನು ನೀಡಿ, ಮರಳಿ ಬರಲು ಬೇರುಗಳನ್ನು ಮತ್ತು ಉಳಿಯಲು ಕಾರಣಗಳನ್ನು ನೀಡಿ. –ದಲೈಲಾಮಾ, ಬೌದ್ಧ ಗುರು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ತಲೆಗೆ ಬಿದ್ದ ನೀರು ಕಾಲಿಗೆ ಬೀಳದೆ ಇರುತ್ತದೆಯೇ?

ನಿಮ್ಮ ಪತ್ರಗಳು

ಮೈಸೂರು ರಾಜರ ಮಾದರಿ ಗ್ರೇಟರ್ ಮೈಸೂರು ನಿರ್ಮಿಸಿ

ಮಾನ್ಯರೆ,

ದೇಶಕ್ಕೆ ಮಾದರಿಯಾಗಿರುವ ಮೈಸೂರನ್ನು ನಿರ್ಮಿಸಿದ ಮೈಸೂರು ಸಂಸ್ಥಾನದ ಮಹಾರಾಜರುಗಳು ಅನುಸರಿಸಿದ ಯೋಜನೆಗಳ ಮಾದರಿಯಲ್ಲೇ ಗ್ರೇಟರ್ ಮೈಸೂರನ್ನು ನಿರ್ಮಾಣ ಮಾಡಬೇಕು ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಹೇಳಿರುವುದು ಮೆಚ್ಚುವಂತದ್ದು. ಜನಪ್ರತಿನಿಧಿಗಳಿಲ್ಲದೆ ಪ್ರಜಾಪ್ರಭುತ್ವದ ಪ್ರಕ್ರಿಯೆ ಮೂಲಕ ಗ್ರೇಟರ್ ಮೈಸೂರು ಯೋಜನೆ ಜಾರಿಯಾಗುವುದು ಸಾಧ್ಯವಿಲ್ಲ. ಆದ್ದರಿಂದ ಆದಷ್ಟು ಬೇಗ ಪಾಲಿಕೆ ಚುನಾವಣೆ ನಡೆಸುವುದು ಅಗತ್ಯ ಎಂದು ಸಂಸದ ಯದುವೀರ್ ಅವರು ಹೇಳಿರುವುದು ಸ್ವಾಗತಾರ್ಹ. ಮುಂದಿನ ನೂರು ವರ್ಷಕ್ಕೆ ಗುರಿಯಾಗಿಸಿ ಪರಿಸರ ಮತ್ತು ಪರಂಪರೆಗೆ ಹಾನಿಯಾಗದ ರೀತಿ ಹಾಗೂ ಸಮರ್ಪಕ ಮೂಲಸೌಕರ್ಯಗಳು ದೊರಕುವಂತೆ ಮಾಡಲು ಜನಪ್ರತಿನಿಧಿಗಳು, ವಿಷಯ ತಜ್ಞರು, ಆರ್ಕಿಟೆಕ್ಟ್‌ರುಗಳು, ರಿಯಲ್ ಎಸ್ಟೇಟ್ ಉದ್ಯಮಿಗಳು ಮತ್ತು ಸಾಮಾನ್ಯ ಪರಿಣಿತ ಜನತೆಯ ಜೊತೆಗೆ ವಿಸ್ತೃತವಾಗಿ ಚರ್ಚಿಸಿ, ಎಲ್ಲಾ ಅಭಿಪ್ರಾಯಗಳನ್ನು ಕ್ರೋಢೀಕರಿಸಿ ಗ್ರೇಟರ್ ಮೈಸೂರು ವ್ಯವಸ್ಥಿತವಾಗಿ ರೂಪಿತವಾಗಲು ಮೈಸೂರಿನವರೇ ಆದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗಮನಹರಿಸುವುದು ಒಳ್ಳೆಯದು.

–ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು.

ಎಂಜಿನ್ ಆಫ್ ಮಾಡಿ ಇಂಧನ ಉಳಿಸಿ ಪರಿಸರ ರಕ್ಷಿಸಿ

ಮಾನ್ಯರೆ,

ರೆಡ್ ಸಿಗ್ನಲ್ ಬಳಿ ಕಾಯುವ ಸಮಯ 100 ಸೆಕೆಂಡಿಗಿಂತಲೂ ಹೆಚ್ಚು ಇದ್ದರೆ ನಮ್ಮ ವಾಹನದ ಎಂಜಿನ್ ಸ್ವಿಚ್ ಆಫ್ ಮಾಡುವುದು ಎರಡು ರೀತಿಯಲ್ಲಿ ಫಲಕಾರಿ.

ಮೊದಲನೆಯ ಲಾಭ ಇಂಧನ ಉಳಿತಾಯ. ವಾಹನದ ಎಂಜಿನ್ ಅನ್ನು ಮತ್ತೆ ಚಾಲನೆಗೊಳಿಸಲು ಸ್ವಲ್ಪ ಹೆಚ್ಚು ಇಂಧನ ಖರ್ಚು. ಆದರೂ ಒಟ್ಟಾರೆ ಇಂಧನ ಉಳಿತಾಯ ಆಗುತ್ತದೆ. ಬೆಂಗಳೂರು ನಗರದಲ್ಲಿಯೇ ಸುಮಾರು 1 ಕೋಟಿಗೂ ಹೆಚ್ಚು ವಾಹನಗಳಿವೆ. ದಿನ ಒಂದರಲ್ಲಿ ಅರ್ಧದಷ್ಟು ಮಾತ್ರ ವಾಹನಗಳು ರಸ್ತೆಗೆ ಇಳಿಯುತ್ತವೆ. ಪ್ರತಿ ವಾಹನ ತೀರ ಅಲ್ಪವೆಂದರೂ 1ಮೀ.ಲೀ (1ml) ಇಂಧನ ಉಳಿತಾಯ ಮಾಡುತ್ತದೆ ಎಂದು ಅಂದಾಜು ಮಾಡಿದರೆ ಒಟ್ಟು 5000 (5000000%1000) ಲೀಟರ್ ಇಂಧನ ಉಳಿದು, ದಿನ ಒಂದಕ್ಕೆ ಸುಮಾರು 4 ಲಕ್ಷ ರೂಪಾಯಿಯಷ್ಟು ಉಳಿತಾಯ ಆಗುತ್ತದೆ. (50 ಲಕ್ಷ ml=5000 ಲೀಟರ್, ಒಂದು ಲೀಟರ್ ಬೆಲೆ ಸುಮಾರು 80 ರೂಪಾಯಿ).

ಎರಡನೆಯದಾಗಿ ಎಂಜಿನ್ ಹೊಗೆ ಕಡಿಮೆ ಆಗಿ ಸುತ್ತಲಿನ ಪರಿಸರ ಎಂಜಿನ್ ಹೊಗೆಯ ಮಾಲಿನ್ಯದಿಂದ ಮುಕ್ತವಾಗುತ್ತದೆ. ಸಿಗ್ನಲ್ ಬಳಿ ಕಾಯುವಾಗ ಸವಾರರು ವಾಹನಗಳ ಹೊಗೆಯ ಸೇವನೆ ಮಾಡುವುದು ತಪ್ಪುತ್ತದೆ. ಕೊಂಚ ಮಟ್ಟಿಗೆ ಶಬ್ದಮಾಲಿನ್ಯವು ಕಡಿಮೆ ಆಗುತ್ತದೆ. ಇದರ ಲಾಭವನ್ನು ಹಣದಿಂದ ಅಳೆಯಲು ಆಗದು. ಈ ನಿಯಮವನ್ನು ಎಲ್ಲಾ ನಗರ ಪ್ರದೇಶಗಳಲ್ಲಿ ಅನುಸರಿಸಿದಲ್ಲಿ ಆಗುವ ಇಂಧನ ಉಳಿತಾಯ ಅಗಾಧ. ಅದಕ್ಕಿಂತ ಮಿಗಿಲಾದ ಲಾಭ ವಾಹನದಲ್ಲಿ ಪ್ರಯಾಣಿಸುವವರಿಗೆ ವಾಯು ಮಾಲಿನ್ಯದಿಂದ ರಕ್ಷಣೆ. ಈ ನಿಟ್ಟಿನಲ್ಲಿ ತಜ್ಞರು ಗಮನ ಹರಿಸಬೇಕು.

–ಲಕ್ಷ್ಮಣ್ ಗೋರ್ಲಕಟ್ಟೆ, ಗದ್ದಿಗೆ ರಸ್ತೆ ಮೈಸೂರು

ಮೈಸೂರು ರೈಲು ನಿಲ್ದಾಣದಲ್ಲಿ ಮುಂಗಡ ಪಾವತಿ ಆಟೋ ಕೌಂಟರ್ ಪ್ರಾರಂಭಿಸಲಿ

ಮಾನ್ಯರೆ,

ಕಾರ್ಯನಿಮಿತ್ತ ನಾನು ಬೇರೆ ಊರಿಗೆ ತೆರಳಿದ್ದು ಫೆ. 22 ರಂದು ಬೆಳಗಿನ ಜಾವ 3.30ಕ್ಕೆ ಮೈಸೂರು ರೈಲು ನಿಲ್ದಾಣಕ್ಕೆ ನನ್ನ ಕುಟುಂಬ ಸಮೇತ ಬಂದು, ಮನೆಗೆ ತೆರಳಲು ಮುಂಗಡ ಪಾವತಿ ಆಟೋ ಕೌಂಟರ್ ಹತ್ತಿರ ತೆರಳಿದಾಗ ಅದು ಕಾರ್ಯ ನಿರ್ವಹಿಸುತ್ತಿರಲಿಲ್ಲ. ವಿಧಿಯಿಲ್ಲದೆ ದುಬಾರಿ ಹಣ ನೀಡಿ ಬೇರೆ ಆಟೋದಲ್ಲಿ ಮನೆಗೆ ತೆರಳಬೇಕಾಯಿತು. ನನ್ನಂತೆ ಅನೇಕ ಪ್ರಯಾಣಿಕರಿಗೂ ಸಹ ಇದೇ ಅನುಭವವಾಗಿರುತ್ತದೆ. ಗ್ರಾಮಾಂತರ ಬಸ್ ನಿಲ್ದಾಣದಲ್ಲಿ 24 ಘಂಟೆ ಮುಂಗಡ ಪಾವತಿ ಆಟೋ ಕೌಂಟರ್ ಕಾರ್ಯನಿರ್ವಹಿಸುತ್ತಿದ್ದು, ಅದರಂತೆ ಮೈಸೂರು ರೈಲು ನಿಲ್ದಾಣದಲ್ಲಿಯೂ ಸಹ ಮುಂಗಡ ಪಾವತಿ ಆಟೋ ಕೌಂಟರ್ ದಿನದ 24 ಗಂಟೆ ಕಾರ್ಯನಿರ್ವಹಿಸುವಂತೆ ಕ್ರಮ ಕೈಗೊಳ್ಳಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

–ಶ್ರೀಧರ ಹೆಗಡೆ, ಹೆಬ್ಬಾಳು 2ನೇ ಹಂತ, ಮೈಸೂರು

ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ ಬೀದಿ ಬದಿ ವ್ಯಾಪಾರಿಗಳ, ಅನಧಿಕೃತ ಪಾರ್ಕಿಂಗ್ ತಾಣ

ಮಾನ್ಯರೇ,

ಮೈಸೂರಿನ ಹೃದಯ ಭಾಗದಲ್ಲಿರುವ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ ಮತ್ತು ಬೆಂಗಳೂರು–ನೀಲಗಿರಿ ರಸ್ತೆಯ ಸುತ್ತಮುತ್ತ ಪಾದಚಾರಿಗಳ ಸ್ಥಿತಿ ದಿನದಿಂದ ದಿನಕ್ಕೆ ಶೋಚನೀಯವಾಗುತ್ತಿದೆ. ಇಲ್ಲಿನ ಫುಟ್‌ಪಾತ್‌ಗಳು ಈಗ ಪಾದಚಾರಿಗಳಿಗಿಂತ ಹೆಚ್ಚಾಗಿ ಬೀದಿ ಬದಿ ವ್ಯಾಪಾರಿಗಳ ಮತ್ತು ಅನಧಿಕೃತ ಪಾರ್ಕಿಂಗ್ ತಾಣಗಳಾಗಿ ಮಾರ್ಪಟ್ಟಿವೆ.

24 ಗಂಟೆಯೂ ಜನದಟ್ಟಣೆ ಇರುವ ಈ ಭಾಗದಲ್ಲಿ ವಾಹನ ಸವಾರರು ಟ್ರಾಫಿಕ್ ತಪ್ಪಿಸಲು ಫುಟ್‌ಪಾತ್‌ಗಳ ಮೇಲೆಯೇ ಬೈಕ್ ಚಲಿಸುತ್ತಿರುವುದು ಸಾಮಾನ್ಯವಾಗಿದೆ. ಇದರಿಂದಾಗಿ ಬಸ್ ಹತ್ತಲು ಬರುವ ಪ್ರಯಾಣಿಕರು, ವೃದ್ಧರು ಜೀವ ಕೈಯಲ್ಲಿ ಹಿಡಿದು ರಸ್ತೆ ಮಧ್ಯದಲ್ಲೇ ನಡೆಯಬೇಕಾದ ಅನಿವಾರ್ಯತೆ ಇದೆ. ಪಾದಚಾರಿ ಮಾರ್ಗಗಳು ವಾಹನ ಸವಾರರ 'ಶಾರ್ಟ್‌ಕಟ್' ಹಾದಿಗಳಾಗುತ್ತಿರುವುದು ದುರದೃಷ್ಟಕರ.

ನಗರದ ಕೇಂದ್ರ ಬಿಂದುವಾಗಿರುವ ಈ ಪ್ರದೇಶದಲ್ಲಿ ಸಂಚಾರಿ ನಿಯಮಗಳ ಬಹಿರಂಗ ಉಲ್ಲಂಘನೆ ನಡೆಯುತ್ತಿದ್ದರೂ ಅಧಿಕಾರಿಗಳು ಮೌನವಾಗಿರುವುದು ವಿಷಾದನೀಯ. ಸಂಬಂಧಪಟ್ಟ ಸಂಚಾರ ಪೊಲೀಸ್ ಇಲಾಖೆ ಮತ್ತು ಪಾಲಿಕೆಯವರು ಈ ಬಗ್ಗೆ ತಕ್ಷಣ ಗಮನಹರಿಸಿ, ಅತಿಕ್ರಮಣ ತೆರವುಗೊಳಿಸಿ, ಪಾದಚಾರಿಗಳ ಸುರಕ್ಷತೆಗೆ ಆದ್ಯತೆ ನೀಡಬೇಕೆಂದು ಈ ಮೂಲಕ ವಿನಂತಿಸುತ್ತೇನೆ.

–ಬಾಲಾಜಿ ಯು.ಟಿ, ಮಹಾರಾಜ ಕಾಲೇಜು, ಮೈಸೂರು.

ಪುನರಪಿ ಜನನಂ, ಪುನರಪಿ ಮರಣಂ!



“ಭಾರತೀಯ ವೇದಗಳಲ್ಲಿ ಲಕ್ಷಾಂತರ ಜೀವರಾಶಿಗಳಲ್ಲಿನ ಜೀವಿಯೊಂದರಲ್ಲಿ ಜನಿಸಿ ಮರಣಾನಂತರ ಪ್ರತಿಯೊಂದು ಜೀವಿಯು ಕರ್ಮಗಳಿಗೆ ಅನುಸಾರವಾಗಿ ಮತ್ತೇ ಹುಟ್ಟುವುದು ಎಂದು ಹೇಳಲಾಗಿದೆ, ಒಟ್ಟಿನಲ್ಲಿ ಎಲ್ಲಾ ಧರ್ಮಗಳಲ್ಲೂ ಪುನರ್ಜನ್ಮದ ಬಗ್ಗೆ ನಂಬಿಕೆ ಇರುವುದು ಸತ್ಯ, ರಷ್ಯಾದ ಲಿಯೋ ಟಾಲ್ ಸ್ಟಾಯ್ ಹೇಳಿಕೆಯೂ ಅದೇ ಸಂದೇಶವನ್ನು ನೀಡುತ್ತದೆ. ನಮ್ಮ ಪ್ರಸ್ತುತ ಜೀವನವು ಲಕ್ಷಾಂತರ ಜನ್ಮಗಳಲ್ಲಿ ಒಂದು, ಜನ್ಮಾಂತರ ಪಡೆಯುತ್ತಾ ನಾವು ಜನಿಸುತ್ತೇವೆ ಮತ್ತು ಸಾಯುತ್ತೇವೆ.



ಮಿರ್ಲೆ ಚಂದ್ರಶೇಖರ
ಲೇಖಕರು,
ಮೊ: 9916129654

ಪುನರ್ಜನ್ಮದ(Reincarnation) ಬಗ್ಗೆ ನನಗಿರುವಂತೆಯೇ ಬಹಳಷ್ಟು ಜನರಿಗೆ ಗೊಂದಲಗಳಿರುವುದನ್ನು ಅವರುಗಳು ಆಡುವ ಮಾತುಗಳಿಂದ ಗ್ರಹಿಸಿದ್ದೇನೆ, ಈ ಬಗ್ಗೆ ತಮ್ಮಲ್ಲಿರುವ ಜ್ಞಾನಾನುಸಾರ ಸಮರ್ಥಿಸಿಕೊಳ್ಳುವುದನ್ನು ನೋಡಿದ್ದೇವೆ ಹಾಗೆಯೇ ಮೈಮೇಲೆ ದೆವ್ವ ಭೂತಗಳು ಬರುವುದನ್ನು ಇಲ್ಲ/ಇದೆ ಎಂಬುದಾಗಿ ವಾದಿಸುವವರನ್ನೂ ಕಂಡಿದ್ದೇವೆ. ದೇವರು ಇದ್ದಾನೆಯೇ, ದೇವರನ್ನು ನೋಡಿದ್ದೀರಾ, ಕಣ್ಣಿಗೇಕೆ ಕಾಣಿಸುವುದಿಲ್ಲ, ದೇವರು ಇದ್ದರೆ ಅವನ ನಿಜವಾದ ರೂಪ ಹೇಗಿದೆ ಇತ್ಯಾದಿ ಪ್ರಶ್ನೆಗಳಂತೆಯೇ ಪುನರ್ಜನ್ಮ ಇದೆಯೇ ಅಥವಾ ಇಲ್ಲವೇ ಎಂಬುದರ ನಡುವೆ ನಿಂತು ಚಿಂತನೆ ಹಾಗೂ ಸಂಶೋಧನೆಯಲ್ಲಿ ಮುಳುಗಿದ್ದಾರೆ ಬುದ್ಧಿಜೀವಿಗಳೆನಿಸಿಕೊಂಡಿರುವ ಹಲವರು. ಏನೊಂದು ಗೊತ್ತಿಲ್ಲದವರ ಮನಸ್ಸು ಯಾವಾಗಲೂ ನಿಶ್ಚಿಂತೆಯಿಂದ ಇರುತ್ತದೆ. ಯಾವುದಕ್ಕೂ ತಲೆ ಕೆಡಿಸಿಕೊಳ್ಳುವುದಿಲ್ಲ. ಬರುವುದೆಲ್ಲವನ್ನು ತಿಳುವಳಿಕೆಯ ಮಟ್ಟದಲ್ಲಿ ಎದುರಿಸಿ ನೆಮ್ಮದಿಯಾಗಿ ಇದ್ದುಬಿಡುತ್ತಾರೆ.

ಭಗವದ್ಗೀತೆಯ ಎರಡನೇ ಅಧ್ಯಾಯದ 20ನೇ ಶ್ಲೋಕದಲ್ಲಿ ಹುಟ್ಟಿನ ಕುರಿತಾಗಿ ಹೇಳಿರುವಂತೆ; ಆತ್ಮಕ್ಕೆ ಯಾವಾಗಲೂ ಹುಟ್ಟು ಎನ್ನುವುದಿಲ್ಲ, ಸಾವು ಎನ್ನುವುದಿಲ್ಲ, ಅದು ಹಿಂದೆ ಹುಟ್ಟಿದ್ದಿಲ್ಲ, ಈಗ ಹುಟ್ಟಿ ಬರುವುದಿಲ್ಲ, ಮುಂದೆ ಹುಟ್ಟುವುದೂ ಇಲ್ಲ, ಅದು ಜನ್ಮರಹಿತವಾದದ್ದು, ನಿತ್ಯವಾದದ್ದು, ಶಾಶ್ವತವಾದದ್ದು, ಪುರಾತನವಾದದ್ದು, ದೇಹವನ್ನು ಕೊಂದಾಗ ಅದು ಸಾಯುವುದಿಲ್ಲ? ಅಂದರೆ ದೇಹಕ್ಕೆ ಸಾವುಂಟು ಆತ್ಮಕ್ಕೆ ಸಾವಿಲ್ಲ ಎನ್ನುವುದೇ ಇದರ ಅರ್ಥ.

ದೆಹಲಿಯ ಸಮೀಪದ ಹಳ್ಳಿಯೊಂದರ ಶಾಂತಿ ದೇವಿಯ ಕಥೆಯು ಓದುಗರಿಗೆ ವಿಚಿತ್ರವಾದ ಅನುಭವ ಹಾಗೂ ಪುನರ್ಜನ್ಮದಲ್ಲಿ ಆಸಕ್ತಿಯನ್ನು ಉಂಟುಮಾಡುವುದು. 11, ಡಿಸೆಂಬರ್ 1926ರಲ್ಲಿ ಜನಿಸಿದ ಇವರು ತನ್ನ ಹಿಂದಿನ ಜನ್ಮವನ್ನು ನೆನಪಿಸಿಕೊಳ್ಳುವುದಾಗಿ ಹೇಳಿಕೊಂಡಿದ್ದರಿಂದ ಪುನರ್ಜನ್ಮದ ಸಂಶೋಧನೆಯ ವಿಷಯವಾದಳು.

ಆತ್ಮಗಳ ಪುನರ್ಜನ್ಮ ಅಥವಾ ದೇಹಾಂತರದ ಸಿದ್ಧಾಂತವು ಪುರಾಣ ಕಥೆಗಳೇ ಅಥವಾ ನೈಜವೇ ಎನ್ನುವುದನ್ನು ತತ್ವಜ್ಞಾನಿಗಳು ಹಾಗೂ ವಿಜ್ಞಾನಿಗಳು ಚರ್ಚಿಸುವುದು ಮತ್ತು ಸಂಶೋಧನೆಗಳು ನಡೆದಿವೆ. ಮನೋವೈದ್ಯ ಇಯಾನ್ ಪ್ರಿಟಿಮನ್ ಸ್ಟೀವನ್ಸನ್‌ರವರು ಪುನರ್ಜನ್ಮದ ಕುರಿತು ಮುನ್ನೂರು ಪ್ರಬಂಧಗಳು ಮತ್ತು ಹದಿನಾಲ್ಕು ಪುಸ್ತಕಗಳನ್ನು ಬರೆದಿದ್ದಾರೆ. ತತ್ವಜ್ಞಾನಿ ಕೀತ್ ಅಗಸ್ಟೀನ್‌ರವರು ಉಲ್ಲೇಖಿಸಿರುವ ಹಾಗೆ ಸ್ಟೀವನ್‌ರವರ ಬಹುಪಾಲು ಪ್ರಕರಣಗಳು ಪುನರ್ಜನ್ಮದಲ್ಲಿ ಧಾರ್ಮಿಕ ನಂಬಿಕೆ ಪ್ರಬಲವಾಗಿರುವ ದೇಶಗಳಿಂದ ಬಂದಿವೆ ಮತ್ತು ಇತರೆಡೆ ವಿರಳ. ಪುನರ್ಜನ್ಮವು ಸಂಶಯಾಸ್ಪದ ಊಹೆಗಳನ್ನು ಹುಟ್ಟು ಹಾಕುತ್ತದೆ ಹಾಗೂ ಆಧುನಿಕ ವಿಜ್ಞಾನದ ಸಂಶೋಧನೆಯ ಫಲಿತಾಂಶಗಳಿಗೆ ತಾಳೆಯಾಗುವುದಿಲ್ಲ. ಸ್ಟೀವನ್‌ರವರ ಕೃತಿಗಳು ವಸ್ತುನಿಷ್ಠವಾಗಿದ್ದರೂ ನಿಜವಾದ ಪುರಾವೆಗಳನ್ನು ಕಂಡುಹಿಡಿಯುವುದು ಅವರ ಗುರಿಯಾಗಿತ್ತು.

ಗ್ರೀಕ್ ತತ್ವಜ್ಞಾನಿ ಪ್ಲೇಟೋರವರ ಫವಡೇ ಕೃತಿಯಲ್ಲಿ ಅವರ ಗುರು ಸಾಕ್ರಟೀಸ್ ಮರಣಾ ನಂತರದ ಪುನರ್ಜನ್ಮದ ಬಗ್ಗೆ ಸಾಯುವ ಮೊದಲು ಏನು ಘೋಷಿಸಿದ್ದರು ಎಂಬುದರ ಒಳಹವುಗಳನ್ನು ಒದಗಿಸುತ್ತದೆ ಹಾಗೂ ಪುನರ್ಜನ್ಮವನ್ನು ಸಮರ್ಥಿಸಿದ್ದರು. ಮತ್ತೆ ಹುಟ್ಟುವುದು ನಿಜಕ್ಕೂ ಇದೆ ಮತ್ತು ಜೀವಂತ ಇರುವವರು ಸತ್ತವರಿಂದಲೇ ಹುಟ್ಟುತ್ತಾರೆ ಎಂಬ ವಿಶ್ವಾಸ ನನಗಿದೆ ಎಂದು ಸಾಕ್ರಟೀಸ್ ಹೇಳಿರುವುದಾಗಿ ಉಲ್ಲೇಖಿಸಲಾಗಿದೆ. ಆದರೆ ಇತಿಹಾಸಕಾರ ಮತ್ತು ತತ್ವಜ್ಞಾನಿ ಕ್ಸೆನೋಫೋನ್ ಪುನರ್ಜನ್ಮದ ಬಗ್ಗೆ ಸಾಕ್ರಟೀಸ್ ಹೇಳಿಕೆಯನ್ನು ಒಪ್ಪುವುದಿಲ್ಲ.

ಭಾರತದಲ್ಲಿ ಕ್ರಿ.ಶ. 100ರಲ್ಲಿ ಕೇವಲ 5 ಕೋಟಿ ಜನಸಂಖ್ಯೆ ಇದ್ದದ್ದು ಪ್ರಸ್ತುತ 144 ಕೋಟಿಯನ್ನು ಮೀರಿ ವಿಶ್ವಕ್ಕೇ ಮೊದಲ ಸ್ಥಾನದಲ್ಲಿದೆ, ಸತ್ತವರಿಂದಲೇ ಹುಟ್ಟುವುದಾದರೆ, 139 ಕೋಟಿ ಆತ್ಮಗಳು ಆ ದಿನಗಳಲ್ಲಿ ಏನು ಮಾಡುತ್ತಿದ್ದವು?. ಸತ್ತವರಿಂದಲೇ ಹುಟ್ಟುವುದಾಗಿದ್ದರೆ, ಜನಸಂಖ್ಯೆ ಏರಿಕೆ ಆಗದೆ ಸಮಸ್ಥಿತಿಯಲ್ಲಿ ಇರಬೇಕಾಗಿತ್ತು. ಮನುಷ್ಯ ಅಥವಾ ಪ್ರತೀ ಜೀವಿಯು ರಾಸಾಯನಿಕ ಕ್ರಿಯೆ ಅಲ್ಲದೆ ಬೇರೇನಿಲ್ಲ. ದೇಹದಲ್ಲಿನ ರಾಸಾಯನಿಕ ಅಂಶಗಳಲ್ಲಿ ಏರುಪೇರು ಆದಾಗ ಆರೋಗ್ಯ ಕೆಟ್ಟಿದೆ ಎಂದರ್ಥ, ವೈದ್ಯರು ಯಾವ ರಾಸಾಯನಿಕ ಅಂಶದಲ್ಲಿ ಕೊರತೆ ಇದೆ ಎಂಬುದನ್ನು ಲ್ಯಾಬ್‌ಗಳ ಪರೀಕ್ಷಾ ಫಲಿತಾಂಶದಿಂದ ತಿಳಿದು ಅದಕ್ಕೆ ಅನುಗುಣವಾಗಿ ಔಷಧ ನೀಡುತ್ತಾರೆ.

ಭಾರತೀಯ ವೇದಗಳಲ್ಲಿ 'ಲಕ್ಷಾಂತರ ಜೀವರಾಶಿಗಳಲ್ಲಿನ ಜೀವಿಯೊಂದರಲ್ಲಿ ಜನಿಸಿ ಮರಣಾನಂತರ ಪ್ರತಿಯೊಂದು ಜೀವಿಯು ಕರ್ಮಗಳಿಗೆ ಅನುಸಾರ ವಾಗಿ ಮತ್ತೇ ಹುಟ್ಟುವುದು' ಎಂದು ಹೇಳಲಾಗಿದೆ, ಒಟ್ಟಿನಲ್ಲಿ ಎಲ್ಲಾ ಧರ್ಮಗಳಲ್ಲೂ ಪುನರ್ಜನ್ಮದ ಬಗ್ಗೆ ನಂಬಿಕೆ ಇರುವುದು ಸತ್ಯ, ರಷ್ಯಾದ ಲಿಯೋ ಟಾಲ್ ಸ್ಟಾಯ್ ಹೇಳಿಕೆಯೂ ಅದೇ ಸಂದೇಶವನ್ನು ನೀಡುತ್ತದೆ. ನಮ್ಮ ಪ್ರಸ್ತುತ ಜೀವನವು ಲಕ್ಷಾಂತರ ಜನ್ಮಗಳಲ್ಲಿ ಒಂದು, ಜನ್ಮಾಂತರವನ್ನು ಪಡೆಯುತ್ತಾ ನಾವು ಜನಿಸುತ್ತೇವೆ ಮತ್ತು ಸಾಯುತ್ತೇವೆ. ಹೀಗೆ ಪುನರಾವರ್ತಿಸುತ್ತದೆ. ನಮ್ಮ ನಿಜ ಜೀವನ ಭಗವಂತನೊಡನೆ ಅದನ್ನು ಪಡೆಯುವವರೆಗೂ ಈ ಚಕ್ರ ನಮ್ಮ ಜೀವನದಲ್ಲಿ ಪುನರಾವರ್ತಿಸುತ್ತದೆ. ನೊಬೆಲ್ ಪ್ರಶಸ್ತಿ ವಿಜೇತರನ್ನು ಒಳಗೊಂಡಂತೆ ಖ್ಯಾತನಾಮರಲ್ಲಿ ಹಲವರು ಪುನರ್ಜನ್ಮವನ್ನು ನಂಬಿದ್ದರು.

ಚಿಪ್ಪಾಟಿ ಎಂಬ ಊರಲ್ಲಿ ರವಿಶಂಕರ್(ಗುರೂಜಿ ಅಲ್ಲ) ಎಂಬಾತನು 1951ರಲ್ಲಿ ಜನಿಸುತ್ತಾರೆ. ಅವನು ಎರಡೂವರೆ ವರ್ಷ ವಯಸ್ಸಿನಲ್ಲಿ ನನ್ನ ಹೆಸರು ಮುನ್ನ, ನಾನು ಪ್ರಸಾದ್ ಎಂಬುವನ ಮಗ, ನನ್ನ ಆಟಿಕೆಗಳನ್ನು ನನಗೆ ನೀಡಿ ಎಂದು ತನ್ನ ತಂದೆ–ತಾಯಿಯರನ್ನು ಗೋಗರೆಯುತ್ತಿದ್ದನಂತೆ. ಮುಂದುವರಿದು ನನ್ನ ಆರನೆಯ ವಯಸ್ಸಿನಲ್ಲಿ ನನ್ನನ್ನು ಕೊಲೆ ಮಾಡಲಾಯಿತು ಎಂದು ಹೇಳುವುದನ್ನು ಯಾರೂ ನಂಬುತ್ತಿರಲಿಲ್ಲ. ವರ್ಜೀನಿಯಾ ವಿಶ್ವವಿದ್ಯಾಲಯದ ಮನಃಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಇವನ್ ಸ್ಟೀವನ್‌ಸನ್ ಈ ಹೇಳಿಕೆಗಳ ಸತ್ಯಾ ಸತ್ಯತೆಯನ್ನು ಶೋಧಿಸಿದರು, ಅದು ನಿಜವಾಗಿತ್ತು. ಆರು ವರ್ಷದ ಮುನ್ನಾನನ್ನು ಕೊಂದು ದೇವಸ್ಥಾನದ ಹಿಂಬದಿಯಲ್ಲಿ ಹೂತಿದ್ದರು. ಮುನ್ನ ತಂದೆ ಜೋಗೇಶ್ವರ್ ಪ್ರಸಾದ್ ಎಂಬಾತ ತಮ್ಮ ಮಗನು ಆರನೇ ವಯಸ್ಸಿನಲ್ಲಿ ಕಾಣೆಯಾಗಿದ್ದನ್ನು ಒಪ್ಪಿದನು. ಅವನ ತಾಯಿಗೆ ಹುಚ್ಚು ಹಿಡಿದಿತ್ತು, ರವಿಶಂಕರ್ ಕೇಳುತ್ತಿದ್ದ ಆಟಿಕೆಗಳನ್ನೆಲ್ಲಾ ಪ್ರಸಾದ್ ಮುನ್ನಾಗೆ ಕೊಡಿಸಿದ್ದನು. ತನ್ನ ಮಗನು ಮರುಜನ್ಮ ಪಡೆದಿರುವುದನ್ನು ಕಂಡು ತೃಪ್ತಿ ಆಯಿತಾದರೂ ಹೂತಿದ್ದ ಅವನ ಮೃತ ದೇಹವನ್ನು ಕಂಡು ನೊಂದುಕೊಂಡನು. ಸಾಕ್ಷಿಗಳು ಇಲ್ಲವಾದ್ದರಿಂದ ಕೊಲೆಗಡುಕರಿಗೆ ಶಿಕ್ಷೆ ಆಗಲಿಲ್ಲ.

ಪುನರ್ಜನ್ಮದ ಬಗ್ಗೆ ಬಹಳಷ್ಟು ಪ್ರಶ್ನೆಗಳು ಕಾಡುತ್ತವೆ. ಭಗವದ್ಗೀತೆ ಹಾಗೂ ವೇದಗ್ರಂಥಗಳಲ್ಲಿ ಇದಕ್ಕೆ ಉತ್ತರವನ್ನು ಕಾಣಬಹುದು. ಶಾಂತಿದೇವಿಯ ಕಥೆಯು ಇದರಂತೆಯೇ ಮತ್ತೊಂದು, 1926ರಲ್ಲಿ ಜನಿಸಿದ ಅವರು ತಮ್ಮ ಹಿಂದಿನ ಜನ್ಮದ ಕಥೆಯನ್ನು ನೆನಪಿಸಿಕೊಳ್ಳುತ್ತಾಳೆ. 1902ರಲ್ಲಿ ಮಥುರಾದಲ್ಲಿ ಲುಗ್ಡಿದೇವಿಯಾಗಿ ಜನಿಸಿದ್ದ ಶಾಂತಿದೇವಿ ಪ್ರಕರಣವು ಮಹಾತ್ಮಗಾಂಧೀಯವರ ಗಮನಕ್ಕೆ ಬರಲಾಗಿ ಪರಿಶೀಲಿಸಲು ರಚಿಸಿದ ಆಯೋಗವು ಬೆಂಬಲಿಸಿತಾದರೂ ಕೆಲವು ಸಂಶೋಧಕರ ವರದಿಯು ಇದನ್ನು ಪ್ರಶ್ನಿಸಿತು ಮತ್ತು ಇವರ ಪುನರ್ಜನ್ಮದ ಕುರಿತಾಗಿ ಲೇಖನಗಳು ಹಾಗೂ ಪುಸ್ತಕಗಳು ಪ್ರಕಟವಾದವು.

ಮಥುರಾದಲ್ಲಿ ಕೇದಾರನಾಥ ಎಂಬ ವ್ಯಾಪಾರಿಯನ್ನು ಮದುವೆಯಾಗಿದ್ದ ಲುಗ್ಡಿದೇವಿಯು ಮಗುವಿಗೆ ಜನ್ಮ ನೀಡಿದ ಹತ್ತು ದಿನಗಳ ನಂತರ 23ನೇ ವಯಸ್ಸಿನಲ್ಲಿ ನಿಧನಳಾಗಿದ್ದಳು. ಶಾಂತಿದೇವಿಯು ನಾಲ್ಕು ವರ್ಷದವಳಾಗಿದ್ದಾಗ ಹಿಂದಿನ ಜೀವನವನ್ನು ನೆನಪಿಸಿಕೊಳ್ಳಲು ತನ್ನ ನಿಜವಾದ ಮನೆ ದೆಹಲಿಯ ತನ್ನ ಮನೆಯಿಂದ 145 ಕಿಮೀ ದೂರದ ಮಥುರಾದಲ್ಲಿದೆ ಎಂದು ಶಾಲೆಯಲ್ಲಿ ಶಿಕ್ಷಕರು ಹಾಗೂ ಮುಖ್ಯೋಪಾಧ್ಯಾಯರಿಗೆ ಹೇಳಿದಳು. ಪುಟ್ಟಹುಡುಗಿ ತನ್ನ ಪತಿ ಒಬ್ಬ ಬಟ್ಟೆ ವ್ಯಾಪಾರಿ, ಓದುವ ಕನ್ನಡಕ ಧರಿಸುತ್ತಿದ್ದರು. ಎಡ ಕೆನ್ನೆಯ ಮೇಲೆ ನರಹುಲಿ ಇತ್ತು ಹಾಗೂ ಬಿಳಿ ಚರ್ಮದ ವ್ಯಕ್ತಿಯಾಗಿದ್ದರು ಎಂಬುದಾಗಿ ಗಂಡನ ವೃತ್ತಿ, ಮುಖಚರ್ಯೆ, ಬಣ್ಣವನ್ನು ಕರಾರುವಕ್ಕಾಗಿ ಹೇಳುತ್ತಿದ್ದಳು. ಅವಳನ್ನು ಪರಿಶೀಲನೆ ನಡೆಸಲಾಗಿ ನಿಜ ಇರಬಹುದೆಂದು ಮಥುರಾದಲ್ಲಿ ಹೋಲಿಕೆ ಇರುವ ಬಟ್ಟೆ ವ್ಯಾಪಾರಿ ಕೇದಾರನಾಥನನ್ನು ಪತ್ತೆಹಚ್ಚುವಲ್ಲಿ ಸಫಲರಾದರು. ಅವರು ಏಳು ವರ್ಷಗಳ ಹಿಂದೆ ಗಂಡು ಮಗುವಿಗೆ ಜನ್ಮ ನೀಡಿ ಹತು ದಿನಗಳ ನಂತರ ತಮ್ಮ ಪತ್ನಿ ಲುಗ್ಡಿದೇವಿಯನ್ನು ಕಳೆದುಕೊಂಡಿದ್ದರು.

ಕೇದಾರನಾಥನು ದೆಹಲಿಯಲ್ಲಿದ್ದ ಸಂಬಂಧಿಕ ಕಾಂಜಿಲಾಲ್ ಜೊತೆ ದಾರಿ ತಪ್ಪಿಸುವ ಸಲುವಾಗಿ ಸಹೋದರನೆಂದುಕೊಂಡು, ಹಾಲಿ ಪತ್ನಿ ಹಾಗೂ ಮಗ ನವನೀತ್‌ಲಾಲ್‌ನೊಂದಿಗೆ ಶಾಂತಿದೇವಿ ಇದ್ದಲ್ಲಿಗೆ ಬಂದರು. ನೋಡಿದ ತಕ್ಷಣವೇ ಅವನನ್ನು ಮತ್ತು ಮಗನನ್ನು ಗುರುತಿಸಿದಳು. ಕೇದಾರನಾಥನು ಹೆಂಡತಿಯೊಂದಗಿನ ಜೀವನದ ಹಲವು ವಿವರಗಳನ್ನು ಬಲ್ಲವನಾಗಿದ್ದರಿಂದ ಶಾಂತಿದೇವಿಯೊಂದಿಗೆ ಚರ್ಚಿಸಿ ನಿಜವಾಗಿಯೂ ಲುಗ್ಡಿದೇವಿಯ ಪುನರಾವತಾರ ಎಂದು ಒಪ್ಪಿಕೊಂಡನು.

ತನಿಖೆಗಾಗಿ ಗಾಂಧೀಜಿಯವರು ರಚಿಸಿದ್ದ ಲೇಖಕರು, ನಾಯಕರು ಹಾಗೂ ವಿಚಾರವಾದಿಗಳನ್ನು ಒಳಗೊಂಡ 15 ಜನರಿದ್ದ ಆಯೋಗವು ಮಥುರಾಗೆ ಭೇಟಿ ನೀಡಿತು. ಅಲ್ಲಿ ಲುಗ್ಡಿದೇವಿಯ ಅಜ್ಜನನ್ನು ಸೇರಿದಂತೆ ಹಲವಾರು ಕುಟುಂಬ ಸದಸ್ಯರನ್ನು ಪ್ರಶ್ನಿಸಿದರು. 1936ರಲ್ಲಿ ಪ್ರಕಟವಾದ ಆಯೋಗದ ವರದಿಯು ಶಾಂತಿದೇವಿ ನಿಜವಾಗಿಯೂ ಲುಗ್ಡಿದೇವಿಯ ಪುನರ್ಜನ್ಮ ಎಂದು ತೀರ್ಮಾನಿಸಿತು. ಮರುಜನ್ಮದ ಶಾಂತಿದೇವಿಯು ಮದುವೆಯಾಗಲಿಲ್ಲ ಎಂಬುದು ಈ ಜನ್ಮದಲ್ಲಿ ಬಹುಶಃ ತಾನೇ ವಿಧಿಸಿಕೊಂಡ ತೀರ್ಮಾನ ಇರಬಹುದು.

ಬೆಳಕಿಗೆ ಬರದ ಇಂಥ ಪ್ರಕರಣಗಳು ಬಹಳಷ್ಟಿವೆ. ಇವು ಭಗವದ್ಗೀತೆಯ ಸಾರವನ್ನು ಪುಷ್ಟೀಕರಿಸುತ್ತವೆ. ದೃಢವಾಗಿ ಆತ್ಮಗಳಿಗೆ ಹುಟ್ಟು ಮತ್ತು ಸಾವು ಎರಡೂ ಇಲ್ಲ ಎನ್ನುವಷ್ಟು ಸಶಕ್ತ ನಾನಲ್ಲದಿದ್ದರೂ ಇಂತಹ ಪ್ರಕರಣಗಳು ನಂಬುವಂತೆ ಮಾಡುತ್ತವೆ. ಆತ್ಮಗಳು ಜೀವಂತ ಇರುವ ಮತ್ತೊಂದು ದೇಹಕ್ಕೆ ಪ್ರವೇಶಿಸುವುದನ್ನು ಕೇಳಿದ್ದೇವೆ. ಮೂಲ ಆತ್ಮಕ್ಕೆ ಮಾತೃಭಾಷೆಯ ಹೊರತಾಗಿ ಬೇರೆ ಭಾಷೆಗಳು ಬರುತ್ತಿರಲಿಲ್ಲವಾದರೂ ಹೊಸ ಆತ್ಮ ಸೇರಿಕೊಂಡಾಗ ಇರುವಷ್ಟು ಕಾಲ ಇತರೆ ಭಾಷೆಗಳನ್ನು ಸುಲಲಿತವಾಗಿ ಮಾತನಾಡಿರುವುದನ್ನು ಕೇಳಿದ್ದೇವೆ. ಇದು ಹೇಗೆ ಸಾಧ್ಯವಾಯಿತು?.

ಪುನರ್ಜನ್ಮಗಳ ಕುರಿತು ನೂರೆಂಟು ಪ್ರಶ್ನೆಗಳು ಎಲ್ಲರಲ್ಲೂ ಆಗಿಂದಾಗ್ಗೆ ಉದ್ಭವಿಸುತ್ತಿರುತ್ತವೆ, ಮಾಡಿದ ಪಾಪಕರ್ಮಗಳಿಗೆ ಅನುಸಾರವಾಗಿ ಮುಂದಿನ ಜನ್ಮದಲ್ಲಿ ಹುಟ್ಟುತ್ತಾರೆ. ಹಾಗಾದರೆ ಪಾಪಕರ್ಮಗಳನ್ನು ಮಾಡಿಸುವವರು ಯಾರು? ದಂಪತಿಗಳಿಗೆ ಹುಟ್ಟಿದವರಲ್ಲಿ ಎಲ್ಲರೂ ಒಂದೇ ರೀತಿ ಇರುವುದಿಲ್ಲವೇಕೆ, ಹೆಣ್ಣಾಗಿ ಹುಟ್ಟಿದವರು ಮುಂದಿನ ಜನ್ಮದಲ್ಲೂ ಹೆಣ್ಣಾಗಿಯೇ ಹುಟ್ಟುತ್ತಾರೆಯೇ, ಜೀವರಾಶಿಗಳಲ್ಲಿ ಮನುಷ್ಯ ಮಾತ್ರ ವಿಭಿನ್ನ, ಪ್ರಕೃತಿಯಲ್ಲಿ ನಡೆಯುವ ಅವಘಡಗಳಿಗೆಲ್ಲಾ ಇವನೇ ಕಾರಣನಾಗುತ್ತಾನೆ. ಪ್ರಾಣಿಗಳಿಗೂ ನಮ್ಮಂತೆ ಬುದ್ಧಿ ಕೊಡಲಿಲ್ಲವೇಕೆ, ಮರುಜನ್ಮದ ನೆನಪುಗಳು ಎಲ್ಲರಿಗೂ ಬರದೆ ಕೆಲವರಿಗೆ ಮಾತ್ರ ಬರಲು ಕಾರಣವೇನು, ಆತ್ಮಗಳು ಒಂದೇ ಗುಣಗಳನ್ನು ಅಳವಡಿಸಿಕೊಳ್ಳಲಿಲ್ಲವೇಕೆ, ಯುಗಪುರುಷರೆಲ್ಲರೂ ಇಂದಿನ ಜನ್ಮದಲ್ಲೂ ಜನಿಸಿ ನಮ್ಮ ನಡುವೆ ಇದ್ದಾರೆಯೇ. ಇದ್ದರೆ ಬೆಳಕಿಗೆ ಬರದೆ ಮರೆಯಲ್ಲಿ ಇರುವರೇಕೆ. ಇಲ್ಲಿವರೆಗೆ ಎಷ್ಟು ಜನ್ಮಗಳನ್ನು ಎತ್ತಿದ್ದೇವೆ ಎಂಬುದನ್ನು ತಿಳಿಯುವುದೇಗೆ ಆತ್ಮಕ್ಕೆ ಲಿಂಗಬೇದವಿದೆಯೇ, ದೇವರ ನ್ಯಾಯಾಲಯದಲ್ಲಿ ಪಕ್ಷಪಾತ ನಡೆಯುತ್ತಿದೆಯೇ. ಒಬ್ಬೊಬ್ಬರಿಗೂ ಒಂದೊಂದು ನ್ಯಾಯ ಕೊಟ್ಟನೇಕೆ. ಜೀವರಾಶಿಗಳನ್ನು ಭೂಮಿಯ ಮೇಲೆ ಸೃಷ್ಟಿಸಿದ ಕಾರಣವಾದರೂ ಏನು. ಹುಟ್ಟಿದವರೆಲ್ಲರಿಗೂ ಹಿಂದಿನ ಜನ್ಮದ ನೆನಪಿನ ಶಕ್ತಿ ಇದ್ದಿದ್ದರೆ ಏನೆಲ್ಲಾ ಆಗುತ್ತಿತ್ತು. ಎಲ್ಲಾ ಜೀವರಾಶಿಗಳ ಸಂವಹನ ಭಾಷೆ ಒಂದೇ ಇರುತ್ತದೆ ಆದರೆ ಮನುಷ್ಯನ ಭಾಷೆ ಏಳು ಸಾವಿರಕ್ಕಿಂತಲೂ ಹೆಚ್ಚು ಇರುವುದೇಕೆ. ಹೀಗೆ ಪ್ರಶ್ನೆಗಳ ಉದ್ದ ಪಟ್ಟಿಯನ್ನು ತಯಾರಿಸಬಹುದು, ಆದರೆ ನಿಖರವಾದ ಉತ್ತರ ಸಿಗುವುದು ಕಷ್ಟ.

ಪುನರಪಿ ಜನನಂ, ಪುನರಪಿ ಮರಣಂ, ಪುನರಪಿ ಜನನೀಜಾತರೇ ಶಯನಮ್। ಇಹ ಸಂಸಾರೇ ಬಹುದುಸ್ತಾರೇ ಕೃಪಯಾ ಪಾರೇ ಪಾಹಿ ಮುರಾರೇ॥? ಇದು ಆದಿಶಂಕರರು ರಚಿಸಿರುವ ಭಜಗೋವಿಂದಂನ 22ನೇ ಪದ್ಯವಾಗಿದ್ದು, ಇದರ ಅನುಸಾರ ಅಂತ್ಯವಿಲ್ಲದ ಜನ್ಮಗಳ ಚಕ್ರದಲ್ಲಿ ಸಿಲುಕಿಕೊಂಡಿದ್ದೇವೆ.

ಸಾರ್ವಜನಿಕ ಸ್ಥಳದಲ್ಲಿ ದುರ್ವರ್ತನೆ; ವ್ಯಕ್ತಿ ವಿರುದ್ಧ ಪ್ರಕರಣ ದಾಖಲು

ಮೈಸೂರು,ಫೆ.27(ಪಿಎಂ)– ಗಾಂಜಾ ನಶೆಯಲ್ಲಿ ಸಾರ್ವಜನಿಕ ಸ್ಥಳದಲ್ಲಿ ದುರ್ವರ್ತನೆ ತೋರುತ್ತಿದ್ದ ವ್ಯಕ್ತಿ ವಿರುದ್ಧ ದೇವರಾಜ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರಿನ ದತ್ತನಗರದ ಮಂಜುನಾಥ (50), ಗಾಂಜಾ ಸೇವಿಸಿ ದುರ್ವರ್ತನೆಯಿಂದ ನಡೆದುಕೊಂಡವ. ಮೈಸೂರು ಅರಮನೆ ವರಹಾ ದ್ವಾರದ ಬಳಿ ಈತ ಗಾಂಜಾ ನಶೆಯಲ್ಲಿ ಸಾರ್ವಜನಿಕರಿಗೆ ತೊಂದರೆ ಕೊಡುತ್ತಿದ್ದಾಗ ಪೊಲೀಸರ ಕೈಗೆ ಸಿಕ್ಕಿಬಿದ್ದಾನೆ. ಗಾಂಜಾವನ್ನು ಬೀಡಿಯಲ್ಲಿ ಹಾಕಿಕೊಂಡು ಸೇವನೆ ಮಾಡಿದ್ದಾಗಿ ಮಂಜುನಾಥ ತಪ್ಪೊಪ್ಪಿಕೊಂಡಿದ್ದು, ಈತನನ್ನು ಪೊಲೀಸರು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದಾಗ ಗಾಂಜಾ ಸೇವನೆ ಮಾಡಿರುವುದು ದೃಢಪಟ್ಟಿದೆ. ಈತನ ವಿರುದ್ಧ ಪ್ರಕರಣ ದಾಖಲಿಸಿರುವ ಪೊಲೀಸರು, ಈತನಿಗೆ ಗಾಂಜಾ ದೊರೆತ ಬಗ್ಗೆ ತನಿಖೆ ಆರಂಭಿಸಿದ್ದಾರೆ.

ಕೇರಳ ಯುವಕರು ಬಡಿದಾಡಿದ್ದಾರೆಂಬ ವಿಡಿಯೋ ವೈರಲ್

ಮೈಸೂರು,ಫೆ.27(ಪಿಎಂ)– ಮೈಸೂರಿನ ಬನ್ನಿಮಂಟಪದಲ್ಲಿ ಕೇರಳದ ಯುವಕರ ಗುಂಪುಗಳು ಪರಸ್ಪರ ಬಡಿದಾಡಿಕೊಂಡಿದ್ದಾರೆಂಬ ವಿಡಿಯೋ ಇತ್ತೀಚೆಗೆ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ಡಿಜಿಟಲ್ ಸುದ್ದಿ ವಾಹಿನಿಯೊಂದು ಈ ವಿಡಿಯೋ ಅಪ್‌ಲೋಡ್ ಮಾಡಿ ಗಲಾಟೆ ನಡೆದಿದೆ ಎಂದು ವರದಿ ಪ್ರಸಾರ ಮಾಡಿದೆ. ಪೊಲೀಸ್ ವಾಹನ ಹಾಗೂ ಸಮವಸ್ತ್ರದಲ್ಲಿರುವ ಕೆಲ ಪೊಲೀಸರು ಹಾಗೂ ಯುವಕರು ಇರುವುದು ದೃಶ್ಯದಲ್ಲಿ ಕಂಡು ಬರುತ್ತಿದೆ. ಆದರೆ ಸದರಿ ಡಿಜಿಟಲ್ ವಾಹಿನಿಯ ಧ್ವನಿ ಮುದ್ರಿಕೆಯಲ್ಲಿ ಹೇಳುವಂತೆ ಯಾವುದೇ ಬಡಿದಾಟ ಅಲ್ಲಿ ಕಂಡು ಬಂದಿಲ್ಲ.

ಗಲಾಟೆ ನಡೆದು ಆ ವಿಡಿಯೋ ತುಣುಕು ಅಲಭ್ಯವಾಗಿದೆಯೋ ಅಥವಾ ವರದಿಯಲ್ಲಿ ಪ್ರಸಾರ ಆಗಿರುವಂತೆ ನಡೆದಿಲ್ಲವೇ ಎಂಬ ಪ್ರಶ್ನೆಗಳು ಎದುರಾಗಿದೆ. ಹಾಗಾಗಿ ದೃಶ್ಯದಲ್ಲಿ ನಡೆದಿರುವುದೇ ಬೇರೆಯಾದರೂ ಗಲಾಟೆ ನಡೆದಿರುವಂತೆ ಸುದ್ದಿ ಪ್ರಸಾರ ಮಾಡಲಾಗಿದೆಯೆ? ಎಂಬ ಶಂಕೆ ಕೂಡ ವ್ಯಕ್ತವಾಗಿದೆ. ಇದು ವಿಚಾರಣೆ ಹಂತದಲ್ಲಿದ್ದು, ಈ ಸಂಬಂಧ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಡಿವೋರ್ಸ್‌ಗಾಗಿ ಕೋರ್ಟ್ ಮೆಟ್ಟಿಲೇರಿದ ವಿಜಯ್ ಪತ್ನಿ ಸಂಗೀತಾ!

ಚೆನ್ನೈ: ಇದೇ ವರ್ಷ ನಡೆಯಲಿರುವ ತಮಿಳುನಾಡು ವಿಧಾನಸಭಾ ಚುನಾವಣೆಯ ಸಿದ್ಧತೆಯಲ್ಲಿರುವ ಟಿವಿಕೆ ಪಕ್ಷದ ಸಂಸ್ಥಾಪಕ, ನಟ ದಳಪತಿ ವಿಜಯ್ ಗೆ ಸಂಕಷ್ಟ ಎದುರಾಗಿದೆ.



ಡಿವೋರ್ಸ್ ಗಾಗಿ ಅವರ ಪತ್ನಿ ಸಂಗೀತಾ ಸೋರ್ನಲಿಂಗಂ ತಮಿಳುನಾಡಿನ ಚೆಂಗಲ್ಪಟ್ಟು ನ್ಯಾಯಾಲಯದ ಮೆಟ್ಟಿಲೇರಿದ್ದಾರೆ. ವಿಜಯ್ ಜೊತೆಗೆ ಸಂಬಂಧ ಮುರಿದುಕೊಳ್ಳುವುದಕ್ಕಾಗಿ ಡಿವೋರ್ಸ್ ಅರ್ಜಿ ಸಲ್ಲಿಸಿದ್ದಾರೆ.

ತಾನು ಮದುವೆಯಾದ ನಿವಾಸದಲ್ಲಿ ವಾಸಿಸುವ ಹಕ್ಕು ನೀಡಬೇಕು. ವಿಜಯ್ ಶಾಶ್ವತ ಜೀವನಾಂಶ ನೀಡಬೇಕು ಎಂದು ಸಾಮಾಜಿಕ ಕಾರ್ಯಕರ್ತ ಹಾಗೂ ಉದ್ಯಮಿಯಾಗಿರುವ ಸಂಗೀತಾ ಅವರು ತಮ್ಮ ವಿಚ್ಛೇದನ ಅರ್ಜಿಯಲ್ಲಿ ಕೋರಿದ್ದಾರೆ.

ವಿಜಯ್ ಮತ್ತು ಸಂಗೀತಾ ಮದುವೆಯಾಗಿ 27 ವರ್ಷಗಳಾಗಿದ್ದು, ಇಬ್ಬರು ಮಕ್ಕಳಿದ್ದಾರೆ, ಮಗ ಜೇಸನ್ ಸಂಜಯ್ ಗೆ 25 ವರ್ಷ ಮತ್ತು ಮಗಳು ದಿವ್ಯಾ ಸಾಶಾಗೆ 20 ವರ್ಷ. ವಿಚ್ಛೇದನ ಅರ್ಜಿ ಕುರಿತು ವಿಜಯ್ ಇನ್ನೂ ಪ್ರತಿಕ್ರಿಯಿಸಿಲ್ಲ.

ಅಂದಹಾಗೆ, ಆರಂಭದಲ್ಲಿ ವಿಜಯ್ ಅವರ ಅಭಿಮಾನಿಯಾಗಿದ್ದ ಸಂಗೀತಾ, 1990 ರ ದಶಕದ ಉತ್ತರಾರ್ಧದಲ್ಲಿ ತನ್ನ ನೆಚ್ಚಿನ ನಟನನ್ನು ಭೇಟಿಯಾಗಲು ಯುಕೆಯಿಂದ ಚೆನ್ನೈಗೆ ಬಂದಿದ್ದರು. ವಿಜಯ್ ಜೊತೆಗೆ ಭೇಟಿಯಾದ ನಂತರ ಇಬ್ಬರ ಅದೃಷ್ಟ ಬದಲಾಯಿತು. ಧರ್ಮ ಬೇರೆ ಆಗಿದ್ದೂ ಎಲ್ಲವನ್ನೂ ಮೀರಿ ಅವರಿಬ್ಬರೂ ಮದುವೆಯಾದರು ಎಂದು ವರದಿಗಳು ಹೇಳುತ್ತವೆ.

ರಾಜ್ಯದ ರಾಜಕೀಯ ಗೊಂದಲಕ್ಕೆ ಮುಂದಿನ ತಿಂಗಳಾಂತ್ಯಕ್ಕೆ ತೆರೆ

ಹಿರಿಯ ಶಾಸಕ ತನ್ವೀರ್ ಸೇಠ್ ವಿಶ್ವಾಸ

ಮೈಸೂರು, ಫೆ.27– ರಾಜ್ಯ ಕಾಂಗ್ರೆಸ್‌ನಲ್ಲಿನ ಗೊಂದಲಗಳಿಗೆ ಮುಂದಿನ ತಿಂಗಳ ಅಂತ್ಯಕ್ಕೆ ತೆರೆ ಬೀಳುವ ನಿರೀಕ್ಷೆ ಇದೆ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷರೂ ಆದ ನರಸಿಂಹ ರಾಜ ಕ್ಷೇತ್ರದ ಶಾಸಕ ತನ್ವೀರ್ ಸೇಠ್ ತಿಳಿಸಿದ್ದಾರೆ.



ಮೈಸೂರಿನಲ್ಲಿ ಸುದ್ದಿವಾಹಿನಿಯೊಂದಿಗೆ ಮಾತನಾಡಿದ ಅವರು, ಮಾ.6ರಂದು ಆಯವ್ಯಯ ಮಂಡನೆಯಾಗಲಿದ್ದು, ಮಾ.27ರವರೆಗೂ ಸದನ ಮುಂದುವರೆಯುತ್ತದೆ. ಬಹುಷಃ ಮುಂದಿನ ತಿಂಗಳ ಅಂತ್ಯಕ್ಕೆ ಒಂದು ಸ್ಪಷ್ಟತೆ ಸಿಗುವ ನಿರೀಕ್ಷೆ ಇದೆ ಎಂದರು.

ನಾನು ದೆಹಲಿಗೆ ಹೋಗಬೇಕಿದೆ. ಆಗ ವರಿಷ್ಠರನ್ನು ಭೇಟಿಯಾಗುತ್ತೇನೆ. ಸುರ್ಜೇವಾಲಾ ಅವರ ಬಳಿ ಸಮಯ ತೆಗೆದುಕೊಂಡಿದ್ದೇನೆ. ಕೇರಳ ಚುನಾವಣೆಯಲ್ಲಿ ಸಕ್ರಿಯರಾಗಿರುವ ವೇಣುಗೋಪಾಲ್ ಅವರು ಲಭ್ಯವಾದರೆ ಅವರೊಂದಿಗೂ ಮಾತನಾಡುತ್ತೇನೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನೂ ಭೇಟಿಯಾಗಿ ರಾಜ್ಯದ ಎಲ್ಲಾ ವಿದ್ಯಮಾನಗಳ ಬಗ್ಗೆ ಚರ್ಚೆ ಮಾಡಿ, ಎಲ್ಲಾ ಗೊಂದಲಗಳಿಗೂ ಕಡಿವಾಣ ಹಾಕಲು ಪ್ರಯತ್ನಿಸುವುದಾಗಿ ತಿಳಿಸಿದರು. ಅಧಿಕಾರ ಹಸ್ತಾಂತರ ಮಾಡುತ್ತಾರೋ ಇಲ್ಲವೋ, ಸಂಪುಟ ಪುನರ್ರಚನೆ ಮಾಡುತ್ತಾರೋ ಇಲ್ಲವೋ ಎಂಬುದನ್ನು ಸ್ಪಷ್ಟಪಡಿಸದೆ ಕಾಯಿಸುವುದು ಸರಿಯಲ್ಲ. ನಮ್ಮ ಆಶಯ ಈಡೇರುತ್ತದೆ ಎಂಬ ನಿರೀಕ್ಷೆಯಲ್ಲಿ ಕಾದು ಕುಳಿತುಕೊಳ್ಳುವುದು ಅಥವಾ ನಮ್ಮ ಕೈತಪ್ಪುತ್ತದೆ ಎಂದು ಭಾವಿಸಿಕೊಳ್ಳುವಂತಹ ಪರಿಸ್ಥಿತಿ ನಿರ್ಮಾಣವಾಗಬಾರದು. ಎಲ್ಲರೂ ತಾಳ್ಮೆ ಕಾಪಾಡಿಕೊಳ್ಳಬೇಕು, ನಿಮ್ಮ ಮೇಲೆ ನಿಮಗೆ ವಿಶ್ವಾಸ ಇರಬೇಕು. ಆಗ ಅವಕಾಶ ತಾನಾಗಿಯೇ ಬರುತ್ತದೆ ಎನ್ನುವುದು ನನ್ನ ಸಿದ್ಧಾಂತ. ಆ ನಿರೀಕ್ಷೆಯಲ್ಲೇ ನಾನಿದ್ದೇನೆ ಎಂದು ಹೇಳಿದರು.

ಜಾತಿ ಆಧಾರಿತವಾಗಿ ಅಲ್ಲ: ದಲಿತ ಸಿಎಂ ಕೂಗು ಮತ್ತೆ ಮುನ್ನಲೆಗೆ ಬಂದಿರುವ ಬಗ್ಗೆ ಪ್ರತಿಕ್ರಿಯಿಸಿ, ಯಾವತ್ತೂ ಜಾತಿ ಆಧಾರಿತವಾಗಿ ಅಲ್ಲ, ಅವಕಾಶ ಯಾರಿಗೆ ಸಿಗುತ್ತದೋ ಅವರನ್ನು ಗೌರವಿಸಬೇಕು. ಪಕ್ಷದ ಸಿದ್ಧಾಂತವನ್ನು ಒಪ್ಪಿಕೊಂಡು ಮುನ್ನಡೆಯುತ್ತಿರುವ ನಾವು ಯಾರಿಗೇ ಅವಕಾಶ ಸಿಕ್ಕರೂ ಗೌರವಿಸುವ ಕೆಲಸ ಮಾಡುತ್ತೇವೆ. ಯಾರು ಬೇಕಾದರೂ ಸಿಎಂ ಆಗಬಹುದು. ಇವರು ಆಕಾಂಕ್ಷಿ, ನಮಗೆ ಮಾತು ಕೊಟ್ಟಿದ್ದಾರೆ, ಅವರಿಗೇ ಕೊಡಬೇಕು ಎಂದೆಲ್ಲಾ ಅವರವರೇ ಹಂಚಿಕೊಳ್ಳುತ್ತಿದ್ದಾರೆ. ಈವರೆಗೆ ನಾನು ಯಾವತ್ತೂ ಕೇಳಿಲ್ಲ. ಅನಿರೀಕ್ಷಿತವಾಗಿ ಸಿಕ್ಕರೆ ನಾನೂ ಸ್ವೀಕರಿಸುತ್ತೇನೆ. ಹಾಗಾಗಿ ಎಲ್ಲರಿಗೂ ಒಳ್ಳೆಯದಾಗಲಿ ಎಂದಷ್ಟೇ ಹಾರೈಸುತ್ತೇನೆ ಎಂದರು.

ಜನರ ತಾಳ್ಮೆ ಪರೀಕ್ಷಿಸಬಾರದು...

“ರಾಜ್ಯದಲ್ಲಿ ಕಾಂಗ್ರೆಸ್‌ಗೆ ಬಹುಮತ ನೀಡಿರುವ ಜನರ ವಿಶ್ವಾಸ ಉಳಿಸಿಕೊಳ್ಳುವ ಕೆಲಸವನ್ನು ಕಾರ್ಯಕ್ರಮಗಳ ಮೂಲಕ ಮಾಡುತ್ತಿದ್ದೇವೆ. ಆದರೆ ಹ್ಯೂಮನ್ ಮೆಮೋರಿ ಇಸ್ ಶಾರ್ಟ್. ಜನರ ತಾಳ್ಮೆ ಪರೀಕ್ಷೆ ಮಾಡುವ ಕೆಲಸಕ್ಕೆ ಮುಂದಾಗಬಾರದು. ಹಾವು 12 ವರ್ಷ ದ್ವೇಷ ಸಾಧಿಸುತ್ತದೆ ಎನ್ನುತ್ತಾರೆ. ಹಾಗಾಗಿ ಜನರನ್ನು ಲಘುವಾಗಿ ಪರಿಗಣಿಸಬಾರದು. ಗೊಂದಲಗಳಿಗೆ ತೆರೆ ಎಳೆದು ಶಿಕ್ಷಣ, ಉದ್ಯೋಗ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲೂ ವಿನೂತನ ಕಾರ್ಯಕ್ರಮ ರೂಪಿಸುವ ಮೂಲಕ ಜನರ ವಿಶ್ವಾಸವನ್ನು ಮತ್ತಷ್ಟು ಹೆಚ್ಚಿಸಿಕೊಳ್ಳಬೇಕು.

–ತನ್ವೀರ್ ಸೇಠ್, ಶಾಸಕ

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ ಶನಿವಾರ 28 ಫೆಬ್ರವರಿ 2026

ಶತಮಾನ ಮೀರಿದ ವಿಶ್ವ ಪ್ರಸಿದ್ಧ ಮೈಸೂರು ಸಿಲ್ಕ್ ಸೀರೆ ಉದ್ಯಮಕ್ಕೆ ಕಂಟಕ!

ಬಹು ಬೇಡಿಕೆ ಇದ್ದರೂ ಬಡವಾಯ್ತು ತವರಿನ ಸಿರಿ!

ಇದೊಂದು ರೀತಿ 'ಮನೆಗೆ ಮಾರಿ... ಯಾರಿಗೆ ಉಪಕಾರಿ ...! ಪ್ರವೃತ್ತಿ ಅಲ್ಲವೆ?




ತಿ.ನರಸೀಪುರದ ಕೆಎಸ್ಐಸಿ ಫಿಲೇಚರ್ ಕಾರ್ಖಾನೆಯಲ್ಲಿ ರೇಷ್ಮೆ ಗೂಡುಗಳ ನೂಲುಗಳನ್ನು ಹೊರತೆಗೆಯಲು ಕುದಿಸುತ್ತಿರುವುದು. ಬಲಚಿತ್ರದಲ್ಲಿ ಕಾರ್ಮಿಕರು ಸೂಕ್ಷ್ಮ ನೂಲುಗಳನ್ನು ಹೊರತೆಗೆಯುತ್ತಿರುವುದನ್ನು ಕಾಣಬಹುದು

ಮೈಸೂರು, ಫೆ.27(ಎಂಟಿವೈ)– ಬಹು ಬೇಡಿಕೆಯುಳ್ಳ ಜಿಐ ಟ್ಯಾಗ್ ಹೊಂದಿರುವ 'ಮೈಸೂರು ರೇಷ್ಮೆ(ಸಿಲ್ಕ್) ಸೀರೆ' ಉತ್ಪಾದನೆಗೆ ಮೈಸೂರು ಹಾಗೂ ರಾಮನಗರದ ರೇಷ್ಮೆ ಸೀರೆ ಉತ್ಪಾದನಾ ಘಟಕಕ್ಕೆ ಪ್ರಧಾನವಾಗಿ ರೇಷ್ಮೆ ನೂಲು (ದಾರ) ಸರಬರಾಜು ಮಾಡುತ್ತಾ, ವಾರ್ಷಿಕ 118 ಕೋಟಿ ರೂ. ನಿವ್ವಳ ಲಾಭದಲ್ಲಿ ಮುನ್ನಡೆಯುತ್ತಿರುವ ತಿ.ನರಸೀಪುರದ ರೇಷ್ಮೆ ನೂಲು ತಯಾರಿಕಾ ಘಟಕ ಮುಚ್ಚುವ ಹುನ್ನಾರ ನಡೆದಿದೆ ಎಂಬ ಅನುಮಾನ ವ್ಯಕ್ತವಾಗುತ್ತಿದೆ. ಜಿಲ್ಲಾಡಳಿತವಾಗಲೀ ಇಲ್ಲವೆ ಸಂಬಂಧಪಟ್ಟ ಸಚಿವರು ತುಟಿ ಬಿಚ್ಚದೇ ಇರುವುದು ನೌಕರರಲ್ಲಿ ಆತಂಕ ಮನೆ ಮಾಡುವಂತೆ ಮಾಡಿದೆ.

ಮೈಸೂರು ರೇಷ್ಮೆ ಸೀರೆ ನೇಯ್ಗೆಗೆ ಬೇಕಾದ ರೇಷ್ಮೆ ನೂಲು ತಯಾರಿಸುವ ಘಟಕವನ್ನು ಮೈಸೂರು ರಾಜವಂಶಸ್ಥರ ಆಳ್ವಿಕೆಯ ಕಾಲದಲ್ಲಿಯೇ(1912ರಲ್ಲಿ) ತಿ.ನರಸೀಪುರದಲ್ಲಿ ಸ್ಥಾಪಿಸಿದ್ದು, 114 ವರ್ಷಗಳಿಂದ ಬೇಡಿಕೆಗೆ ಅನುಗುಣವಾಗಿ ಗುಣಮಟ್ಟದ ರೇಷ್ಮೆ ನೂಲು ಪೂರೈಸುತ್ತಾ ಬಂದಿದೆ. ಶತಮಾನಕ್ಕೂ ಮಿಗಿಲಾದ ಇತಿಹಾಸ ಹೊಂದಿರುವ ಈ ರೇಷ್ಮೆ ನೂಲು ತಯಾರಿಕಾ ಘಟಕದ ಮೇಲೆ ಈಗ ಕರಿ ನೆರಳು ಆವರಿಸುತ್ತಿದ್ದು, ಇತಿಹಾಸದ ನೇಪಥ್ಯಕ್ಕೆ ಸರಿಯುವ ಅನುಮಾನ ಮೂಡಿದೆ ಇದರಿಂದ ನೂಲು ತಯಾರಿಕಾ ಘಟಕದಲ್ಲಿ ಕೆಲಸ ಮಾಡುತ್ತಿರುವ 196ಕ್ಕೂ ಅಧಿಕ ಸಿಬ್ಬಂದಿಗಳ ಜೀವನ ತೂಗುಯ್ಯಾಲೆಯಲ್ಲಿ ಸಿಲುಕಿದೆ.

ಕ್ರೀಡಾಂಗಣಕ್ಕೆ ಅರ್ಧ ಭೂಮಿ; ಸ್ಥಳೀಯರ ವಿರೋಧ: ತಿ.ನರಸೀಪುರದ ಈ ರೇಷ್ಮೆ ನೂಲು ತಯಾರಿಕಾ ಘಟಕ 13.11 ಎಕರೆ ವಿಸ್ತೀರ್ಣ ಹೊಂದಿದ್ದು, ಅದರಲ್ಲಿ ಆರು ಎಕರೆ ಜಾಗದಲ್ಲಿ ನೂಲು ತಯಾರಿಕಾ ಘಟಕದ ಕಟ್ಟಡವಿದೆ. ಇನ್ನು ಉಳಿದ 7 ಎಕರೆ ಜಾಗದಲ್ಲಿ ತಾಲೂಕು ಕ್ರೀಡಾಂಗಣ ನಿರ್ಮಾಣಕ್ಕೆ 5.08 ಎಕರೆಯನ್ನು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸುಪರ್ದಿಗೆ ನೀಡಲಾಗಿದ್ದು, ಇದು ನೂಲು ತಯಾರಿಕಾ ಘಟಕ ಮುಚ್ಚುವ ಹುನ್ನಾರದ ಒಂದು ಭಾಗವಾಗಿದೆ ಎಂದು ನೌಕರರು ಹಾಗೂ ಸ್ಥಳೀಯರು ಆರೋಪಿಸಿದ್ದು, ಕಳೆದ ಕೆಲವು ದಿನಗಳಿಂದ ಸರಣಿ ಪ್ರತಿಭಟನೆ ಸಾಕ್ಷಿಯಾಗುವುದರೊಂದಿಗೆ ರಾಜಕೀಯ ತಿರುವು ಪಡೆದುಕೊಳ್ಳುತ್ತಿದೆ.

ಹರಿವ ನೀರಿನಿಂದ ಗುಣಮಟ್ಟ ಕಾಪಾಡಿಕೊಳ್ಳಲಾಗಿದೆ: ರೇಷ್ಮೆ ಸೀರೆ ತಯಾರಿಕೆಗಾಗಿ ಈ ಹಿಂದೆ ತಿ.ನರಸೀಪುರ, ಸಂತೆಮರಳ್ಳಿ, ದಾವಣಗೆರೆಯ ತೋಳು ಹುಣಸೆ ಹಾಗೂ ಹಂಪಾಪುರ ಸೇರಿದಂತೆ ಹಲವು ಕಡೆ ರೇಷ್ಮೆ ನೂಲು ತಯಾರಿಕಾ ಘಟಕ ಸ್ಥಾಪಿಸಲಾಗಿತ್ತು. ಅದರಲ್ಲಿ ಇದೀಗ ತಿ.ನರಸೀಪುರದ ನೂಲು ಘಟಕ ಹೊರತುಪಡಿಸಿದರೆ ಉಳಿದ ಎಲ್ಲಾ ಘಟಕಗಳು ಸ್ಥಗಿತ ಗೊಂಡಿವೆ. ಹೀಗೆ ಸ್ಥಗಿತಗೊಂಡಿರುವ ಘಟಕಗಳು ಬೋರ್‌ವೆಲ್ ನೀರನ್ನೇ ಅವಲಂಭಿಸಿದ್ದವು. ಆದರೆ, ಬೋರ್‌ವೆಲ್ ನೀರಿನಿಂದ ಯಂತ್ರಗಳು ತುಕ್ಕು ಹಿಡಿದು ಪದೇ ಪದೆ ದುರಸ್ತಿಗೆ ಒಳಗಾಗುತ್ತಿದ್ದವು. ಅಲ್ಲದೆ, ನೂಲಿನ ಗುಣಮಟ್ಟವೂ ಕುಸಿದ ಪರಿಣಾಮ ಅಲ್ಲಿನ ರೇಷ್ಮೆ ನೂಲಿಗೆ ಬೇಡಿಕೆ ಇಲ್ಲದ ಕಾರಣ ಅವುಗಳು ಸ್ಥಗಿತಗೊಂಡು ಹಲವು ವರ್ಷಗಳೇ ಕಳೆದಿವೆ. ಇದೀಗ ತಿ.ನರಸೀಪುರದ ನೂಲು ತಯಾರಿಕಾ ಘಟಕವೊಂದೇ ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಿದೆ.

ಮಾತೃ ಸಂಸ್ಥೆ: ಮೈಸೂರು ರೇಷ್ಮೆ ಸೀರೆ ಉತ್ಪಾದನೆಗೆ ರೇಷ್ಮೆ ನೂಲು ಸರಬರಾಜು ಮಾಡುವ ಮಾತೃ ಸಂಸ್ಥೆಯಂತೆ ತಿ.ನರಸೀಪುರದ ನೂಲು ತಯಾರಿಕಾ ಘಟಕ ಕಾರ್ಯ ನಿರ್ವಹಿಸುತ್ತಿದೆ. ಕಪಿಲಾ ನದಿಯಿಂದ ಇಲ್ಲಿಗೆ ನೀರನ್ನು ಸರಬರಾಜು ಮಾಡಲು ಕಂಚಿನ ಪೈಪ್‌ಲೈನ್ ಅಳವಡಿಸಲಾಗಿದೆ ದಿನಕ್ಕೆ 5 ಲಕ್ಷ ಲೀಟರ್ ನೀರು ನೂಲು ತಯಾರಿಕಾ ಘಟಕಕ್ಕೆ ಬೇಕಾಗುತ್ತಿದ್ದು, ಅದಕ್ಕಾಗಿ ಈ ಸಂಸ್ಥೆ ಆವರಣದಲ್ಲಿ ಕ್ರೀಡಾಂಗಣ ನಿರ್ಮಾಣ ಮಾಡಬಾರದೆಂಬ ಬೇಡಿಕೆ ನೂಲು ತಯಾರಿಕಾ ಘಟಕದ ನೌಕರರದ್ದಾಗಿದೆ.

3.50 ಕೋಟಿ ಮೌಲ್ಯದ ರೇಷ್ಮೆ ಗೂಡು ಖರೀದಿ: ರೇಷ್ಮೆ ನೂಲು ತಯಾರಿಕಾ ಕಾರ್ಯದಲ್ಲಿ ತಿ.ನರಸೀಪುರದ ಘಟಕದಲ್ಲಿ 96 ಪುರುಷರು ಹಾಗೂ 100 ಮಹಿಳಾ ಸಿಬ್ಬಂದಿ ಸೇರಿ 196 ಮಂದಿ ನೌಕರರು ಕಾರ್ಯ ನಿರ್ವಹಿಸುತ್ತಿದ್ದಾರೆ. ಮೈಸೂರು, ರಾಮನಗರ, ಶಿಡ್ಲಘಟ್ಟ, ಕೊಳ್ಳೇಗಾಲದಲ್ಲಿರುವ ಸರ್ಕಾರಿ ರೇಷ್ಮೆ ಗೂಡು ಮಾರುಕಟ್ಟೆಯಿಂದ ತಿಂಗಳಿಗೆ 3 ರಿಂದ 3.50 ಕೋಟಿ ಮೌಲ್ಯದ 25ರಿಂದ 30 ಸಾವಿರ ಕೆಜಿ ಗುಣಮಟ್ಟದ ರೇಷ್ಮೆ ಗೂಡನ್ನು ಖರೀದಿಸಿ, ಈ ಘಟಕಕ್ಕೆ ತರಲಾಗುತ್ತದೆ.

ದಿನಕ್ಕೆ 240 ಕೆಜಿ, ತಿಂಗಳಿಗೆ 6 ಸಾವಿರ ಕೆಜಿ ನೂಲು ತಯಾರು: ಈ ಘಟಕದಲ್ಲಿ ದಿನಕ್ಕೆ 1400ರಿಂದ 1600 ಕೆಜಿ ರೇಷ್ಮೆ ಗೂಡನ್ನು ನೂಲು ತಯಾರಿಕಾ ಪ್ರಕ್ರಿಯೆಯಲ್ಲಿ ಬಳಸಲಾಗುತ್ತದೆ. ಪ್ರತಿದಿನ ಬೆಳಗ್ಗೆ 7.30ರಿಂದ ಸಂಜೆ 4 ಗಂಟೆವರೆಗೆ ಎಲ್ಲಾ ಸಿಬ್ಬಂದಿ ಕಾರ್ಯ ನಿರ್ವಹಿಸಿದರೆ ದಿನಕ್ಕೆ 190 ಕೆಜಿ ರೇಷ್ಮೆ ನೂಲು ತಯಾರಾಗಲಿದೆ. ಸಂಜೆ 6.30ರವರೆಗೆ ಹೆಚ್ಚುವರಿ (ಓಟಿ) ಅವಧಿಯಲ್ಲಿ ಕೆಲಸ ಮಾಡಿದರೆ ದಿನಕ್ಕೆ 230 ರಿಂದ 240 ಕೆಜಿ ಸಿಲ್ಕ್ ನೂಲು ತಯಾರಾಗುತ್ತದೆ. ಪ್ರತಿ ತಿಂಗಳು ಸರಾಸರಿ 6ರಿಂದ 7 ಸಾವಿರ ಕೆಜಿ ರೇಷ್ಮೆ ನೂಲು ತಯಾರಾಗುತ್ತಿದ್ದು, ಇಲ್ಲಿಂದ ಮೈಸೂರಿನ ಸೀರೆ ಉತ್ಪಾದನಾ ಕೇಂದ್ರಕ್ಕೆ ಬಹುಪಾಲು ನೂಲು ಸರಬರಾಜಾಗುತ್ತದೆ. ಅಲ್ಲದೆ, ಚನ್ನಪಟ್ಟಣದ ಸೀರೆ ಉತ್ಪಾದನಾ ಕೇಂದ್ರಕ್ಕೂ ಈ ಕೇಂದ್ರದಿಂದಲೇ ನೂಲು ಪೂರೈಸಲಾಗುತ್ತಿದೆ.

116 ಕೋಟಿ ರೂ. ನಿವ್ವಳ ಲಾಭ: ಕಳೆದ ವರ್ಷ ತಿ.ನರಸೀಪುರದ ರೇಷ್ಮೆ ನೂಲು ತಯಾರಿಕಾ ಕೇಂದ್ರವು 48 ಕೋಟಿ ರೂ. ನಿವ್ವಳ ಲಾಭ ಹೊಂದಿತ್ತು. ಈ ವರ್ಷ ಓಟಿಯಲ್ಲಿ ಕೆಲಸ ಮಾಡಿ ತಯಾರಾದ ರೇಷ್ಮೆ ನೂಲು ಸೇರಿದಂತೆ 116 ಕೋಟಿ ರೂ. ನಿವ್ವಳ ಲಾಭ ಪಡೆದಿದೆ. ಅಲ್ಲದೆ, ಮುಂದಿನ 4–5 ತಿಂಗಳವರೆಗೆ ಬಳಸಬಹುದಾದ 62 ಸಾವಿರ ಕೆಜಿ ರೇಷ್ಮೆ ಗೂಡನ್ನು ದಾಸ್ತಾನು ಮಾಡಲಾಗಿದೆ.

ಭೂಮಿ ಯಾಕೆ ಬೇಕು: ತಾಲೂಕು ಕ್ರೀಡಾಂಗಣ ನಿರ್ಮಾಣಕ್ಕೆ ನೀಡಿರುವ 5.08 ಎಕರೆ ಜಾಗ ರೇಷ್ಮೆ ನೂಲು ತಯಾರಿಕಾ ಕೇಂದ್ರದ ವ್ಯಾಪ್ತಿಯಲ್ಲಿಯೇ ಇರಬೇಕು ಎಂದು ನೌಕರರು ಪ್ರತಿಪಾದಿಸುತ್ತಿದ್ದು, ಅದಕ್ಕೆ ಹಲವು ಕಾರಣ ನೀಡುತ್ತಿದ್ದಾರೆ. ರೇಷ್ಮೆ ನೂಲು ತಯಾರಿಕಾ ಕೇಂದ್ರಕ್ಕೆ ಭಾರೀ ಪ್ರಮಾಣದಲ್ಲಿ ಕಲ್ಲಿದ್ದಲು ಬೇಕಾಗುತ್ತದೆ. ಹಾಗಾಗಿ ಕಲ್ಲಿದ್ದಲು ಸಂಗ್ರಹಕ್ಕೆ 1 ಎಕರೆ, ಕಲ್ಲಿದ್ದಲಿನ ಬೂದಿ ಸಂಗ್ರಹಕ್ಕೆ ಒಂದೂವರೆ ಎಕರೆ, ಕ್ಯಾಂಟೀನ್, ವಾಹನ ನಿಲುಗಡೆ, ಬಳಸಿದ ನೀರನ್ನು ಶುದ್ಧೀಕರಿಸಿ ಮರು ಬಳಕೆ ಮಾಡಲು ಇಟಿಪಿ ನಿರ್ಮಾಣಕ್ಕೆ ಒಂದು ಎಕರೆ ಭೂಮಿ ಬೇಕಾಗುತ್ತದೆ. ಅಲ್ಲದೆ, ಕಾರ್ಖಾನೆಯ ಶೇ.33ರಷ್ಟು ಭಾಗ ಹಸಿರು ವಲಯವಾಗಿರಬೇಕು ಇಲ್ಲದಿದ್ದರೆ ಜಿಐ ಟ್ಯಾಗ್ ಹೋಗುತ್ತದೆ. ಹಾಗಾಗಿ ಕ್ರೀಡಾಂಗಣ ನಿರ್ಮಾಣ ಬೇರೆಡೆ ಮಾಡಲಿ ಎಂದು ನೌಕರರು ಆಗ್ರಹಿಸಿದ್ದಾರೆ.

ಒಂದು ಸೀರೆಗೆ 420 ಗ್ರಾಂ ನೂಲು ಸಾಕು: ಒಂದು ರೇಷ್ಮೆ ಸೀರೆಗೆ 350 ಗ್ರಾಂನಿಂದ 420 ಗ್ರಾಂ ರೇಷ್ಮೆ ನೂಲು ಬಳಸಲಾಗುತ್ತಿದೆ. ಇದರಿಂದ ನರಸೀಪುರ ನೂಲು ತಯಾರಿಕಾ ಘಟಕದಿಂದ ತಯಾರಾಗುವ ನೂಲಿನಿಂದ ತಿಂಗಳಿಗೆ 15 ಸಾವಿರಕ್ಕೂ ಹೆಚ್ಚು ರೇಷ್ಮೆ ಸೀರೆ ಉತ್ಪಾದಿಸಲಾಗುತ್ತದೆ.

ಕ್ರೀಡಾಂಗಣದಿಂದ ನೂಲು ತಯಾರಿಕಾ ಕೇಂದ್ರಕ್ಕೆ ಧಕ್ಕೆ ಇಲ್ಲ



ತಿ.ನರಸೀಪುರದಲ್ಲಿ ಹಲವು ವರ್ಷಗಳಿಂದ ಬೇಡಿಕೆ ಇದ್ದ ತಾಲೂಕು ಕ್ರೀಡಾಂಗಣಕ್ಕೆ ಭೂಮಿ ಮಂಜೂರಾಗಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸುಪರ್ದಿಗೆ ಸರ್ಕಾರ ಈಗಾಗಲೇ ನೀಡಿದೆ. ಕ್ರೀಡಾಂಗಣ ನಿರ್ಮಾಣದಿಂದ ರೇಷ್ಮೆ ನೂಲು ತಯಾರಿಕಾ ಘಟಕಕ್ಕೆ ಧಕ್ಕೆಯಾಗುವುದಿಲ್ಲ. ಕಾರ್ಖಾನೆ ಮುಚ್ಚಲಾಗುತ್ತಿದೆ ಎನ್ನುವುದು ವದಂತಿಯಷ್ಟೇ. ಕ್ರೀಡಾಂಗಣ ನಿರ್ಮಾಣದಿಂದ ತಿ.ನರಸೀಪುರದ ಕ್ರೀಡಾಪಟುಗಳು ಕ್ರೀಡಾ ಕ್ಷೇತ್ರದಲ್ಲಿ ಸಾಧನೆ ಮಾಡಲು ಸಹಾಯಕವಾಗುತ್ತದೆ

- ಭಾಸ್ಕರ್ ನಾಯಕ್, ಸಹಾಯಕ ನಿರ್ದೇಶಕ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ರೇಷ್ಮೆ ನೂಲು ಘಟಕ ಮುಚ್ಚುವ ಉದ್ದೇಶ ಸರ್ಕಾರಕ್ಕೆ ಇಲ್ಲ

ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕಾಲದಲ್ಲಿ ತಿ.ನರಸೀಪುರದಲ್ಲಿ ಸ್ಥಾಪಿತವಾಗಿರುವ ರೇಷ್ಮೆ ನೂಲು ತಯಾರಿಕಾ ಘಟಕವನ್ನು ಇನ್ನಷ್ಟು ಉನ್ನತ ದರ್ಜೆಗೇರಿಸಿ, ಕೌಶಲ್ಯಾಧಾರಿತ ನೌಕರರನ್ನು ನಿಯೋಜಿಸುವುದರೊಂದಿಗೆ ರೇಷ್ಮೆ ನೂಲು ಉತ್ಪಾದನೆಯ ಪ್ರಮಾಣ ಹೆಚ್ಚಿಸಲು ಸರ್ಕಾರ ಡಿಪಿಆರ್ ಸಿದ್ಧಪಡಿಸುತ್ತಿದ್ದು, ರೇಷ್ಮೆ ನೂಲು ತಯಾರಿಕಾ ಘಟಕ ಮುಚ್ಚುವ ವದಂತಿ ಸತ್ಯಕ್ಕೆ ದೂರವಾದುದು ಎಂದು ಹೆಸರು ಹೇಳಲಿಚ್ಛಿಸದ ಅಧಿಕಾರಿಯೊಬ್ಬರು ಸ್ಪಷ್ಟಪಡಿಸಿದ್ದಾರೆ.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿಗಳು, ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ರೇಷ್ಮೆ ಸಚಿವರು ತಿ.ನರಸೀಪುರದಲ್ಲಿರುವ ರೇಷ್ಮೆ ನೂಲು ತಯಾರಿಕಾ ಘಟಕವನ್ನು ಮೇಲ್ದರ್ಜೆಗೇರಿಸಲು ನಿರ್ಧರಿಸಿದ್ದಾರೆ. ವಯೋ ನಿವೃತ್ತಿಯಿಂದಾಗಿ ಖಾಲಿಯಾಗುತ್ತಿರುವ ಹುದ್ದೆಗೆ ಕೌಶಲ್ಯವಿರುವ ಸಿಬ್ಬಂದಿ ನೇಮಕ, ನೂಲು ಉತ್ಪಾದನಾ ಪ್ರಮಾಣ ವೃದ್ಧಿಗೆ ಬೇಕಾದ ಡಿಪಿಆರ್ ಸಿದ್ಧಪಡಿಸುತ್ತಿದೆ. ಯಾವುದೇ ಕಾರಣಕ್ಕೂ ನೂಲು ಉತ್ಪಾಧನಾ ಘಟಕ ಮುಚ್ಚುವುದಿಲ್ಲ. ಅದನ್ನು ಇನ್ನಷ್ಟು ಅಭಿವೃದ್ಧಿ ಪಡಿಸಲು ಸರ್ಕಾರ ಕ್ರಮ ಕೈಗೊಳ್ಳಲು ಉದ್ದೇಶಿಸಿದೆ ಎಂದರು.

ಹೆಚ್ಚುವರಿ ಜಾಗದಲ್ಲಿ ಕ್ರೀಡಾಂಗಣ: ರೇಷ್ಮೆ ನೂಲು ತಯಾರಿಕಾ ಘಟಕ ಹೊರತುಪಡಿಸಿ, ಹೆಚ್ಚುವರಿ ಜಾಗವನ್ನು ಮಾತ್ರ ತಾಲೂಕು ಕ್ರೀಡಾಂಗಣ ನಿರ್ಮಾಣಕ್ಕೆ ಬಳಸಿಕೊಳ್ಳಲಾಗುತ್ತಿದೆ. 2008ರಿಂದಲೂ ಈ ಉದ್ದೇಶಕ್ಕೆ ಇರಿಸಲಾಗಿದೆ. ಈಗ ಅನುದಾನ ಬಿಡುಗಡೆಯಾಗಿರುವುದರಿಂದ, ತಾಲೂಕಿಗೆ ಕ್ರೀಡಾಂಗಣದ ಅವಶ್ಯಕತೆಯೂ ಇರುವುದರಿಂದ ಕ್ರೀಡಾಂಗಣ ಕಾಮಗಾರಿ ಕೈಗೊಳ್ಳಲು ಉದ್ದೇಶಿಸಲಾಗಿದೆ. ನಿಯಮಾನುಸಾರ ಪಟ್ಟಣದಿಂದ 5 ಕಿ.ಮೀ ಅಂತರದಲ್ಲಿ ಕ್ರೀಡಾಂಗಣವಿರಬೇಕು. ಆದರೆ, ಪಟ್ಟಣದ ಸುತ್ತಮುತ್ತ ಕೃಷಿ ಭೂಮಿ ಹೆಚ್ಚಾಗಿರುವುದರಿಂದ ಪರ್ಯಾಯ ಭೂಮಿ ಸಿಕ್ಕಿಲ್ಲ. ಆ ಕಾರಣದಿಂದ ಹೆಚ್ಚುವರಿ ಭೂಮಿಯಲ್ಲಿ ಕ್ರೀಡಾಂಗಣ ನಿರ್ಮಿಸಲು ಸರ್ಕಾರ ಕ್ರಮ ಕೈಗೊಂಡಿದೆ ಎಂದು ಸ್ಪಷ್ಟಪಡಿಸಿದರು.


ತಯಾರಿಕಾ ವಿಧಾನ

ಪ್ರಕ್ರಿಯೆ 1: ಮಾರುಕಟ್ಟೆಯಿಂದ ರೇಷ್ಮೆಗೂಡು ತಂದ ಬಳಿಕ (ಹಾಟ್ ಅಂಡ್ ಏರ್–ಬಿಸಿ ಗಾಳಿ) ಹಬೆ ಗಾಳಿ ಯಂತ್ರ ವಿಭಾಗದಲ್ಲಿ ಗೂಡನ್ನು ಡ್ರೈ ಮಾಡಲಾಗುತ್ತದೆ. ಗೂಡಲ್ಲಿರುವ ಹುಳು ಸೂಕ್ಷ್ಮವಾಗಿದ್ದು, ಗೂಡಿಗೆ ಸ್ಟೀಮ್ ಕೊಟ್ಟರೆ ಗೂಡಲ್ಲಿರುವ ಹುಳು ಸಾಯುತ್ತದೆ. ಇದರಿಂದ ರೇಷ್ಮೆ ಗೂಡಿಗೆ ಯಾವುದೇ ತೊಂದರೆಯಾಗುವುದಿಲ್ಲ. ಆಗ ಮಾತ್ರ 4–5 ತಿಂಗಳು ಸಂಗ್ರಹ ಮಾಡಲು ಯೋಗ್ಯವಾಗಿರುತ್ತದೆ. ಇಲ್ಲದಿದ್ದರೆ ಗೂಡಲ್ಲಿರುವ ಹುಳು ಚಿಟ್ಟೆಯಾಗಿ ಮಾರ್ಪಟ್ಟು ಗೂಡನ್ನು ಕೊರೆಯುತ್ತದೆ. ಇದರಿಂದ ಗೂಡಿನಿಂದ ನೂಲು ತೆಗೆಯಲು ಸಾಧ್ಯವಾಗುವುದಿಲ್ಲ. ನೂಲು ತೆಗೆಯಬೇಕಾದರೆ ಗೂಡೊಳಗೆ ಸತ್ತಿರುವ ಹುಳುವಿನ ಭಾರದಿಂದ ಗೂಡು ನೀರಲ್ಲಿ ಅರ್ಧ ತೇಲುವ ಸ್ಥಿತಿಯಲ್ಲಿದ್ದರೆ ಮಾತ್ರ ಯಂತ್ರದ ಸಹಾಯದಿಂದ ನೂಲು ತೆಗೆಯಲು ಸಾಧ್ಯ. ಗೂಡು ನೀರಲ್ಲಿ ಮುಳುಗಿದರೆ ನೂಲು ತೆಗೆಯಲು ಸಾಧ್ಯವಿಲ್ಲ.


ಪ್ರಕ್ರಿಯೆ 2: ಎರಡನೇ ಪ್ರಕ್ರಿಯೆಯು ಗೂಡನ್ನು ಆರಿಸುವುದು(ಕಕೂನ್ ಶಾರ್ಟಿಂಗ್) ಎಂದು ಕರೆಯಲಾಗುತ್ತದೆ. ಇದರಲ್ಲಿ ರೇಷ್ಮೆ ಗೂಡುಗಳನ್ನು ವಿಂಗಡಿಸುವುದು. ಚೆನ್ನಾಗಿರುವ ಗೂಡನ್ನು ಪ್ರತ್ಯೇಕಿಸಲಾಗುತ್ತದೆ. ಮೂರು ತರದ ಗೂಡು ಕಂಡು ಬರುತ್ತದೆ. ಅದರಲ್ಲಿ ಡಬಲ್ ಕಕೂನ್, ಕಟ್ ಕಕೂನ್, ಇನ್‌ಪಿಯರ್ ಕಕೂನ್ ಎಂದು ವಿಂಗಡಣೆ ಮಾಡಲಾಗುತ್ತದೆ. ಡಬಲ್ ಕಕೂನ್ ಗೂಡಲ್ಲಿ ಎರಡು ಹುಳು ಇರುತ್ತವೆ. ಅದನ್ನು ನೂಲು ತಯಾರಿಕೆಗೆ ಬಳಸಲ್ಲ. ಇನ್‌ಫಿಯರ್ ಕಕೂನ್‌ನಲ್ಲಿ ಪಂಗಸ್ ಮಾದರಿಯಲ್ಲಿ ಬಣ್ಣಕ್ಕೆ ತಿರುಗುತ್ತದೆ. ಅದನ್ನು ಪ್ರತ್ಯೇಕಿಸಿ, ಚೀಲದಲ್ಲಿ ತುಂಬಿಡಲಾಗುತ್ತದೆ. ಉತ್ತಮವಾದ ಗೂಡನ್ನು ಮಾತ್ರ ನೂಲು ತಯಾರಿಕೆಗೆ ಬಳಸಲಾಗುತ್ತದೆ. ಉತ್ತಮ ಗುಣಮಟ್ಟಕ್ಕಾಗಿ 26ರಿಂದ 28 ಡಿನೆಯ್ ಗಾತ್ರದ ನೂಲನ್ನು ತಯಾರಿಸಲಾಗುತ್ತದೆ

3ನೇ ಕ್ರಿಯೆ: ಗೂಡನ್ನು ಬೇಯಿಸುವುದು. ಗೂಡನ್ನು ತಂದು ಹೈ ಟೆಂಪ್ರೇಚರ್‌ನಿಂದ ಲೋ ಟೆಂಪ್ರೇಚರ್ ವರೆಗೆ ಗೂಡನ್ನು ಬೇಯಿಸಲಾಗುತ್ತದೆ. ಮೊದಲು ಹೈ ಟೆಂಪ್ರೇಚರ್‌ನಿಂದ ಬೇಯಿಸಿ ನಂತರ ಕಡಿಮೆ ಮಾಡುತ್ತಾ ಬರಲಾಗುತ್ತದೆ. ಆ ಬಳಿಕ ರೀಲಿಂಗ್ ಯುನಿಟ್‌ನಲ್ಲಿ ಗೂಡಿನಿಂದ ನೂಲು ತೆಗೆಯುವ ಪ್ರಕ್ರಿಯೆ ಆರಂಭಿಸಲಾಗುತ್ತದೆ. ಚಿಕ್ಕ ರಾಟೆಗಳಿಗೆ ದಾರ ಸುತ್ತಿಡಲಾಗುತ್ತದೆ. ಅದನ್ನು ರೀ ರೀಲಿಂಗ್ ವಿಭಾಗದಲ್ಲಿ ದೊಡ್ಡ ರಾಟೆಗಳಿಗೆ ಸುತ್ತಿಸಲಾಗುತ್ತದೆ. ಇದರಿಂದ ಸಿಲ್ಕ್ ಬಿಚ್ಚಿಕೊಳ್ಳುವಂತೆ ಮಾಡಲಾಗುತ್ತದೆ. ಇದಾದ ಬಳಿಕ ಸಿಲ್ಕ್ ಸ್ಟೋರ್ ಸೆಕ್ಷನ್‌ಗೆ ಮಿಷನ್‌ನಲ್ಲಿ ಟ್ವಿಸ್ಟಿಂಗ್ ಮಾಡಿ, 20 ಕೆಜಿಗೆ ಒಂದು ಬ್ಯಾಗ್‌ನಂತೆ ಪ್ಯಾಕ್ ಮಾಡಿ ಸೀಲ್ ಹಾಕಿ ಗೋಡೌನ್‌ಗೆ ಸಂಗ್ರಹ ಮಾಡಲಾಗುತ್ತದೆ. ನಂತರ ಬೇಡಿಕೆಗೆ ಅನುಗುಣವಾಗಿ ಮೈಸೂರು, ಚೆನ್ನಪಟ್ಟಣದ ರೇಷ್ಮೆ ಸೀರೆ ತಯಾರಿಕಾ ಘಟಕಕ್ಕೆ ಸರಬರಾಜು ಮಾಡಲಾಗುತ್ತದೆ.

ತಿ.ನರಸೀಪುರದಲ್ಲಿರುವ ನೂಲು ತಯಾರಿಕಾ ಕೇಂದ್ರದಲ್ಲಿ 1984ರಲ್ಲಿ ಸೆಮಿ ಆಟೋಮ್ಯಾಟಿಕ್ ಯಂತ್ರ ಅಳವಡಿಸಲಾಗಿದೆ. 2017 ಮತ್ತು 2019ರಲ್ಲಿ ಚೀನಾದಿಂದ ಸುಧಾರಿತ ನೂಲು ತೆಗೆಯುವ ಯಂತ್ರ ತಂದು ಕೆಲಸ ಆರಂಭಿಸಲಾಗಿದೆ. ಐದು ಕೋಟಿ ರೂ. ಮೌಲ್ಯದ ಈ ಆಟೋಮ್ಯಾಟಿಕ್ ಯಂತ್ರ ಇದು ಅಡ್ವಾನ್ಸ್ ಯಂತ್ರವಾಗಿದ್ದು, ನೌಕರರ ಶ್ರಮ ಕಡಿಮೆಯಾಗಿ ಪ್ರೊಡಕ್ಷನ್ ಜಾಸ್ತಿ ಮಾಡಲು ಸಾಧ್ಯವಾಗಿದೆ.









ಸೆ. 4ರಿಂದ 6ರವರೆಗೆ ಫಿಲಡೆಲ್ಫಿಯಾದಲ್ಲಿ 'ಅಕ್ಕ' ರಜತ ಮಹೋತ್ಸವ

ಬೆಂಗಳೂರು, ಫೆ27(ಕೆಎಂಶಿ)– ಸೆಪ್ಟೆಂಬರ್ 4 ರಿಂದ 6 ರವರೆಗೆ ಅಮೆರಿಕದ ಫಿಲಡೆಲ್ಫಿಯಾ ನಗರದಲ್ಲಿ ಅಕ್ಕ ಸಂಸ್ಥೆಯ 25ನೇ ವರ್ಷದ ರಜತ ಮಹೋತ್ಸವವನ್ನು ಅದ್ಧೂರಿಯಾಗಿ ಆಚರಿಸಲು ನಿರ್ಧರಿಸಲಾಗಿದೆ.

ಅಮೆರಿಕ ಕನ್ನಡಿಗರ ಅತೀ ದೊಡ್ಡ ಸಂಘಟನೆ 'ಅಕ್ಕ' ಕಳೆದ 25 ವರ್ಷಗಳಿಂದ ಕನ್ನಡ ಭಾಷೆ, ಸಂಸ್ಕೃತಿ, ಪರಂಪರೆ ಹಾಗೂ ಕನ್ನಡ ಸೇವೆ ಉತ್ತೇಜಿಸುವ ಮಹತ್ವದ ಕಾರ್ಯಗಳನ್ನು ನಿರಂತರವಾಗಿ ನಡೆಸಿಕೊಂಡು ಬರುತ್ತಿದೆ.

ಬೆಳ್ಳಿ ಹಬ್ಬ ಸಂಭ್ರಮ ಆಚರಣೆ ವಿಶ್ವಾದ್ಯಂತ ಕನ್ನಡಿಗರ ಏಕತೆಯ ಪ್ರತೀಕವಾಗಿದ್ದು, ಕರ್ನಾಟಕ ಹಾಗೂ ಅಮೆರಿಕದ ವಿವಿಧ ರಾಜ್ಯಗಳಿಂದ ಕನ್ನಡಾಭಿಮಾನಿಗಳು ಭಾಗವಹಿಸಲಿದ್ದಾರೆ.

ಮೂರು ದಿನಗಳ ಕಾರ್ಯಕ್ರಮದಲ್ಲಿ ಕನ್ನಡ ನಾಡು–ನುಡಿಗೆ ಸಂಬಂಧಿಸಿದ ಸಾಂಸ್ಕೃತಿಕ ಕಾರ್ಯಕ್ರಮಗಳು, ವಾಣಿಜ್ಯ ಹಾಗೂ ಉದ್ಯಮಿಗಳ ಸಮ್ಮೇಳನ, ವಿಶೇಷ ಪ್ರದರ್ಶನ ಮಳಿಗೆಗಳು, ಕನ್ನಡ ಸಿನಿಮಾಗಳು, ನಾಟಕಗಳ ಪ್ರದರ್ಶನ ಸೇರಿದಂತೆ ಹಲವು ವೈವಿಧ್ಯಮಯ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಅಕ್ಕ ರಜತ ಮಹೋತ್ಸವ ಕಾರ್ಯಕ್ರಮ ಒಂದು ಉತ್ಸವ ಮಾತ್ರವಲ್ಲ. ಇದು 25 ವರ್ಷಗಳ ಸಾಧನೆ, ಸಮರ್ಪಣೆ ಮತ್ತು ಕನ್ನಡಿಗರ ಏಕತೆಯ ಸಂಭ್ರಮವಾಗಿದೆ. ಐತಿಹಾಸಿಕ ಸಮಾರಂಭಕ್ಕೆ ಎಲ್ಲರನ್ನು ಆತ್ಮೀಯವಾಗಿ ಆಹ್ವಾನಿಸುವುದಾಗಿ ಸಂಸ್ಥೆ ತಿಳಿಸಿದೆ.

ಕೆಲವೇ ದಿನಗಳಲ್ಲಿ ಕಾರ್ಯಕ್ರಮದ ರೂಪುರೇಷೆ ಹಾಗೂ ನೋಂದಣಿ ವಿವರಗಳನ್ನು ಪ್ರಕಟಿಸಲಾಗುವುದು ಎಂದು ಅಕ್ಕ ಸಂಸ್ಥೆ ಅಧ್ಯಕ್ಷ ಮುದ್ದು ರಂಗಯ್ಯ ತಿಳಿಸಿದ್ದಾರೆ.

ಬೀಳ್ಕೊಡುಗೆ



ಮೈಸೂರು ತಾಲೂಕು, ಜಯಪುರ ಪೊಲೀಸ್ ಠಾಣೆಯಿಂದ ಮೈಸೂರು ನಗರಕ್ಕೆ ವರ್ಗಾವಣೆಗೊಂಡ ಸಿಬ್ಬಂದಿ ಗಿರೀಶ್ ಅವರನ್ನು ಅಭಿನಂದಿಸಿ, ಬೀಳ್ಕೊಡಲಾಯಿತು. ಈ ವೇಳೆ ಸಬ್‌ಇನ್ಸ್‌ಪೆಕ್ಟರ್ ಕಾಳೇಗೌಡ, ಎಎಸ್ಐ ಉಮೇಶ್, ಸಿಬ್ಬಂದಿ ಶ್ರೀನಿವಾಸ್, ಮಹದೇವಸ್ವಾಮಿ, ಸಚಿನ್, ಕವೀಶ್, ರಾಜೇಂದ್ರ ಮತ್ತಿತರರು ಉಪಸ್ಥಿತರಿದ್ದರು.

ಹಳೇ ಮೀಸಲಾತಿ ಯಥಾವತ್ ಜಾರಿಗೆ ಆಗ್ರಹಿಸಿ ಬಲಗೈ ಸಮುದಾಯ ಪ್ರತಿಭಟನೆ ನಿರ್ಧಾರ

ಮೈಸೂರು, ಫೆ.27(ವಿವಿಹೆಚ್)– ಮೈಸೂರಿನ ಅಶೋಕಪುರಂನ ಅಂಬೇಡ್ಕರ್ ಉದ್ಯಾನವನದಲ್ಲಿ ಬಲಗೈ ಜಾತಿಗಳ ಒಕ್ಕೂಟದ ವತಿಯಿಂದ ಶುಕ್ರವಾರ ಆಯೋಜಿಸಿದ್ದ ಒಳಮೀಸಲಾತಿ ಸರದಿ ಪಟ್ಟಿ(ರೋಸ್ಟರ್ ಬಿಂದು)ಯಲ್ಲಿ ವಿದ್ಯಾರ್ಹತೆ ಮತ್ತು ಉದ್ಯೋಗದ ವಿಷಯದಲ್ಲಿ ಬಲಗೈ ಜನಾಂಗಕ್ಕೆ ಆಗಿರುವ ಅನ್ಯಾಯ ಖಂಡಿಸಿ ಆಯೋಜಿಸಲಾಗಿದ್ದ ತುರ್ತು ಸಭೆಯಲ್ಲಿ ರೋಸ್ಟರ್ ಬಿಂದುವನ್ನು ಸರಿಪಡಿಸಬೇಕು. ಇಲ್ಲವೇ ಹಳೇ ಮೀಸಲಾತಿಯನ್ನು ಯಥಾವತ್ತಾಗಿ ಜಾರಿಗೊಳಿಸುವಂತೆ ಆಗ್ರಹಿಸಿ ಪ್ರತಿಭಟನೆ ನಡೆಸಲು ಒಕ್ಕೊರಲಿನಿಂದ ತೀರ್ಮಾನಿಸಲಾಯಿತು.

ಒಳ ಮೀಸಲಾತಿಯಲ್ಲಿನ ಗೊಂದಲಗಳಿಗೆ ಸಂಬಂಧಿಸಿದಂತೆ ಈಗಾಗಲೇ ಸರ್ಕಾರ ಹೇಳಿರುವ 56432 ಸರ್ಕಾರಿ ನೇಮಕಾತಿಯ ನೋಟಿಫಿಕೇಷನ್ ಆಧಾರದ ಮೇಲೆ ಮುಂದಿನ ನಿರ್ಣಯ ಕೈಗೊಳ್ಳಲಾಗುವುದು ಎಂದು ನಿರ್ಧರಿಸಿದರು.

ಒಳಮೀಸಲಾತಿ ಸಂಬಂಧ ಸರ್ಕಾರಕ್ಕೆ ಹಾಗೂ ಸಮುದಾಯಗಳಿಗೆ ಇನ್ನೂ ಗೊಂದಲಗಳಿವೆ. ನಮ್ಮ ಹಕ್ಕುಗಳನ್ನು ಪಡೆಯಲು ಹೋರಾಟ ನಿರಂತರವಾಗಿರಬೇಕು. ಸರ್ಕಾರ ಈಗಾಗಲೇ ಆದೇಶ ಹೊರಡಿಸಿರುವಂತೆ 6, 6, 5 ಒಳಮೀಸಲಾತಿ ಯಥಾವತ್ತು ಜಾರಿಯಾದಲ್ಲಿ ಹೋರಾಟವನ್ನು ಕೈ ಬಿಡಲಾಗುವುದು ಇಲ್ಲವಾದಲ್ಲಿ ಒಳಮೀಸಲಾತಿ ರದ್ದತಿಗಾಗಿ ರಾಜ್ಯಾದ್ಯಂತ ಹೋರಾಟದ ಕಿಚ್ಚು ಹತ್ತಿಸುವುದಾಗಿ ತೀರ್ಮಾನಿಸಿದರು.



ವಕೀಲ ಜಯಶಂಕರ್ ಬಲಗೈ ಜಾತಿಗಳ ಒಕ್ಕೂಟ ಸಭೆಯಲ್ಲಿ ಮಾತನಾಡಿದರು.

ನಾವು ಹೋರಾಟಗಾರರು ಆದೆವು ಹೊರತಾಗಿ ಫಲಾನುಭವಿಗಳು ಆಗಲಿಲ್ಲ. ಇಲ್ಲಿನ ವ್ಯವಸ್ಥೆ ನಮ್ಮಲ್ಲಿನ ಬಿರುಕು, ಅಸಮಾನತೆಯನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತಿದೆ. ನಮ್ಮ ನಮ್ಮ ನಡುವೆ ದ್ವೇಷ ಬಿತ್ತಿ, ಮೀಸಲಾತಿ ಸೇರಿದಂತೆ ಸಾಮಾಜಿಕ ನ್ಯಾಯ ಪಡೆಯುವ ಕಡೆಗೆ ಗಮನ ನೀಡದಂತೆ ಒಳಸಂಚು ರೂಪಿಸಲಾಗುತ್ತಿದೆ. ಮೀಸಲಾತಿ ಎಂಬ ಚಕ್ರವ್ಯೂಹ ಭೇದಿಸಲು ಹೆಚ್ಚಿನ ಆದ್ಯತೆ ನೀಡಲಾಗುತ್ತಿಲ್ಲ. ಈ ಎಲ್ಲಾ ಗಂಭೀರ ಪ್ರಕರಣಗಳ ಬಗ್ಗೆ ಮನೆ–ಮನೆಗೆ ತೆರಳಿ, ಮಹಿಳೆಯರೂ ಸೇರಿದಂತೆ ಎಲ್ಲರಿಗೂ ಮನದಟ್ಟು ಮಾಡಿಕೊಡಬೇಕಿದೆ. ಸಂಘಟನೆಗೆ ಸೀಮಿತವಾಗಿರದೇ, ಹಕ್ಕುಗಳನ್ನು ಪಡೆಯಲು ಬೀದಿಗಿಳಿದು ಹೋರಾಟ ಮಾಡಲು ನಿರ್ಧರಿಸಲಾಯಿತು.

ಅಂತಿಮವಾಗಿ ಡಿಪಿಎಆರ್‌ನಲ್ಲಿ ಆಗಿರುವ ಅಕ್ರಮವನ್ನು ಸರಿಪಡಿಸಬೇಕು, ಯೂನಿವರ್ಸಿಟಿ ಘಟಕ ಮಾಡಬಾರದು, ಪ್ರವರ್ಗ ಎ ಬಿ ಸಿ ಆಧಾರದಲ್ಲಿ ಜಾತಿ ಪ್ರಮಾಣ ಪತ್ರಗಳನ್ನು ನೀಡಬಾರದು ಅದರೊಂದಿಗೆ ಒಳಮೀಸಲಾತಿ ವಿರುದ್ಧ ಕೊಳ್ಳೇಗಾಲದಲ್ಲಿ ಹೋರಾಟ ಮಾಡಿದ 13 ಮಂದಿ ಮೇಲೆ ದಾಖಲಿಸಲಾಗಿರುವ ಎಫ್‌ಐಆರ್ ಅನ್ನು ರದ್ದುಪಡಿಸಬೇಕು. ಇದ್ಯಾವುದು ನಡೆಯದೇ ಹೋದಲ್ಲಿ ಮೈಸೂರಿನಿಂದ ಪ್ರಾರಂಭವಾಗುವ ಈ ಹೋರಾಟ ಧಾರವಾಡದಲ್ಲಿ ನಡೆದ ಜೆನ್–ಜಿ ಮಾದರಿಯ ಹೋರಾಟವನ್ನು ಇಡೀ ರಾಜ್ಯಾದ್ಯಂತ ನಡೆಸುವಂತೆ ಸಭೆಯಲ್ಲಿ ನಿರ್ಣಯಿಸಲಾಯಿತು.

ಈ ವೇಳೆ ಶ್ಯಾಮ ಸುಂದರ್, ಶ್ರೀನಿವಾಸ ಪ್ರಸಾದ್, ಅವಿನಾಶ್, ಡಾ.ರಾಜು ಬಿಎಸ್‌ಪಿ, ಗಾಂಧಿನಗರದ ಮೋಹನ್, ವಕೀಲ ಜಯಶಂಕರ್, ಎಸ್‌ಡಿಪಿಐ ಜಿಲ್ಲಾ ಉಪಾಧ್ಯಕ್ಷ ಪುಟ್ಟನಂಜಯ್ಯ, ಮೋಹನ್ ಐಪಿಎಸ್ ನಗರ, ಗಾಂಧಿನಗರ, ಅಶೋಕಪುರಂ, ದಡದಳ್ಳಿ ಗ್ರಾಮಗಳ ದಲಿತ ಮುಖಂಡರು ಸಭೆಯಲ್ಲಿ ಉಪಸ್ಥಿತರಿದ್ದರು.

ಬಿಸಿಸಿಐ ವಿಜ್ಜೆ ಟ್ರೋಫಿ ಕ್ರಿಕೆಟ್ ಪಂದ್ಯಾವಳಿಗೆ ರಿಷವ್ ಆಯ್ಕೆ

ಕೊಡಗು ಮೂಲದ ಯುವ ಕ್ರಿಕೆಟ್ ಪಟು ಸಾಧನೆ

ಮೈಸೂರು,ಫೆ.27(ಪಿಎಂ)– ಬೆಂಗಳೂರಿನ ಆರ್‌ವಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ದ್ವಿತೀಯ ವರ್ಷದ ಮೆಕ್ಯಾನಿಕಲ್ ಇಂಜಿನಿಯರಿಂಗ್ ವಿದ್ಯಾರ್ಥಿಯಾದ ಕೊಡಗು ಮೂಲದ 19 ವರ್ಷದ ರಿಷವ್ ಅಪ್ಪಚ್ಚು ಮನವಟ್ಟೀರ, ಬಿಸಿಸಿಐ (ಬೋರ್ಡ್ ಆಫ್ ಕಂಟ್ರೋಲ್ ಫಾರ್ ಕ್ರಿಕೆಟ್ ಇನ್ ಇಂಡಿಯಾ) ಆಯೋಜಿಸಿರುವ ಪ್ರತಿಷ್ಠಿತ ವಿಜ್ಜೆ ಟ್ರೋಫಿ ಕ್ರಿಕೆಟ್ ಪಂದ್ಯಾವಳಿಯಲ್ಲಿ ದಕ್ಷಿಣ ವಲಯವನ್ನು ಪ್ರತಿನಿಧಿಸಲು ಆಯ್ಕೆಯಾಗಿದ್ದಾರೆ.

ಮಾರ್ಚ್ 1ರಿಂದ 5ರವರೆಗೆ ಗೋವಾದ ಪಂಜಿಮ್ ಜಿಮ್ಖಾನಾ ಮೈದಾನದಲ್ಲಿ ವಿಜ್ಜೆ ಟ್ರೋಫಿ ಕ್ರಿಕೆಟ್ ಪಂದ್ಯಾವಳಿ ನಡೆಯಲಿದೆ. ಈ ಕ್ರಿಕೆಟ್ ಪಂದ್ಯಾವಳಿಗೆ ಆಯ್ಕೆಯಾಗಿರುವ ಆರ್‌ವಿ ಇಂಜಿನಿಯರಿಂಗ್‌ನ ಮೊದಲ ವಿದ್ಯಾರ್ಥಿ ಎಂಬ ಹೆಗ್ಗಳಿಕೆಯು ರಿಷವ್ ಅವರಿಗೆ ಸಲ್ಲುತ್ತದೆ. ಬಲಗೈ ವಿಕೆಟ್ ಕೀಪರ್ ಹಾಗೂ ಬ್ಯಾಟ್ಸ್‌ಮನ್ ಆಗಿರುವ ರಿಷವ್, ಸೂಕ್ತ ತರಬೇತಿಯೊಂದಿಗೆ ಉತ್ತಮ ಪ್ರದರ್ಶನಗಳ ಮೂಲಕ ಭರವಸೆಯ ಕ್ರಿಕೆಟ್ ಪಟುವಾಗಿ ಹೊರಹೊಮ್ಮಿದ್ದಾರೆ.

ಮೈಸೂರಿನ ಜೆಎಸ್‌ಎಸ್ ವಿಜ್ಞಾನ ಮತ್ತು ತಾಂತ್ರಿಕ ವಿವಿ ಆವರಣದಲ್ಲಿ ನಡೆದ ದಕ್ಷಿಣ ವಲಯ ಅಂತರ ವಿವಿ ಪುರುಷರ ಕ್ರಿಕೆಟ್ ಚಾಂಪಿಯನ್‌ಶಿಪ್ 2025–26ರಲ್ಲಿ ವಿಟಿಯು ತಂಡವನ್ನು ಪ್ರತಿನಿಧಿಸಿದ್ದ ರಿಷವ್ ಅವರ ಅತ್ಯುತ್ತಮ ಪ್ರದರ್ಶನದ ಹಿನ್ನೆಲೆಯಲ್ಲಿ ವಿಜ್ಜೆ ಟ್ರೋಫಿಗೆ ಆಯ್ಕೆ ಮಾಡಲಾಗಿದೆ. ವಿಟಿಯು ಈ ಪಂದ್ಯಾವಳಿಯಲ್ಲಿ ಫೈನಲ್ ತಲುಪಿದ್ದು ಇದೇ ಮೊದಲು ಎಂಬುದು ಗಮನಾರ್ಹ. 128 ತಂಡಗಳ ಅತ್ಯಂತ ಸ್ಪರ್ಧಾತ್ಮಕ ಆಟದಲ್ಲಿ ರನ್ ಗಳಿಸಿದ ಅಗ್ರ ಐವರು ಆಟಗಾರರಲ್ಲಿ ರಿಷವ್ ಸ್ಥಾನ ಗಳಿಸಿದವರು.



ಈ ಪಂದ್ಯಾವಳಿಯಲ್ಲಿ ರಿಷವ್ ಅವರ ತಂಡವು ದ್ವಿತೀಯ ಸ್ಥಾನ ಪಡೆದುಕೊಳ್ಳುವ ಮೂಲಕ ಸೌರಾಷ್ಟ್ರದಲ್ಲಿ ನಡೆದ ಅಖಿಲ ಭಾರತ ಅಂತರ ವಿವಿ ಚಾಂಪಿಯನ್‌ಶಿಪ್ 2025–26ಕ್ಕೆ ಅರ್ಹತೆ ಪಡೆಯಿತು. ಈ ಯಶಸ್ಸಿಗೆ ರಿಷವ್ ಅವರ ಕೊಡುಗೆ ಮಹತ್ವದ್ದಾಗಿದೆ. ಕಳೆದ 13 ವರ್ಷಗಳಿಂದ ವೃತ್ತಿಪರ ಕ್ರಿಕೆಟ್ ಪಟುವಾಗಿರುವ ರಿಷವ್, ಹಲವು ವಲಯ ಮತ್ತು ಲೀಗ್ ಪಂದ್ಯಗಳಲ್ಲಿ ಹಾಗೂ ಕಾರ್ಪೊರೇಟ್ ಪಂದ್ಯಾವಳಿಗಳಲ್ಲಿ ಆಡಿದ ಅನುಭವ ಹೊಂದಿದ್ದಾರೆ. ಇವರು ನೇಪಾಳದಲ್ಲಿ ಕರ್ನಾಟಕ ಅಂಡರ್ 19 ತಂಡ ಪ್ರತಿನಿಧಿಸಿ ಸಹ ಆಟವಾಡಿದ್ದಾರೆ. ರಿಷವ್ ಅವರು ಕೊಡಗು ಜಿಲ್ಲೆ ಮಡಿಕೇರಿ ತಾಲೂಕಿನ ನಾಪೋಕ್ಲು ಗ್ರಾಮದ ರಂಜು ಬೆಳ್ಳಿಯಪ್ಪ ಮತ್ತು ಸೌಮ್ಯ ಬೆಳ್ಳಿಯಪ್ಪ ದಂಪತಿ ಪುತ್ರರಾಗಿದ್ದಾರೆ.

ಮೈಸೂರು ಮಿತ್ರ

ಜಯಲಲಿತಾ ನೆಚ್ಚಿನ ಶಿಷ್ಯ ಮಾಜಿ ಸಿಎಂ ಪನ್ನೀರ್‌ಸೆಲ್ವಂ ಡಿಎಂಕೆ ಸೇರ್ಪಡೆ



ಚೆನ್ನೈ: ತಮಿಳುನಾಡಿನ ಮಾಜಿ ಮುಖ್ಯಮಂತ್ರಿ, ಉಚ್ಚಾಟಿತ ಎಐಎಡಿಎಂಕೆ ನಾಯಕ ಹಾಗೂ ದಿವಂಗತ ಜಯಲಲಿತಾ ಅವರ ಮೆಚ್ಚಿನ ಶಿಷ್ಯರಾಗಿದ್ದ ಪನ್ನೀರ್‌ಸೆಲ್ವಂ ಶುಕ್ರವಾರ ಡಿಎಂಕೆ ಪಕ್ಷಕ್ಕೆ ಸೇರ್ಪಡೆಯಾಗಿದ್ದಾರೆ.

ಚೆನ್ನೈನ ಡಿಎಂಕೆ ಪ್ರಧಾನ ಕಚೇರಿಯಾದ ಅಣ್ಣಾ ಅರಿವಲಯಂನಲ್ಲಿ ಮುಖ್ಯಮಂತ್ರಿ ಮತ್ತು ಡಿಎಂಕೆ ಅಧ್ಯಕ್ಷ ಎಂ.ಕೆ. ಸ್ಟಾಲಿನ್ ಅವರ ಸಮ್ಮುಖದಲ್ಲಿ ಓ. ಪನ್ನೀರ್‌ಸೆಲ್ವಂ ಅವರನ್ನು ಪಕ್ಷಕ್ಕೆ ಸೇರಿಸಿಕೊಳ್ಳಲಾಯಿತು. ಬೆಳಿಗ್ಗೆಯಿಂದಲೇ ಸ್ಥಳದ ಹೊರಗೆ ಜಮಾಯಿಸಿದ ಪನ್ನೀರ್‌ಸೆಲ್ವಂ ಅವರ ಬೆಂಬಲಿಗರು ಘೋಷಣೆಗಳನ್ನು ಕೂಗುತ್ತಿದ್ದರು, ಈ ವೇಳೆ ಪನ್ನೀರ್‌ಸೆಲ್ವಂ ಆಡಳಿತರೂಢ ಡಿಎಂಕೆ ಪಕ್ಷದ ಸದಸ್ಯತ್ವ ಸ್ವೀಕರಿಸಿದ್ದಾರೆ.

ಪನ್ನೀರ್‌ಸೆಲ್ವಂ ಅವರೊಂದಿಗೆ ಎಐಎಡಿಎಂಕೆ ಪಕ್ಷದ ಹಲವರು ಡಿಎಂಕೆಗೆ ಸೇರ್ಪಡೆಯಾಗಿದ್ದಾರೆ. 2022ರ ಜುಲೈ 11ರಂದು ಎಐಎಡಿಎಂಕೆಯ ಮಧ್ಯಂತರ ಪ್ರಧಾನ ಕಾರ್ಯದರ್ಶಿಯಾಗಿ ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ಎಡಪ್ಪಾಡಿ ಕೆ. ಪಳನಿಸ್ವಾಮಿ ಅವರನ್ನು ನೇಮಿಸಲಾಗಿತ್ತು. ಪ್ರತಿಸ್ಪರ್ಧಿಯಾಗಿದ್ದ ಓ.ಪನ್ನೀರಸೆಲ್ವಂ ಅವರನ್ನು ಪಕ್ಷದ ಖಜಾಂಚಿ ಹುದ್ದೆ ಮತ್ತು ಪ್ರಾಥಮಿಕ ಸದಸ್ಯತ್ವದಿಂದಲೇ ಉಚ್ಚಾಟಿಸಲಾಗಿತ್ತು.

ಎಐಎಡಿಎಂಕೆಯ ಮಾಜಿ ಸಚಿವ ಮತ್ತು ಹಾಲಿ ಶಾಸಕ ಆರ್. ವೈತಿಲಿಂಗಂ ಜನವರಿ 21 ರಂದು ವಿಧಾನಸಭೆಗೆ ರಾಜೀನಾಮೆ ನೀಡಿ ನಂತರ ಚೆನ್ನೈನಲ್ಲಿ ಡಿಎಂಕೆ ಸೇರಿದ ನಂತರ ಈ ಬೆಳವಣಿಗೆ ನಡೆದಿದೆ.

ಮಾ.30 ರಿಂದ ಏಪ್ರಿಲ್ 1ರವರೆಗೆ ಐತಿಹಾಸಿಕ ಬೆಂಗಳೂರು ಕರಗ!



ಬೆಂಗಳೂರು: ವಿಶ್ವವಿಖ್ಯಾತ, ಐತಿಹಾಸಿಕ ಪ್ರಸಿದ್ಧ ಬೆಂಗಳೂರು ಕರಗ ಮಹೋತ್ಸವಕ್ಕೆ ಡೇಟ್ ಫಿಕ್ಸ್ ಆಗಿದ್ದು, ಮಾರ್ಚ್ 30ರಿಂದ ಏಪ್ರಿಲ್ 1ರವರೆಗೆ ಬೆಂಗಳೂರು ಕರಗ ಉತ್ಸವ ನಡೆಯಲಿದೆ. ಈ ಬಾರಿಯೂ ಪೂಜಾರಿ ಎ.ಜ್ಞಾನೇಂದ್ರ ಕರಗ ಹೊರಲಿದ್ದಾರೆ. ಜ್ಞಾನೇಂದ್ರ ಅವರು 16ನೇ ಬಾರಿ ಬೆಂಗಳೂರು ಕರಗ ಹೊರುತ್ತಿದ್ದಾರೆ.

ಧರ್ಮರಾಯಸ್ವಾಮಿ ದೇವಾಲಯದ ಆಡಳಿತ ಮಂಡಳಿ ಹಾಗೂ ಮುಜರಾಯಿ ಇಲಾಖೆ ಎ ಜ್ಞಾನೇಂದ್ರ ಸ್ವಾಮಿ ಅವರನ್ನು ಕರಗ ಹೊರಲು ಆಯ್ಕೆ ಮಾಡಿದೆ. ಮಾರ್ಚ್ 24ರಂದು ಧ್ವಜಾರೋಹಣದ ಮೂಲಕ ಉತ್ಸವಕ್ಕೆ ಚಾಲನೆ ಸಿಗಲಿದೆ. ಮಾರ್ಚ್ 30ರಂದು ಹಸಿಕರಗ ನಡೆಯಲಿದೆ.

ಬಳಿಕ ಏಪ್ರಿಲ್ 1ರ ಮಧ್ಯರಾತ್ರಿ ಬೆಂಗಳೂರು ಕರಗ ಶಕ್ತ್ಯೋತ್ಸವ ನಡೆಯಲಿದೆ. ಇನ್ನು ಒಟ್ಟು 11 ದಿನಗಳ ಕಾಲ ವಿವಿಧ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ಶ್ರೀ ಧರ್ಮರಾಯಸ್ವಾಮಿ ಕರಗ ವಿಜೃಂಭಣೆಯಿಂದ ನಡೆಯಲಿದೆ.

ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು

ಮೈಸೂರಿನಲ್ಲಿ... ಮೈ-ಸೂರು

ಮೈಸೂರು ಅಭಿವೃದ್ಧಿ ಪ್ರಾಧಿಕಾರವು ಅಭಿವೃದ್ಧಿಪಡಿಸಿರುವ ಪ್ರತಿಷ್ಠಿತ ಬಡಾವಣೆಗಳಲ್ಲಿ ಮೂಲೆ ಮತ್ತು ಮಧ್ಯಂತರ ನಿವೇಶನಗಳ ಇ-ಹರಾಜು ಪ್ರಕಟಣೆ ಸಂಖ್ಯೆ/ಮೈ.ಅ.ಪ್ರಾ/ಇ.ಹ.ಪ್ರ/02/2025-26 ದಿನಾಂಕ: 27.02.2026,ರ ಪ್ರಕಟಣೆ ಹೊರಡಿಸಲು ಉದ್ದೇಶಿಸಿರುವ ವಿವರ.

1) ಇ-ಹರಾಜನ್ನು ಆರಂಭಿಸುವ ದಿನಾಂಕ: 11.03.2026 ರ ಭಾರತೀಯ ಕಾಲಮಾನ ಸಂಜೆ 6.00 ಗಂಟೆಯ ನಂತರ
2) ಕ್ರ.ಸಂ.1 ರಿಂದ 50 ರವರೆಗೆ ಇ-ಹರಾಜಿನಲ್ಲಿ ಪಾಲ್ಗೊಳ್ಳಲು ಆಸಕ್ತಿ ವ್ಯಕ್ತಪಡಿಸಲು ಕೊನೆಯ ದಿನಾಂಕ: 23.03.2026 ರ ಭಾರತೀಯ ಕಾಲಮಾನ ಸಂಜೆ 5.00 ಗಂಟೆಯವರೆಗೆ ಮತ್ತು ಇ-ಹರಾಜು ನೇರ ಬಿಡ್ಡಿಂಗ್ ಆರಂಭಿಸುವ ದಿನಾಂಕ: 26.03.2026 ರ ಭಾರತೀಯ ಕಾಲಮಾನ ಮಧ್ಯಾಹ್ನ 11.00 ಗಂಟೆಯಿಂದ ನೇರ ಬಿಡ್ಡಿಂಗ್ ಅಂತಿಮಗೊಳ್ಳುವ ದಿನಾಂಕ: 27.03.2026 ರ ಭಾರತೀಯ ಕಾಲಮಾನ ಸಂಜೆ 4.00 ಗಂಟೆಯವರೆಗೆ (ಡೆಲ್ಟಾ ಟೈಮ್ 5.00 ನಿಮಿಷ).
3) ಕ್ರ.ಸಂ.51 ರಿಂದ 100 ರವರೆಗೆ ಇ-ಹರಾಜಿನಲ್ಲಿ ಪಾಲ್ಗೊಳ್ಳಲು ಆಸಕ್ತಿ ವ್ಯಕ್ತಪಡಿಸಲು ಕೊನೆಯ ದಿನಾಂಕ: 23.03.2026 ರ ಭಾರತೀಯ ಕಾಲಮಾನ ಸಂಜೆ 5.00 ಗಂಟೆಯವರೆಗೆ ಮತ್ತು ಇ-ಹರಾಜು ನೇರ ಬಿಡ್ಡಿಂಗ್ ಆರಂಭಿಸುವ ದಿನಾಂಕ: 30.03.2026 ರ ಭಾರತೀಯ ಕಾಲಮಾನ ಮಧ್ಯಾಹ್ನ 11.00 ಗಂಟೆಯಿಂದ ನೇರ ಬಿಡ್ಡಿಂಗ್ ಅಂತಿಮಗೊಳ್ಳುವ ದಿನಾಂಕ: 01.04.2026 ರ ಭಾರತೀಯ ಕಾಲಮಾನ ಸಂಜೆ 4.00 ಗಂಟೆಯವರೆಗೆ (ಡೆಲ್ಟಾ ಟೈಮ್ 5.00 ನಿಮಿಷ).
4) ಕ್ರ.ಸಂ.101 ರಿಂದ 150 ರವರೆಗೆ ಇ-ಹರಾಜಿನಲ್ಲಿ ಪಾಲ್ಗೊಳ್ಳಲು ಆಸಕ್ತಿ ವ್ಯಕ್ತಪಡಿಸಲು ಕೊನೆಯ ದಿನಾಂಕ: 23.03.2026 ರ ಭಾರತೀಯ ಕಾಲಮಾನ ಸಂಜೆ 5.00 ಗಂಟೆಯವರೆಗೆ ಮತ್ತು ಇ-ಹರಾಜು ನೇರ ಬಿಡ್ಡಿಂಗ್ ಆರಂಭಿಸುವ ದಿನಾಂಕ: 02.04.2026 ರ ಭಾರತೀಯ ಕಾಲಮಾನ ಮಧ್ಯಾಹ್ನ 11.00 ಗಂಟೆಯಿಂದ ನೇರ ಬಿಡ್ಡಿಂಗ್ ಅಂತಿಮಗೊಳ್ಳುವ ದಿನಾಂಕ: 04.04.2026 ರ ಭಾರತೀಯ ಕಾಲಮಾನ ಸಂಜೆ 4.00 ಗಂಟೆಯವರೆಗೆ (ಡೆಲ್ಟಾ ಟೈಮ್ 5.00 ನಿಮಿಷ).
5) ಕ್ರ.ಸಂ.151 ರಿಂದ 200 ರವರೆಗೆ ಇ-ಹರಾಜಿನಲ್ಲಿ ಪಾಲ್ಗೊಳ್ಳಲು ಆಸಕ್ತಿ ವ್ಯಕ್ತಪಡಿಸಲು ಕೊನೆಯ ದಿನಾಂಕ: 23.03.2026 ರ ಭಾರತೀಯ ಕಾಲಮಾನ ಸಂಜೆ 5.00 ಗಂಟೆಯವರೆಗೆ ಮತ್ತು ಇ-ಹರಾಜು ನೇರ ಬಿಡ್ಡಿಂಗ್ ಆರಂಭಿಸುವ ದಿನಾಂಕ: 06.04.2026ರ ಭಾರತೀಯ ಕಾಲಮಾನ ಮಧ್ಯಾಹ್ನ 11.00 ಗಂಟೆಯಿಂದ ನೇರ ಬಿಡ್ಡಿಂಗ್ ಅಂತಿಮಗೊಳ್ಳುವ ದಿನಾಂಕ: 07.04.2026 ರ ಭಾರತೀಯ ಕಾಲಮಾನ ಸಂಜೆ 4.00 ಗಂಟೆಯವರೆಗೆ (ಡೆಲ್ಟಾ ಟೈಮ್ 5.00 ನಿಮಿಷ).

ಕ್ರ ಸಂ	ಬಡಾವಣೆ ಹೆಸರು	ನಿವೇಶನ ಸಂಖ್ಯೆ	ಮಧ್ಯಂತರ/ ಮೂಲೆ	ರಸ್ತೆ ಅಭಿಮುಖ ದಿಕ್ಕು ಹಾಗೂ ಅಗಲ (ಮೀ.ಗಳಲ್ಲಿ)	ಅಳತೆ ಮೀ ಗಳಲ್ಲಿ		ವಿಸ್ತೀರ್ಣ ಚ.ಮೀ ಗಳಲ್ಲಿ	ಚ.ಮೀ.ಗೆ ನಿಗಧಿ ಪಡಿಸಿರುವ ದರ	ನಿವೇಶನದ ಮೌಲ್ಯ (ರೂ.ಲಕ್ಷ ಗಳಲ್ಲಿ)
					ಉ-ದ	ಪೂ-ಪ			
	ಮೂಲೆ ಹಾಗೂ ಮಧ್ಯಂತರ ನಿವೇಶನಗಳು								
1	ನಾಚಹನಹಳ್ಳಿ-ಕುಪ್ಪಲೂರು 3ನೇ ಹಂತ 'ಡಿ' ಬ್ಲಾಕ್	99	ಮೂಲೆ	ಪಶ್ಚಿಮ 9.00	13.00	18.00	234.00	79256.00	185.46
2	ಜೆ.ಪಿ.ನಗರ 1ನೇ ಹಂತ 'ಎಫ್' ಬ್ಲಾಕ್	72	ಮೂಲೆ	ಪೂ-ಉ 9.00	24.00	(18.00+19.00)/2	444.00	79256.00	351.90
3	ದಟ್ಟಗಳ್ಳಿ 3ನೇ ಹಂತ	754	ಮೂಲೆ	12-9 ಪೂ-ಉ	11.20	18.00	201.06	64986.00	131.02
4	ದಟ್ಟಗಳ್ಳಿ 3ನೇ ಹಂತ	1025/ಬಿ	ಮಧ್ಯಂತರ	ಪೂರ್ವ 9.00	6.00	9.00	54.00	58003.00	31.32
5	ದಟ್ಟಗಳ್ಳಿ 3ನೇ ಹಂತ	1050/ಬಿ	ಮಧ್ಯಂತರ	ಪಶ್ಚಿಮ 9.00	6.00	9.00	54.00	58003.00	31.32
6	ದಟ್ಟಗಳ್ಳಿ 3ನೇ ಹಂತ	1229	ಮಧ್ಯಂತರ	ದಕ್ಷಿಣ 9.00	12.00	9.00	108.00	58003.00	62.64
7	ದಟ್ಟಗಳ್ಳಿ 3ನೇ ಹಂತ	1615	ಮೂಲೆ	18-9 ಉ-ಪೂ	12.00	9.00	108.00	64986.00	70.18
8	ದಟ್ಟಗಳ್ಳಿ 3ನೇ ಹಂತ	1616	ಮೂಲೆ	9.00 ಪೂ-ದ	12.00	9.00	108.00	64986.00	70.18
9	ದಟ್ಟಗಳ್ಳಿ 3ನೇ ಹಂತ	1631	ಮೂಲೆ	12-9 ಪೂ-ಉ	12.00	8.50	102.00	64986.00	66.29
10	ದಟ್ಟಗಳ್ಳಿ 3ನೇ ಹಂತ	1631/ಎಫ್	ಮೂಲೆ	9.00 ಉ-ಪ	12.00	(13.00+14.60)/2	165.60	64986.00	107.62
11	ದಟ್ಟಗಳ್ಳಿ 3ನೇ ಹಂತ	1632	ಮೂಲೆ	12-9 ಪೂ-ದ	12.00	8.50	102.00	64986.00	66.29
12	ದಟ್ಟಗಳ್ಳಿ 3ನೇ ಹಂತ	1632/ಎ	ಮಧ್ಯಂತರ	ದಕ್ಷಿಣ 9.00	12.00	9.00	108.00	58003.00	62.64
13	ದಟ್ಟಗಳ್ಳಿ 3ನೇ ಹಂತ	1632/ಎಫ್	ಮೂಲೆ	9.00 ಪ-ದ	12.00	(11.00+13.00)/2	144.00	64986.00	93.58
14	ದಟ್ಟಗಳ್ಳಿ 3ನೇ ಹಂತ	1638/ಎ	ಮಧ್ಯಂತರ	ಉತ್ತರ 9.00	9.00	6.00	54.00	58003.00	31.32
15	ದಟ್ಟಗಳ್ಳಿ 3ನೇ ಹಂತ	1638/ಸಿ	ಮೂಲೆ	9.00 ಉ-ಪ	9.00	(9.50+7.80)/2	77.85	64986.00	50.59
16	ದಟ್ಟಗಳ್ಳಿ 3ನೇ ಹಂತ	1644	ಮೂಲೆ	12-9 ಪೂ-ಉ	9.00	(5.40+6.00)/2	51.30	64986.00	33.34
17	ದಟ್ಟಗಳ್ಳಿ 3ನೇ ಹಂತ	1645	ಮೂಲೆ	12-9 ಪೂ-ದ	9.00	5.40	48.60	64986.00	31.58
18	ದಟ್ಟಗಳ್ಳಿ 3ನೇ ಹಂತ	1651/ಡಿ	ಮೂಲೆ	9.00 ಪ-ದ	9.00	(7.80+6.00)/2	62.10	64986.00	40.36
19	ದಟ್ಟಗಳ್ಳಿ 3ನೇ ಹಂತ	1660	ಮೂಲೆ	9.00 ಪ-ದ	(8.50+8.20)/2	12.00	100.20	64986.00	65.12
20	ದಟ್ಟಗಳ್ಳಿ 3ನೇ ಹಂತ	1660/ಎ	ಮಧ್ಯಂತರ	ಪಶ್ಚಿಮ 9.00	9.00	12.00	108.00	58003.00	62.64
21	ದಟ್ಟಗಳ್ಳಿ 3ನೇ ಹಂತ	1670	ಮೂಲೆ	18-12 ಉ-ಪ	9.00	12.00	108.00	64986.00	70.18
22	ದಟ್ಟಗಳ್ಳಿ 3ನೇ ಹಂತ	1671	ಮೂಲೆ	18-12 ಉ-ಪೂ	9.00	12.00	108.00	64986.00	70.18
23	ದಟ್ಟಗಳ್ಳಿ 3ನೇ ಹಂತ	2929	ಮೂಲೆ	9-12ಉ-ಪ	9.00	5.90	53.10	64986.00	34.51
24	ದಟ್ಟಗಳ್ಳಿ 3ನೇ ಹಂತ	ಇ-141/ಎ	ಮಧ್ಯಾಂತರ	ಉ-9.00	(0+8.98)/2	37.00	166.13	58003.00	96.36
25	ದಟ್ಟಗಳ್ಳಿ 3ನೇ ಹಂತ	2930	ಮೂಲೆ	12.00ದ-ಪ	9.00	5.90	53.10	64986.00	34.51
26	ದಟ್ಟಗಳ್ಳಿ 3ನೇ ಹಂತ	2956	ಮೂಲೆ	12.00ದ-ಪೂ	(5.00+6.20)/2	9.00	50.40	64986.00	32.75
27	ದಟ್ಟಗಳ್ಳಿ 3ನೇ ಹಂತ	2957	ಮೂಲೆ	12-9ದ-ಪ	(7.00+6.20)/2	9.00	59.40	64986.00	38.60
28	ದಟ್ಟಗಳ್ಳಿ 3ನೇ ಹಂತ	2963	ಮಧ್ಯಂತರ	ಪಶ್ಚಿಮ 9.00	6.00	9.00	54.00	58003.00	31.32
29	ದಟ್ಟಗಳ್ಳಿ 3ನೇ ಹಂತ	2969	ಮೂಲೆ	9.00 ಉ-ಪ	6.00	9.00	54.00	64986.00	35.09
30	ದಟ್ಟಗಳ್ಳಿ 3ನೇ ಹಂತ	3098	ಮಧ್ಯಂತರ	ದಕ್ಷಿಣ12.00	18.00	12.00	216.00	58003.00	125.29
31	ದಟ್ಟಗಳ್ಳಿ 3ನೇ ಹಂತ	4499	ಮಧ್ಯಂತರ	ಉತ್ತರ 24.00	24.00	15.00	360.00	58003.00	208.81
32	ದಟ್ಟಗಳ್ಳಿ 3ನೇ ಹಂತ	4501	ಮೂಲೆ	24-12 ಉ-ಪೂ	24.00	(15.50+17.50)/2	396.00	64986.00	257.34
33	ದಟ್ಟಗಳ್ಳಿ 3ನೇ ಹಂತ	4553	ಮೂಲೆ	12-12 ದ-ಪೂ	12.00	11.80	141.60	64986.00	92.02
34	ದಟ್ಟಗಳ್ಳಿ 3ನೇ ಹಂತ	4516	ಮೂಲೆ	12-12ದ-ಪೂ	18.00	(16.00+17.00)/2	297.00	64986.00	193.01
35	ದಟ್ಟಗಳ್ಳಿ 3ನೇ ಹಂತ	2944	ಮೂಲೆ	12-9ಉ-ಪೂ	6.80	9.00	61.20	64986.00	39.77
36	ವಿಜಯನಗರ 4ನೇ ಹಂತ 2ನೇ ಘಟ್ಟ	1756	ಮೂಲೆ	ಉ-ಪೂ9.00	24.00	16.15	387.60	86009.00	333.37
37	ವಿಜಯನಗರ 4ನೇ ಹಂತ 2ನೇ ಘಟ್ಟ	1766	ಮೂಲೆ	ಉ-ಪೂ12.00	24.00	(16.50+16.00)/2	390.00	86009.00	335.44
38	ವಿಜಯನಗರ 4ನೇ ಹಂತ 2ನೇ ಘಟ್ಟ	2847	ಮೂಲೆ	ಪೂ-ದ9.00	12.00	10.40	124.80	86009.00	107.34
39	ವಿಜಯನಗರ 4ನೇ ಹಂತ 2ನೇ ಘಟ್ಟ	4776	ಮೂಲೆ	9-12 ಉ-ಪ	9.00	(3.90+3.96)/2	35.37	86009.00	30.42
40	ವಿಜಯನಗರ 4ನೇ ಹಂತ 2ನೇ ಘಟ್ಟ	6128	ಮೂಲೆ	ಉ-ಪೂ 9.00	24.00	12.20	292.80	86009.00	251.83
41	ವಿಜಯನಗರ 4ನೇ ಹಂತ 2ನೇ ಘಟ್ಟ	7030	ಮೂಲೆ	ಉ-ಪೂ 9.00	4.60	18.00	82.80	86009.00	71.22
42	ವಿಜಯನಗರ 4ನೇ ಹಂತ 2ನೇ ಘಟ್ಟ	7281	ಮೂಲೆ	ದ-ಪೂ9.00	8.40	12.00	100.80	86009.00	86.70
43	ವಿಜಯನಗರ 4ನೇ ಹಂತ 2ನೇ ಘಟ್ಟ	7326	ಮೂಲೆ	ದ-ಪ 9.00	8.80	12.00	105.60	86009.00	90.83
44	ವಿಜಯನಗರ 4ನೇ ಹಂತ 2ನೇ ಘಟ್ಟ	9004	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
45	ವಿಜಯನಗರ 4ನೇ ಹಂತ 2ನೇ ಘಟ್ಟ	9005	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
46	ವಿಜಯನಗರ 4ನೇ ಹಂತ 2ನೇ ಘಟ್ಟ	9006	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
47	ವಿಜಯನಗರ 4ನೇ ಹಂತ 2ನೇ ಘಟ್ಟ	9007	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
48	ವಿಜಯನಗರ 4ನೇ ಹಂತ 2ನೇ ಘಟ್ಟ	9008	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
49	ವಿಜಯನಗರ 4ನೇ ಹಂತ 2ನೇ ಘಟ್ಟ	9009	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
50	ವಿಜಯನಗರ 4ನೇ ಹಂತ 2ನೇ ಘಟ್ಟ	9010	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
51	ವಿಜಯನಗರ 4ನೇ ಹಂತ 2ನೇ ಘಟ್ಟ	9011	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
52	ವಿಜಯನಗರ 4ನೇ ಹಂತ 2ನೇ ಘಟ್ಟ	9013	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
53	ವಿಜಯನಗರ 4ನೇ ಹಂತ 2ನೇ ಘಟ್ಟ	9016	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
54	ವಿಜಯನಗರ 4ನೇ ಹಂತ 2ನೇ ಘಟ್ಟ	9028	ಮಧ್ಯಂತರ	ದಕ್ಷಿಣ9.00	12.00	9.00	108.00	59275.00	64.02
55	ವಿಜಯನಗರ 4ನೇ ಹಂತ 2ನೇ ಘಟ್ಟ	9029	ಮಧ್ಯಂತರ	ದಕ್ಷಿಣ9.00	12.00	9.00	108.00	59275.00	64.02
56	ವಿಜಯನಗರ 4ನೇ ಹಂತ 2ನೇ ಘಟ್ಟ	9030	ಮಧ್ಯಂತರ	ದಕ್ಷಿಣ9.00	12.00	9.00	108.00	59275.00	64.02
57	ವಿಜಯನಗರ 4ನೇ ಹಂತ 2ನೇ ಘಟ್ಟ	9031	ಮಧ್ಯಂತರ	ದಕ್ಷಿಣ9.00	12.00	9.00	108.00	59275.00	64.02
58	ವಿಜಯನಗರ 4ನೇ ಹಂತ 2ನೇ ಘಟ್ಟ	9032	ಮಧ್ಯಂತರ	ದಕ್ಷಿಣ9.00	12.00	9.00	108.00	59275.00	64.02
59	ವಿಜಯನಗರ 4ನೇ ಹಂತ 2ನೇ ಘಟ್ಟ	9033	ಮಧ್ಯಂತರ	ದಕ್ಷಿಣ9.00	12.00	9.00	108.00	59275.00	64.02
60	ವಿಜಯನಗರ 4ನೇ ಹಂತ 2ನೇ ಘಟ್ಟ	9034	ಮಧ್ಯಂತರ	ದಕ್ಷಿಣ9.00	12.00	9.00	108.00	59275.00	64.02
61	ವಿಜಯನಗರ 4ನೇ ಹಂತ 2ನೇ ಘಟ್ಟ	9035	ಮಧ್ಯಂತರ	ದಕ್ಷಿಣ9.00	12.00	9.00	108.00	59275.00	64.02
62	ವಿಜಯನಗರ 4ನೇ ಹಂತ 2ನೇ ಘಟ್ಟ	9036	ಮಧ್ಯಂತರ	ದಕ್ಷಿಣ9.00	12.00	9.00	108.00	59275.00	64.02
63	ವಿಜಯನಗರ 4ನೇ ಹಂತ 2ನೇ ಘಟ್ಟ	9037	ಮಧ್ಯಂತರ	ದಕ್ಷಿಣ9.00	12.00	9.00	108.00	59275.00	64.02
64	ವಿಜಯನಗರ 4ನೇ ಹಂತ 2ನೇ ಘಟ್ಟ	9038	ಮಧ್ಯಂತರ	ದಕ್ಷಿಣ9.00	12.00	9.00	108.00	59275.00	64.02
65	ವಿಜಯನಗರ 4ನೇ ಹಂತ 2ನೇ ಘಟ್ಟ	9063	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
66	ವಿಜಯನಗರ 4ನೇ ಹಂತ 2ನೇ ಘಟ್ಟ	9064	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
67	ವಿಜಯನಗರ 4ನೇ ಹಂತ 2ನೇ ಘಟ್ಟ	9065	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
68	ವಿಜಯನಗರ 4ನೇ ಹಂತ 2ನೇ ಘಟ್ಟ	9067	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
69	ವಿಜಯನಗರ 4ನೇ ಹಂತ 2ನೇ ಘಟ್ಟ	9068	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
70	ವಿಜಯನಗರ 4ನೇ ಹಂತ 2ನೇ ಘಟ್ಟ	9069	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
71	ವಿಜಯನಗರ 4ನೇ ಹಂತ 2ನೇ ಘಟ್ಟ	9070	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
72	ವಿಜಯನಗರ 4ನೇ ಹಂತ 2ನೇ ಘಟ್ಟ	9071	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
73	ವಿಜಯನಗರ 4ನೇ ಹಂತ 2ನೇ ಘಟ್ಟ	9072	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
74	ವಿಜಯನಗರ 4ನೇ ಹಂತ 2ನೇ ಘಟ್ಟ	9073	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
75	ವಿಜಯನಗರ 4ನೇ ಹಂತ 2ನೇ ಘಟ್ಟ	9074	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
76	ವಿಜಯನಗರ 4ನೇ ಹಂತ 2ನೇ ಘಟ್ಟ	9075	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
77	ವಿಜಯನಗರ 4ನೇ ಹಂತ 2ನೇ ಘಟ್ಟ	9076	ಮಧ್ಯಂತರ	ಉತ್ತರ 9.00	12.00	9.00	108.00	59275.00	64.02
78	ವಿಜಯನಗರ 4ನೇ ಹಂತ 2ನೇ ಘಟ್ಟ	9089	ಮಧ್ಯಂತರ	ದಕ್ಷಿಣ9.00	18.00	12.00	216.00	59275.00	128.03
79	ವಿಜಯನಗರ 4ನೇ ಹಂತ 2ನೇ ಘಟ್ಟ	9090	ಮಧ್ಯಂತರ	ದಕ್ಷಿಣ9.00	18.00	12.00	216.00	59275.00	128.03
80	ವಿಜಯನಗರ 4ನೇ ಹಂತ 2ನೇ ಘಟ್ಟ	9091	ಮಧ್ಯಂತರ	ದಕ್ಷಿಣ9.00	18.00	12.00	216.00	59275.00	128.03
81	ವಿಜಯನಗರ 4ನೇ ಹಂತ 2ನೇ ಘಟ್ಟ	9092	ಮಧ್ಯಂತರ	ದಕ್ಷಿಣ9.00	18.00	12.00	216.00	59275.00	128.03
82	ವಿಜಯನಗರ 4ನೇ ಹಂತ 2ನೇ ಘಟ್ಟ	9093	ಮಧ್ಯಂತರ	ದಕ್ಷಿಣ9.00	18.00	12.00	216.00	59275.00	128.03
83	ವಿಜಯನಗರ 4ನೇ ಹಂತ 2ನೇ ಘಟ್ಟ	11160	ಮಧ್ಯಂತರ	ಪಶ್ಚಿಮ9.00	12.00	18.00	216.00	59275.00	128.03
84	ವಿಜಯನಗರ 4ನೇ ಹಂತ 2ನೇ ಘಟ್ಟ	11161	ಮಧ್ಯಂತರ	ಪಶ್ಚಿಮ9.00	12.00	18.00	216.00	59275.00	128.03
85	ವಿಜಯನಗರ 4ನೇ ಹಂತ 2ನೇ ಘಟ್ಟ	11162	ಮಧ್ಯಂತರ	ಪಶ್ಚಿಮ9.00	12.00	18.00	216.00	59275.00	128.03
86	ವಿಜಯನಗರ 4ನೇ ಹಂತ 2ನೇ ಘಟ್ಟ	11162/ಬಿ	ಮಧ್ಯಂತರ	ಪಶ್ಚಿಮ9.00	12.00	18.00	216.00	59275.00	128.03
87	ವಿಜಯನಗರ 4ನೇ ಹಂತ 2ನೇ ಘಟ್ಟ	11162/ಎ	ಮಧ್ಯಂತರ	ಪಶ್ಚಿಮ9.00	12.00	18.00	216.00	59275.00	128.03
88	ವಿಜಯನಗರ 4ನೇ ಹಂತ 2ನೇ ಘಟ್ಟ	11165	ಮಧ್ಯಂತರ	ಪಶ್ಚಿಮ9.00	12.00	18.00	216.00	59275.00	128.03
89	ವಿಜಯನಗರ 4ನೇ ಹಂತ 2ನೇ ಘಟ್ಟ	11166	ಮಧ್ಯಂತರ	ಪಶ್ಚಿಮ9.00	12.00	18.00	216.00	59275.00	128.03
90	ವಿಜಯನಗರ 4ನೇ ಹಂತ 2ನೇ ಘಟ್ಟ	11167	ಮಧ್ಯಂತರ	ಪಶ್ಚಿಮ9.00	12.00	18.00	216.00	59275.00	128.03
91	ವಿಜಯನಗರ 4ನೇ ಹಂತ 2ನೇ ಘಟ್ಟ	11168	ಮಧ್ಯಂತರ	ಪಶ್ಚಿಮ9.00	12.00	18.00	216.00	59275.00	128.03
92	ವಿಜಯನಗರ 4ನೇ ಹಂತ 2ನೇ ಘಟ್ಟ	11169	ಮಧ್ಯಂತರ	ಪಶ್ಚಿಮ9.00	12.00	18.00	216.00	59275.00	128.03
93	ವಿಜಯನಗರ 4ನೇ ಹಂತ 2ನೇ ಘಟ್ಟ	11170	ಮಧ್ಯಂತರ	ಪಶ್ಚಿಮ9.00	12.00	18.00	216.00	59275.00	128.03
94	ವಿಜಯನಗರ 4ನೇ ಹಂತ 2ನೇ ಘಟ್ಟ	11171	ಮಧ್ಯಂತರ	ಪಶ್ಚಿಮ9.00	12.00	18.00	216.00	59275.00	128.03
95	ವಿಜಯನಗರ 4ನೇ ಹಂತ 2ನೇ ಘಟ್ಟ	11172	ಮಧ್ಯಂತರ	ಪಶ್ಚಿಮ9.00	12.00	18.00	216.00	59275.00	128.03
96	ವಿಜಯನಗರ 4ನೇ ಹಂತ 2ನೇ ಘಟ್ಟ	11173	ಮಧ್ಯಂತರ	ಪಶ್ಚಿಮ9.00	12.00	18.00	216.00	59275.00	128.03
97	ವಿಜಯನಗರ 4ನೇ ಹಂತ 2ನೇ ಘಟ್ಟ	11174	ಮಧ್ಯಂತರ	ಪಶ್ಚಿಮ9.00	12.00	18.00	216.00	59275.00	128.03
98	ವಿಜಯನಗರ 4ನೇ ಹಂತ 2ನೇ ಘಟ್ಟ	11232	ಮಧ್ಯಂತರ	ಪೂರ್ವ9.00	12.00	18.00	216.00	59275.00	128.03
99	ಹೆಬ್ಬಾಳು 2ನೇ ಹಂತ	60/ಎ	ಮಧ್ಯಂತರ	ದಕ್ಷಿಣ 8.0 ಮೀ	10.00	5.50	55.00	64472.00	35.46
100	ಹೆಬ್ಬಾಳು 2ನೇ ಹಂತ	60/ಬಿ	ಮಧ್ಯಂತರ	ದಕ್ಷಿಣ 8.0 ಮೀ	10.00	5.50	55.00	64472.00	35.46
101	ಹೆಬ್ಬಾಳು 2ನೇ ಹಂತ	658	ಮಧ್ಯಂತರ	ಪೂರ್ವ 9.0 ಮೀ	6.00	9.00	54.00	64472.00	34.81
102	ಹೆಬ್ಬಾಳು 2ನೇ ಹಂತ	1017/ಎ	ಮಧ್ಯಂತರ	ಪಶ್ಚಿಮ 7.0 ಮೀ	6.00	9.00	54.00	64472.00	34.81
103	ಹೆಬ್ಬಾಳು 2ನೇ ಹಂತ	2598	ಮೂಲೆ	ಪಶ್ಚಿಮ 9.00	6.00	9.00	54.00	64489.00	34.82
104	ಹೆಬ್ಬಾಳು 1ನೇ ಹಂತ	1190/ಐ	ಮಧ್ಯಂತರ	ದಕ್ಷಿಣ 9.00	18.00	12.00	216.00	73539.00	158.84
105	ಹೆಬ್ಬಾಳು 1ನೇ ಹಂತ	1190/ಹೆಚ್	ಮಧ್ಯಂತರ	ದಕ್ಷಿಣ 9.00	18.00	12.00	216.00	73539.00	158.84
106	ವಿಜಯನಗರ 2ನೇ ಹಂತ	2784	ಮೂಲೆ	ಉ-ಪ 9.00	(0.5+11.00)/2	18.00	103.50	99318.00	102.79
107	ವಿಜಯನಗರ 2ನೇ ಹಂತ	2993	ಮೂಲೆ	ದಕ್ಷಿಣ & ಪೂರ್ವ 9.00	14.00	(9+12)/2	147.00	99318.00	146.00
108	ವಿಜಯನಗರ 2ನೇ ಹಂತ	4039	ಮೂಲೆ	ಪಶ್ಚಿಮ & ದಕ್ಷಿಣ 9.0 & 6.0	(8+5.50)/2	12.00	81.00	99318.00	80.45
109	ವಿಜಯನಗರ 2ನೇ ಹಂತ	4245	ಮೂಲೆ	ಉತ್ತರ & ಪೂರ್ವ 9.0 & 6.0	9.00	5.00	45.00	99318.00	44.69
110	ವಿಜಯನಗರ 2ನೇ ಹಂತ	4280	ಮೂಲೆ	ದಕ್ಷಿಣ & ಪೂರ್ವ 9.0 & 6.0	9.00	(4.5+5.0)/2	42.75	99318.00	42.46
111	ವಿಜಯನಗರ 2ನೇ ಹಂತ	4321	ಮೂಲೆ	ಉತ್ತರ & ಪೂರ್ವ 9.0 & 6.0	9.00	6.00	54.00	99318.00	53.63
112	ವಿಜಯನಗರ 2ನೇ ಹಂತ	4360	ಮೂಲೆ	ದಕ್ಷಿಣ & ಪೂರ್ವ 9.0 & 6.0	9.00	7.20	64.80	99318.00	64.36
113	ವಿಜಯನಗರ 2ನೇ ಹಂತ	4624	ಮೂಲೆ	ಉತ್ತರ & ಪಶ್ಚಿಮ 18.0 & 6.0	13.00	(18+16.5)/2	224.25	99318.00	222.72
114	ವಿಜಯನಗರ 2ನೇ ಹಂತ	4739	ಮೂಲೆ	ದಕ್ಷಿಣ & ಪೂರ್ವ 9.0 & 9.0	8.50	9.00	76.50	99318.00	75.98
115	ವಿಜಯನಗರ 2ನೇ ಹಂತ	4774	ಮೂಲೆ	ದಕ್ಷಿಣ & ಪಶ್ಚಿಮ 9.0 & 18.0	(15+12)/2	18.00	243.00	99318.00	241.34
116	ವಿಜಯನಗರ 2ನೇ ಹಂತ	5100	ಮೂಲೆ	ದಕ್ಷಿಣ & ಪಶ್ಚಿಮ 9.0 & 6.0	9.00	(4.50+4.0)/2	38.25	99318.00	37.99
117	ವಿಜಯನಗರ 2ನೇ ಹಂತ	5715	ಮೂಲೆ	ಪಶ್ಚಿಮ & ದಕ್ಷಿಣ 9.0 & 9.0	(8.50+2.00)/2	18.40	96.60	99318.00	95.94
118	ವಿಜಯನಗರ 2ನೇ ಹಂತ	4795	ಮೂಲೆ	ದಕ್ಷಿಣ & ಪಶ್ಚಿಮ 9.0 & 9.0	(9.5+8.5)/2	12.00	108.00	99318.00	107.26
119	ದೇವನೂರು 2ನೇ ಹಂತ 2ನೇ ಘಟ್ಟ	2014	ಮಧ್ಯಂತರ	ಉತ್ತರ9.00	12.00	18.00	216.00	45420.00	98.11
120	ದೇವನೂರು 2ನೇ ಹಂತ 2ನೇ ಘಟ್ಟ	2167	ಮಧ್ಯಂತರ	ಉತ್ತರ9.00	12.00	18.00	216.00	45420.00	98.11
121	ದೇವನೂರು 2ನೇ ಹಂತ 2ನೇ ಘಟ್ಟ	2168	ಮಧ್ಯಂತರ	ಉತ್ತರ9.00	12.00	18.00	216.00	45420.00	98.11
122	ದೇವನೂರು 2ನೇ ಹಂತ 2ನೇ ಘಟ್ಟ	2280/ಡಿ	ಮಧ್ಯಂತರ	ದಕ್ಷಿಣ9.00	12.00	18.00	216.00	45420.00	98.11
123	ದೇವನೂರು 2ನೇ ಹಂತ 2ನೇ ಘಟ್ಟ	2280/ಇ	ಮಧ್ಯಂತರ	ದಕ್ಷಿಣ9.00	12.00	18.00	216.00	45420.00	98.11
124	ದೇವನೂರು 2ನೇ ಹಂತ 2ನೇ ಘಟ್ಟ	2280/ಎಫ್	ಮಧ್ಯಂತರ	ದಕ್ಷಿಣ9.00	12.00	18.00	216.00	45420.00	98.11
125	ದೇವನೂರು 2ನೇ ಹಂತ 2ನೇ ಘಟ್ಟ	2280/ಜಿ	ಮಧ್ಯಂತರ	ದಕ್ಷಿಣ9.00	12.00	18.00	216.00	45420.00	98.11
126	ದೇವನೂರು 2ನೇ ಹಂತ 2ನೇ ಘಟ್ಟ	2280/ಹೆಚ್	ಮಧ್ಯಂತರ	ದಕ್ಷಿಣ9.00	12.00	18.00	216.00	45420.00	98.11
127	ದೇವನೂರು 2ನೇ ಹಂತ 2ನೇ ಘಟ್ಟ	2280/ಐ	ಮಧ್ಯಂತರ	ದಕ್ಷಿಣ9.00	12.00	18.00	216.00	45420.00	98.11
128	ದೇವನೂರು 2ನೇ ಹಂತ 2ನೇ ಘಟ್ಟ	2280/ಜೆ	ಮಧ್ಯಂತರ	ದಕ್ಷಿಣ9.00	12.00	18.00	216.00	45420.00	98.11
129	ದೇವನೂರು 2ನೇ ಹಂತ 2ನೇ ಘಟ್ಟ	2280/ಕೆ	ಮಧ್ಯಂತರ	ದಕ್ಷಿಣ9.00	12.00	18.00	216.00	45420.00	98.11
130	ದೇವನೂರು 2ನೇ ಹಂತ 2ನೇ ಘಟ್ಟ	2233	ಮಧ್ಯಂತರ	ಪಶ್ಚಿಮ9.00	12.00	18.00	216.00	45420.00	98.11
131	ದೇವನೂರು 2ನೇ ಹಂತ 2ನೇ ಘಟ್ಟ	2230	ಮಧ್ಯಂತರ	ಪಶ್ಚಿಮ9.00	12.00	18.00	216.00	45420.00	98.11
132	ದೇವನೂರು 2ನೇ ಹಂತ 2ನೇ ಘಟ್ಟ	2231	ಮಧ್ಯಂತರ	ಪಶ್ಚಿಮ9.00	12.00	18.00	216.00	45420.00	98.11
133	ಶಾಂತವೇರಿ ಗೋಪಾಲಗೌಡ	01	ಮೂಲೆ	ಉ:9.00ಪೂ:9.00	9.00	11.70	105.30	59180.00	62.32
134	ಶಾಂತವೇರಿ ಗೋಪಾಲಗೌಡ	12	ಮೂಲೆ	ದ:12.00ಪೂ:9.00	6.60	11.50	75.90	59180.00	44.92
135	ಶಾಂತವೇರಿ ಗೋಪಾಲಗೌಡ	24	ಮೂಲೆ	ಉ:9.00ಪ:9.00	9.50	11.70	111.15	59180.00	65.78
136	ಶಾಂತವೇರಿ ಗೋಪಾಲಗೌಡ	79	ಮೂಲೆ	ದ:12.00ಪ:9.00	9.00	12.00	108.00	59180.00	63.91
137	ಶಾಂತವೇರಿ ಗೋಪಾಲಗೌಡ	90	ಮೂಲೆ	ಉ:9.00ಪ:9.00	10.00	11.00	110.00	59180.00	65.10
138	ಶಾಂತವೇರಿ ಗೋಪಾಲಗೌಡ	100	ಮೂಲೆ	ದ:12.00ಪ:12.00	12.20	18.00	219.60	59180.00	129.96
139	ಶಾಂತವೇರಿ ಗೋಪಾಲಗೌಡ	133	ಮೂಲೆ	ಉ:12.00ಪೂ:9.00	12.00	18.00	216.00	59180.00	127.83
140	ಶಾಂತವೇರಿ ಗೋಪಾಲಗೌಡ	144	ಮೂಲೆ	ದ:12.00ಪೂ:9.00	12.00	18.00	216.00	59180.00	127.83
141	ಶಾಂತವೇರಿ ಗೋಪಾಲಗೌಡ	121	ಮೂಲೆ	ದ:12.00ಪ:9.00	12.00	18.00	216.00	59180.00	127.83

ಮುಂದುವರೆದಿದೆ...

ಕುಟುಂಬವನ್ನು ಭಾವನಾತ್ಮಕವಾಗಿ ಬೆಸೆಯುವ ಕೊಂಡಿ ತಾಯಿ

ಹಾವೇರಿ ವಿವಿ ಕುಲಪತಿ ಪ್ರೊ.ಸುರೇಶ್ ಎಚ್.ಜಂಗಮಶೆಟ್ಟಿ ಅಭಿಮತ



'ಸ್ಥಿತಿ ಸ್ಥಾಪಕ ಮತ್ತು ಪರಿವರ್ತಕ ಗೃಹ ವಿಜ್ಞಾನಕ್ಕಾಗಿ ಪರಿಸರ ವಿಧಾನಗಳು' ಕುರಿತಾದ ವಿಚಾರ ಸಂಕಿರಣ ಸಮಾರೋಪದಲ್ಲಿ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಪ್ರಮಾಣ ಪತ್ರ ವಿತರಿಸಲಾಯಿತು.

ಮೈಸೂರು,ಫೆ.27(ಎಸ್‌ಪಿಎನ್)–ಗೃಹ ವಿಜ್ಞಾನದಲ್ಲಿ ತಾಯಿಯ ಪಾತ್ರ ಪ್ರಮುಖವಾಗಿರುತ್ತದೆ. ತಾಯಿ ಕುಟುಂಬದ ಸದಸ್ಯರನ್ನು ಭಾವನಾತ್ಮಕವಾಗಿ ಬೆಸೆಯುವ ಕೊಂಡಿಯಾಗಿ ಕೆಲಸ ಮಾಡುತ್ತಾರೆ ಎಂದು ಹಾವೇರಿ ವಿವಿ ಕುಲಪತಿ ಪ್ರೊ.ಸುರೇಶ್ ಎಚ್.ಜಂಗಮಶೆಟ್ಟಿ ಅಭಿಪ್ರಾಯಪಟ್ಟರು.

ಮೈಸೂರು ವಿವಿ ಮಾನಸಗಂಗೋತ್ರಿ ಆವರಣದ ಸೆನೆಟ್ ಭವನ (ನಾಲ್ವಡಿ ಕೃಷ್ಣರಾಜ ಒಡೆಯರ್ ಸಭಾಂಗಣ)ದಲ್ಲಿ ಗುರುವಾರ ಮೈಸೂರು ವಿಶ್ವವಿದ್ಯಾಲಯ ಹಾಗೂ ಕರ್ನಾಟಕ ರಾಜ್ಯ ಮುಕ್ತ ವಿವಿಯ ಆಹಾರ ವಿಜ್ಞಾನ ಮತ್ತು ಪೌಷ್ಟಿಕಾಂಶ ವಿಭಾಗಗಳ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಎರಡು ದಿನಗಳ ಗೃಹ ವಿಜ್ಞಾನ ಸಮ್ಮೇಳನ–2026ದ 'ಸ್ಥಿತಿ ಸ್ಥಾಪಕ ಮತ್ತು ಪರಿವರ್ತಕ ಗೃಹ ವಿಜ್ಞಾನಕ್ಕಾಗಿ ಪರಿಸರ ವಿಧಾನಗಳು' ಕುರಿತಾದ ವಿಚಾರ ಸಂಕಿರಣ ಸಮಾರೋಪದಲ್ಲಿ ಪಾಲ್ಗೊಂಡು ಮಾತನಾಡಿರು.

ಗೃಹ ವಿಜ್ಞಾನವು ಕುಟುಂಬ ಸಂಬಂಧದ ಜೊತೆಗೆ ಪ್ರಕೃತಿಯೊಂದಿಗೆ ಸಂಬಂಧ ಹೊಸೆದುಕೊಂಡಿದೆ. ಈ ಮುಖ್ಯ ಭೂಮಿಕೆಯಲ್ಲಿ ತಾಯಿಯ ಪಾತ್ರ ಪ್ರಮುಖವಾಗಿರುತ್ತದೆ. ಕುಟುಂಬದಲ್ಲಿ ಎಲ್ಲರೊಂದಿಗೆ ಸಮನ್ವಯ ಸಾಧಿಸುವ ಕ್ರಿಯೆಯಲ್ಲಿ ತಾಯಿಯ ಪಾತ್ರ ಪ್ರಮುಖವಾಗಿರುತ್ತದೆ. ಹಿರಿಯರಿಂದ ಕಿರಿಯರವರೆಗೂ ಆಹಾರದ ವಿಷಯದಲ್ಲಿ ಸಮನ್ವಯ ಸಾಧಿಸಿ, ಎಲ್ಲರನ್ನು ಭಾವನಾತ್ಮಕವಾಗಿ ಜೋಡಿಸುವ ಕೆಲಸದಲ್ಲಿ ತಾಯಿ ಮಾಧ್ಯಮವಾಗಿ ಕೆಲಸ ಮಾಡುತ್ತಾಳೆ ಎಂದರು.

ಇದರಿಂದ ಕುಟುಂಬದಲ್ಲಿ ಶಿಸ್ತು, ಸಾಂಸ್ಕೃತಿಕ ಆಚರಣೆ ಹಾಗೂ ಆಹಾರ ಪದ್ಧತಿ ಹಾಗೂ ಇತರೆ ಸದಸ್ಯರೊಂದಿಗೆ ವ್ಯವಹಾರಿಕ ಭಾಷಾ ಜ್ಞಾನ ಸೇರಿದಂತೆ ಎಲ್ಲಾ ಕ್ಷೇತ್ರವನ್ನು ಪರಿಚಯಿಸುವಲ್ಲಿ ತಾಯಿ ಪಾತ್ರ ಪ್ರಮುಖವಾಗಿರುತ್ತದೆ. ಅಂತೆಯೇ ಸಮಾಜದಲ್ಲಿ ಕುಟುಂಬದ ರಚನೆ, ಅದರೊಳಗಿನ ಶಿಸ್ತು ಹೇಗಿರಬೇಕೆಂಬುದರಲ್ಲಿ ಯಾವುದೇ ದಾಖಲೆ ಇಲ್ಲವೇ ನೀತಿಗಳಿಲ್ಲ. ಆದರೆ, ತಾಯಿ ಈ ರಚನೆಯಲ್ಲಿ ಪ್ರಮುಖ ಪಾತ್ರವಹಿಸಿ, ಕುಟುಂಬ ರಕ್ಷಣೆ ಮಾಡುತ್ತಾಳೆ. ಇದು ಗೃಹವಿಜ್ಞಾನದ ಮಹತ್ವದ ಕಾರ್ಯ ಎಂದರು.

ಜಗತ್ತಿನಲ್ಲಿ ಎಐ ತಂತ್ರಜ್ಞಾನ ಆವಿಷ್ಕಾರಗೊಂಡರೂ ಕೌಟುಂಬಿಕ ವ್ಯವಸ್ಥೆಯಲ್ಲಿ ದೊಡ್ಡ ಬದಲಾವಣೆಗೆ ಅವಕಾಶವಿಲ್ಲ. ಇದು ಹಿರಿಯರ ಸುಸ್ಥಿರ ನಿರ್ವಹಣೆ ಕಾರಣದಿಂದ ಇಂದಿಗೂ ಭಾರತೀಯ ಕೌಟುಂಬಿಕ ಪದ್ಧತಿ ಸ್ಥಿರವಾಗಿದೆ. ಈ ನಿಟ್ಟಿನಲ್ಲಿ ಗೃಹವಿಜ್ಞಾನ ಶಿಕ್ಷಣದಲ್ಲಿ ಅರಿವು ಮೂಡಿಸಬೇಕಿದೆ ಎಂದು ಕಿವಿಮಾತು ಹೇಳಿದರು.

ಪ್ರಸ್ತುತ ಯುವಜನತೆ ಕುಟುಂಬದ ಆರ್ಥಿಕ ಸ್ಥಿರತೆ ಕಾಪಾಡಲು ದಿನಪೂರ್ತಿ ದುಡಿಯುವ ಪರಿಸ್ಥಿತಿ ನಿರ್ಮಾಣವಾಗಿದೆ. ಇದರಿಂದ ಕುಟುಂಬದ ಸದಸ್ಯರಿಗೆ ಸಮಯ ನೀಡದೇ, ಕುಟುಂಬದಲ್ಲಿ ಸಂಬಂಧಗಳ ನಡುವೆ ಬಿರುಕು ಮೂಡಲು ಕಾರಣವಾಗುತ್ತಿದೆ. ಹಿರಿಯರು ಹಾಗೂ ಕಿರಿಯರ ನಡುವಿನ ಸಂಪರ್ಕದ ಕೊರತೆಯಿಂದ ಅನೇಕ ಖಾದ್ಯಗಳು ಕಣ್ಮರೆಯಾಗುತ್ತಿವೆ ಎಂದು ಬೇಸರ ವ್ಯಕ್ತಪಡಿಸಿದರು.

ಈ ವೇಳೆ ಮೈಸೂರು ವಿಶ್ವವಿದ್ಯಾಲಯದ ಕುಲಸಚಿವೆ ಎಂ.ಕೆ.ಸವಿತಾ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಕುಲಸಚಿವ ಪ್ರೊ.ನವೀನ್ ಕುಮಾರ್, ಆಹಾರ ವಿಜ್ಞಾನ ಮತ್ತು ಪೌಷ್ಟಿಕಾಂಶ ವಿಭಾಗದ ಮುಖ್ಯಸ್ಥೆ ಪ್ರೊ.ಎಂ. ಕಮಲಾ, ಮುಕ್ತ ವಿವಿ ಆಹಾರ ವಿಜ್ಞಾನ ಮತ್ತು ಪೌಷ್ಟಿಕಾಂಶ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಸಿ.ಅನಿತಾ ಉಪಸ್ಥಿತರಿದ್ದರು. ಈ ವೇಳೆ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಪ್ರಮಾಣ ಪತ್ರ ವಿತರಿಸಲಾಯಿತು.

ಪಾಕ್–ತಾಲಿಬಾನ್ ಯುದ್ಧ; ಭಾರತದ ವಿರುದ್ಧ ಕ್ಯಾತೆ

ಇಸ್ಲಾಮಾಬಾದ್: ಒಂದು ಕಾಲದಲ್ಲಿ ಆಪ್ತಮಿತ್ರರಂತಿದ್ದ ಪಾಕಿಸ್ತಾನ ಹಾಗೂ ತಾಲಿಬಾನ್, ಸದ್ಯ ಬದ್ಧವೈರಿಗಳಂತೆ ಯುದ್ಧಕ್ಕೆ ನಿಂತಿವೆ. ಉಭಯ ದೇಶಗಳ ನಡುವಿನ ಗಡಿ ಸಂಘರ್ಷ ಉಲ್ಬಣವಾಗಿದ್ದು, ಪಾಕಿಸ್ತಾನವು ಅಫ್ಘಾನಿಸ್ತಾನದ ಮೇಲೆ ಓಪನ್ ವಾರ್ ಘೋಷಿಸಿದೆ. ಇದರಲ್ಲೂ ಪಾಕ್ ದುಷ್ಟಬುದ್ಧಿ ತೋರಿಸಿದೆ. ಈ ಯುದ್ಧಕ್ಕೆ ಭಾರತ ಕಾರಣ, ತಾಲಿಬಾನಿಗಳು ಭಾರತದ ಪರವಾಗಿ ಪ್ರಾಕ್ಸಿ ಯುದ್ಧ ಮಾಡುತ್ತಿದ್ದಾರೆ ಎಂದು ಪಾಕ್ ರಕ್ಷಣಾ ಸಚಿವ ಖವಾಜಾ ಆಸೀಫ್ ಆರೋಪಿಸಿದ್ದಾರೆ.

ಆತ ಎಕ್ಸ್ ಖಾತೆಯಲ್ಲಿ ಮಾಡಿರುವ ಪೋಸ್ಟ್‌ನಲ್ಲಿ ಅಫ್ಘಾನಿಸ್ತಾನದಿಂದ ನ್ಯಾಟೋ ಪಡೆಗಳನ್ನು ಹಿಂತೆಗೆದುಕೊಂಡ ನಂತರ, ತಾಲಿಬಾನ್ ಶಾಂತಿ ಮತ್ತು ಸ್ಥಿರತೆಯನ್ನು ಖಚಿತಪಡಿಸುತ್ತದೆ ಎಂದು ನಿರೀಕ್ಷಿಸಲಾಗಿತ್ತು. ಆದರೆ, ತಾಲಿಬಾನ್ ಅಫ್ಘಾನಿಸ್ತಾನವನ್ನು ಭಾರತದ ವಸಾಹತುವನ್ನಾಗಿ ಪರಿವರ್ತಿಸಿದೆ ಮತ್ತು ಜಗತ್ತಿನ ಎಲ್ಲ ಉಗ್ರಗಾಮಿಗಳನ್ನು ಒಟ್ಟುಗೂಡಿಸಿ ಭಯೋತ್ಪಾದನೆಯನ್ನು ರಫ್ತು ಮಾಡಲು ಪ್ರಾರಂಭಿಸಿದೆ. ಅಲ್ಲದೆ, ತಾಲಿಬಾನಿಗಳು ತಮ್ಮದೇ ಆದ ಜನರ ಮೂಲಭೂತ ಮಾನವ ಹಕ್ಕುಗಳು ಹಾಗೂ ಇಸ್ಲಾಂ ಮಹಿಳೆಯರಿಗೆ ನೀಡುವ ಹಕ್ಕುಗಳನ್ನು ಕಸಿದುಕೊಳ್ಳುತ್ತಿದ್ದಾರೆ ಎಂದು ದೂರಿದ್ದಾರೆ.

ಈ ಹಿಂದೆಯೂ ಪಾಕಿಸ್ತಾನ ಹಾಗೂ ಅಫ್ಘಾನಿಸ್ತಾನದ ನಡುವೆ ನಡೆದ ಸಂಘರ್ಷದಲ್ಲಿ ಇದೇ ಖವಾಜಾ ಆಸೀಫ್ ಭಾರತವನ್ನೇ ದೋಷಿಯಾಗಿ ನಿಲ್ಲಿಸುವ ಪ್ರಯತ್ನ ಮಾಡಿದ್ದು, ಅಂದು ಸಹ ತಾಲಿಬಾನಿಗಳು ಭಾರತದ ಪರವಾಗಿ ಪ್ರಾಕ್ಸಿವಾರ್ ನಡೆಸುತ್ತಿದ್ದಾರೆ ಎಂದು ಆರೋಪಿಸಿದ್ದರು. ಇದಕ್ಕೆ ಭಾರತ ಹೇಗೆ ಪ್ರತಿಕ್ರಿಯೆ ನೀಡಲಿದೆ ಎಂದು ಕಾದು ನೋಡಬೇಕಿದೆ.

ಎಐ ಶೃಂಗ ಸಭೆಯಲ್ಲಿ ಅರೆಬೆತ್ತಲೆ ಪ್ರತಿಭಟನೆ ಪ್ರಕರಣ

ಬಂಧಿತ ಯುವ ಕಾಂಗ್ರೆಸ್ ನಾಯಕನ ಬಿಡುಗಡೆಗೆ ಆಗ್ರಹಿಸಿ ಮೈಸೂರಲ್ಲಿ ಪ್ರತಿಭಟನೆ



ರಾಷ್ಟ್ರೀಯ ಯುವ ಕಾಂಗ್ರೆಸ್ ಘಟಕದ ಅಧ್ಯಕ್ಷ ಉದಯ್ ಭಾನು ಚಿಬ್ ಬಿಡುಗಡೆಗೆ ಆಗ್ರಹಿಸಿ ಕೆ.ಆರ್.ಕ್ಷೇತ್ರದ ಯುವ ಕಾಂಗ್ರೆಸ್ ವತಿಯಿಂದ ಶುಕ್ರವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಫೆ.27(ಎಂಕೆ)– ದೆಹಲಿಯ ಭಾರತ್ ಮಂಟಪದಲ್ಲಿ ನಡೆದ ಕೃತಕ ಬುದ್ಧಿಮತ್ತೆ (ಎಐ) ಶೃಂಗಸಭೆಯಲ್ಲಿ ಪ್ರತಿಭಟನೆ ನಡೆಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ಯುವ ಕಾಂಗ್ರೆಸ್ ಘಟಕದ ಅಧ್ಯಕ್ಷ ಉದಯ್ ಭಾನು ಚಿಬ್ ಸೇರಿದಂತೆ ಯುವ ಕಾಂಗ್ರೆಸ್ ಪದಾಧಿಕಾರಿಗಳನ್ನು ದೆಹಲಿ ಪೊಲೀಸರು ಬಂಧಿಸಿರುವುದನ್ನು ಖಂಡಿಸಿ ಕೆ.ಆರ್.ಕ್ಷೇತ್ರದ ಯುವ ಕಾಂಗ್ರೆಸ್ ವತಿಯಿಂದ ಶುಕ್ರವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ರಾಮಸ್ವಾಮಿ ವೃತ್ತದಲ್ಲಿ ಜಮಾವಣೆಗೊಂಡ ಯುವ ಕಾಂಗ್ರೆಸ್ ಕಾರ್ಯಕರ್ತರು, ಕೇಂದ್ರ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ಹೊರಹಾಕಿದರು. ಕೇಂದ್ರ ಸರ್ಕಾರದ ಸೂಚನೆಯಂತೆ ಬಂಧನವಾಗಿರುವ ಯುವ ಕಾಂಗ್ರೆಸ್ ಕಾರ್ಯಕರ್ತರನ್ನು ಕೂಡಲೇ ಬಿಡುಗಡೆ ಮಾಡಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯನ್ನುದ್ದೇಶಿಸಿ ಮಾತನಾಡಿದ ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ರಾಷ್ಟ್ರೀಯ ಯುವ ಕಾಂಗ್ರೆಸ್ ಅಧ್ಯಕ್ಷ ಉದಯ್ ಬಾನು ಚಿಬ್ ಬಂಧಿಸಿರುವುದು ಪ್ರಧಾನಿ ನರೇಂದ್ರ ಮೋದಿ ಅವರ ಸರ್ವಾಧಿಕಾರಿ ಪ್ರವೃತ್ತಿಯನ್ನು ಬಿಂಬಿಸುತ್ತದೆ. ನೂರಾರು ನ್ಯೂನ್ಯತೆಗಳನ್ನು ಇಟ್ಟುಕೊಂಡು ವಿದೇಶಗಳೊಂದಿಗೆ ಒಪ್ಪಂದ ಮಾಡಿಕೊಳ್ಳುವ ಪ್ರಧಾನಿ ಮೋದಿ ಅವರಿಗಿಂತ ಕೆಚ್ಚೆದೆಯಿಂದ ನಿರ್ಭಯವಾಗಿ ಅವರ ಕೆಟ್ಟ ನಿಲುವುಗಳ ವಿರುದ್ಧ ಧ್ವನಿ ಎತ್ತಿರುವ ಯುವ ಕಾಂಗ್ರೆಸ್ ಅಧ್ಯಕ್ಷರು ಮತ್ತು ಪದಾಧಿಕಾರಿಗಳ ಬಗ್ಗೆ ಗೌರವವಿದೆ ಎಂದರು.

ದೇಶದಲ್ಲಿ ಮೋದಿ ವಿರುದ್ಧ ಮಾತನಾಡುವವರ ನೈತಿಕ ಬಲವನ್ನು ಕುಗ್ಗಿಸುವ ಕೆಲಸ ನಡೆಯುತ್ತಿದೆ. ಅದೇ ದೃಷ್ಟಿಯಿಂದ ಯುವ ಕಾಂಗ್ರೆಸ್ ಸದಸ್ಯರನ್ನು ಬಂಧಿಸುವ ಮೂಲಕ ಪ್ರತಿಭಟಿಸುವ ಹಕ್ಕನ್ನು ಕಸಿದಿದ್ದಾರೆ. ಕೂಡಲೇ ಅವರನ್ನು ಬಿಡುಗಡೆಗೊಳಿಸಬೇಕು. ಇಲ್ಲವಾದರೆ ಉಗ್ರ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು.

ಬ್ಲಾಕ್ ಅಧ್ಯಕ್ಷ ಜಿ.ಸೋಮಶೇಖರ್, ಯುವ ಕಾಂಗ್ರೆಸ್ ಅಧ್ಯಕ್ಷ ಹೊಯ್ಸಳ, ಆಶ್ರಯ ಸಮಿತಿ ಸದಸ್ಯ ಗುಣಶೇಖರ್, ಕಾರ್ಯದರ್ಶಿ ಡೈರಿ ವೆಂಕಟೇಶ್, ಜಿಲ್ಲಾ ಯುವ ಮುಖಂಡರಾದ ಎಂ.ಎಸ್.ಶಶಾಂಕ್ ಗೌಡ, ರೋಹಿತ್ ಸಿಂಗ್, ಯುವ ಕಾಂಗ್ರೆಸ್ ಬ್ಲಾಕ್ ಸಮಿತಿ ಅಧ್ಯಕ್ಷ ಕಾರ್ತಿಕ್, ಸೈದ್ ಸಕ್ಲೇನ್, ಕೆ.ವಿವೇಕ್, ನಿತಿನ್, ಮನೋಜ್, ಕರಣ್, ಅಭಿ, ಕಿರಣ್, ಶಾರುಖ್, ಸೈದ್‌ಖಾನ್ ಮತ್ತಿತರರಿದ್ದರು.

ಬಜೆಟ್‌ನಲ್ಲಿ ಮೈಸೂರು ಅಭಿವೃದ್ಧಿಗೆ ಹೆಚ್ಚಿನ ಅನುದಾನಕ್ಕೆ ಆಗ್ರಹಿಸಿ ಮೈಸೂರು ಕನ್ನಡ ವೇದಿಕೆ ಪ್ರತಿಭಟನೆ



ಮೈಸೂರು ಕನ್ನಡ ವೇದಿಕೆ ವತಿಯಿಂದ ಹಳೆ ಜಿಲ್ಲಾಧಿಕಾರಿ ಕಚೇರಿ ಬಳಿ ಶುಕ್ರವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಫೆ.27(ಎಂಕೆ)– ಮುಂಬರುವ ರಾಜ್ಯ ಬಜೆಟ್‌ನಲ್ಲಿ ಮೈಸೂರಿನ ಅಭಿವೃದ್ಧಿಗೆ ಹೆಚ್ಚಿನ ಅನುದಾನ ನೀಡಬೇಕೆಂದು ಒತ್ತಾಯಿಸಿ ಮೈಸೂರು ಕನ್ನಡ ವೇದಿಕೆ ವತಿಯಿಂದ ಹಳೆ ಜಿಲ್ಲಾಧಿಕಾರಿ ಕಚೇರಿ ಬಳಿ ಶುಕ್ರವಾರ ಪ್ರತಿಭಟನೆ ನಡೆಸಿ ಆಗ್ರಹಿಸಲಾಯಿತು.

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದಲೂ ಮುಖ್ಯಮಂತ್ರಿ ಕುರ್ಚಿಗಾಗಿ ಕಚ್ಚಾಟ, ಗುಂಪುಗಾರಿಕೆಯೇ ನಡೆಯುತ್ತಿದೆ. ಪದೇ ಪದೆ ಹೈಕಮಾಂಡ್ ಭೇಟಿಗೆ ದೆಹಲಿ ಪ್ರಯಾಣ, ಜಾತಿ ಜಾತಿಗಳ ನಡುವೆ ಸಂಘರ್ಷ, ನಿಗಮ ಮಂಡಳಿಗಳಲ್ಲಿ ಭ್ರಷ್ಟಾಚಾರವೇ ಹೆಚ್ಚಾಗಿದೆ. ಗ್ಯಾರಂಟಿ ಯೋಜನೆಗಳಿಂದ ಸರ್ಕಾರದ ಖಜಾನೆ ಖಾಲಿಯಾಗಿದ್ದು, ಉದ್ಯೋಗಕ್ಕಾಗಿ ಬೀದಿಗಿಳಿದು ಪ್ರತಿಭಟಿಸುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಕಿಡಿಕಾರಿದರು.

ಇಂತಹ ದುಸ್ಥಿತಿಯ ನಡುವೆ ದಾಖಲೆ ಬಜೆಟ್ ಮಂಡಿಸಲು ಮುಂದಾಗಿರುವ ಮುಖ್ಯಮಂತ್ರಿಗಳು, ಮೈಸೂರಿಗೆ ಅತ್ಯಂತ ಅವಶ್ಯವಾಗಿರುವ ಇಂಜಿನಿಯರಿಂಗ್ ಕಾಲೇಜು ನೀಡಬೇಕು. ರೇಷ್ಮೆ ಕೃಷಿ ಅಭಿವೃದ್ಧಿಗೆ ಆದ್ಯತೆ ನೀಡಿ, ಇಮ್ಮಾವಿನಲ್ಲಿ ಚಿತ್ರನಗರಿ ನಿರ್ಮಾಣಕ್ಕೆ ಚಾಲನೆ ನೀಡಬೇಕು. ಬದನವಾಳು ಖಾದಿ ಗ್ರಾಮ, ನಂಜನಗೂಡಿನ ರಸ ಬಾಳೆಗೆ ಹೆಚ್ಚು ಉತ್ತೇಜನ ನೀಡಬೇಕು. ಮಾನವ–ವನ್ಯಜೀವಿಗಳ ಸಂಘರ್ಷ ತಡೆದು, ಪ್ರವಾಸೋದ್ಯಮ ಅಭಿವೃದ್ಧಿಗೆ ಆದ್ಯತೆ ನೀಡಬೇಕು. ಬೃಹತ್ ಮಹಾನಗರ ಪಾಲಿಕೆಯಾಗುತ್ತಿರುವ ಮೈಸೂರಿನ ಅಭಿವೃದ್ಧಿಗೆ ಹೆಚ್ಚು ಅನುದಾನ ನೀಡಬೇಕೆಂದು ಒತ್ತಾಯಿಸಿದರು.

ವೇದಿಕೆ ಅಧ್ಯಕ್ಷ ಎಸ್.ಬಾಲಕೃಷ್ಣ, ನಾಲಾ ಬೀದಿರವಿ, ಬೋಗಾದಿ ಸಿದ್ದೇಗೌಡ, ಗುರುಬಸಪ್ಪ, ಪ್ಯಾಲೆಸ್ ಬಾಬು, ಚಾಮರಾಜು ಮಂಡಕಳ್ಳಿ, ಹರೀಶ್, ಚಿನ್ನಪ್ಪ, ಶಿವುಗೌಡ, ಮಾದಪ್ಪ, ಸುನೀಲ್, ಗೋಪಿ, ಸ್ವಾಮಿ ಗೈಡ್, ಚೆಲುವರಾಯಸ್ವಾಮಿ, ಬೀಡಾ ಬಾಬು, ರಮೇಶ್, ಗೋವಿಂದರಾಜು, ಎಲ್‌ಐಸಿ ಸಿದ್ದಪ್ಪ, ಸುನೀಲ್, ಹನಕೆರೆ ಸ್ವಾಮಿ, ರೈತ ಪರ್ವ ಅಧ್ಯಕ್ಷ ಅರುಣ್ ಕುಮಾರ್ ಮತ್ತಿತರರಿದ್ದರು.

ಕ್ರ ಸಂ	ಬಡಾವಣೆ ಹೆಸರು	ನಿವೇಶನ ಸಂಖ್ಯೆ	ಮಧ್ಯಂತರ/ ಮೂಲೆ	ರಸ್ತೆ ಅಭಿಮುಖ ದಿಕ್ಕು ಹಾಗೂ ಅಗಲ (ಮೀ.ಗಳಲ್ಲಿ)	ಅಳತೆ ಮೀ ಗಳಲ್ಲಿ ಉ–ದ	ಅಳತೆ ಮೀ ಗಳಲ್ಲಿ ಪೂ–ಪ	ವಿಸ್ತೀರ್ಣ ಚ.ಮೀ ಗಳಲ್ಲಿ	ಚ.ಮೀ.ಗೆ ನಿಗದಿ ಪಡಿಸಿರುವ ದರ	ನಿವೇಶನದ ಮೌಲ್ಯ (ರೂ.ಲಕ್ಷ ಗಳಲ್ಲಿ)
142	ಶಾಂತವೇರಿ ಗೋಪಾಲಗೌಡ	120	ಮೂಲೆ	ದ:12.00ಪೂ:9.00	12.00	18.00	216.00	59180.00	127.83
143	ಲಾಲ್ ಬಹದ್ದೂರ್ ಶಾಸ್ತ್ರಿ ನಗರ	280	ಮೂಲೆ	ದ:9.00 ಪ:12.00	13.00	18.00	234.00	59180.00	138.48
144	ಲಾಲ್ ಬಹದ್ದೂರ್ ಶಾಸ್ತ್ರಿ ನಗರ	300	ಮೂಲೆ	ಉ:12.00 ಪೂ:9.00	9.00	12.00	108.00	59180.00	63.91
145	ಲಾಲ್ ಬಹದ್ದೂರ್ ಶಾಸ್ತ್ರಿ ನಗರ	318	ಮೂಲೆ	ಉ:12.00 ಪ:12.00	12.00	6.00	72.00	59180.00	42.61
146	ಲಾಲ್ ಬಹದ್ದೂರ್ ಶಾಸ್ತ್ರಿ ನಗರ	338	ಮೂಲೆ	ಉ:12.00 ಪೂ.9.00	12.00	9.00	108.00	59180.00	63.91
147	ಲಾಲ್ ಬಹದ್ದೂರ್ ಶಾಸ್ತ್ರಿ ನಗರ	363	ಮೂಲೆ	ದ:9.00 ಪ:12.00	12.00	13.70	164.40	59180.00	97.29
148	ಲಾಲ್ ಬಹದ್ದೂರ್ ಶಾಸ್ತ್ರಿ ನಗರ	485	ಮೂಲೆ	ದ:9.00ಪ:12.00	9.00	12.00	108.00	59180.00	63.91
149	ಲಾಲ್ ಬಹದ್ದೂರ್ ಶಾಸ್ತ್ರಿ ನಗರ	653	ಮೂಲೆ	ದ:9.00ಪ:9.00	13.00	12.00	156.00	59180.00	92.32
150	ಲಾಲ್ ಬಹದ್ದೂರ್ ಶಾಸ್ತ್ರಿ ನಗರ	668	ಮೂಲೆ	ಉ.9.00 ಪ:9.00	9.00	12.00	108.00	59180.00	63.91
151	ಲಾಲ್ ಬಹದ್ದೂರ್ ಶಾಸ್ತ್ರಿ ನಗರ	863	ಮೂಲೆ	ಉ.9.00 ಪ:12.00	18.00	12.00	216.00	59180.00	127.83
152	ಲಾಲ್ ಬಹದ್ದೂರ್ ಶಾಸ್ತ್ರಿ ನಗರ	923	ಮೂಲೆ	ಉ.18.00 ಪ:12.00	24.00	15.00	360.00	59180.00	213.05
153	ಲಾಲ್ ಬಹದ್ದೂರ್ ಶಾಸ್ತ್ರಿ ನಗರ	1313	ಮೂಲೆ	ಉ.9.00 ಪೂ:9.00	9.00	12.00	108.00	59180.00	63.91
154	ಲಾಲ್ ಬಹದ್ದೂರ್ ಶಾಸ್ತ್ರಿ ನಗರ	1314	ಮೂಲೆ	ಉ:9.00 ಪ:12.00	12.00	18.00	216.00	59180.00	127.83
155	ಲಾಲ್ ಬಹದ್ದೂರ್ ಶಾಸ್ತ್ರಿ ನಗರ	1322	ಮೂಲೆ	ಉ:12.00 ಪ:12.00	9.00	12.00	108.00	59180.00	63.91
156	ಲಾಲ್ ಬಹದ್ದೂರ್ ಶಾಸ್ತ್ರಿ ನಗರ	1343	ಮೂಲೆ	ಉ:12.00 ಪ:12.00	12.00	9.00	108.00	59180.00	63.91
157	ಲಾಲ್ ಬಹದ್ದೂರ್ ಶಾಸ್ತ್ರಿ ನಗರ	1415	ಮೂಲೆ	ದಉ.9.00 ಪೂ:12.00	12.00	18.00	216.00	59180.00	127.83
158	ಲಲಿತಾದ್ರಿನಗರ (ದಕ್ಷಿಣ)	721	ಮೂಲೆ	ಉತ್ತರ18.00	9.00	12.00	108.00	59180.00	63.91
159	ಲಲಿತಾದ್ರಿನಗರ (ದಕ್ಷಿಣ)	722	ಮೂಲೆ	ಉತ್ತರ18.00	9.00	12.00	108.00	59180.00	63.91
160	ಗಾಯತ್ರಿಪುರಂ 1ನೇ ಹಂತ	388	ಮಧ್ಯಂತರ	ಪಶ್ಚಿಮ 9.00	9.00	14.00	126.00	64560.00	81.35
161	ಗಾಯತ್ರಿಪುರಂ 1ನೇ ಹಂತ	373	ಮಧ್ಯಂತರ	ಪೂರ್ವ9.00	12.00	15.00	180.00	64560.00	116.21
162	ಗಾಯತ್ರಿಪುರಂ 1ನೇ ಹಂತ	345	ಮಧ್ಯಂತರ	ಪಶ್ಚಿಮ9.00	10.00	12.00	120.00	64560.00	77.47
163	ಗಾಯತ್ರಿಪುರಂ 1ನೇ ಹಂತ	341	ಮಧ್ಯಂತರ	ಪಶ್ಚಿಮ 9.00	10.70	12.00	128.4	64560.00	82.90
164	ಗಾಯತ್ರಿಪುರಂ 1ನೇ ಹಂತ	314	ಮಧ್ಯಂತರ	ಪಶ್ಚಿಮ 9.00	12.00	9.00	108.00	64560.00	69.72
165	ಸಾತಗಳ್ಳಿ 2ನೇ ಹಂತ	4622	ಮೂಲೆ	ಪೂ–ಉ 9.00	(9.00+9.30)/2	(6.60+6.60)/2	60.39	37660.00	22.74
166	ಸಾತಗಳ್ಳಿ 2ನೇ ಹಂತ	4649	ಮೂಲೆ	9.00 ಪ – ಉ	9.00	6.00	54.00	37660.00	20.34
167	ಸಾತಗಳ್ಳಿ 2ನೇ ಹಂತ	4648	ಮೂಲೆ	9.00 ದ – ಪ	9.00	(6.10+6.30)/2	55.80	37660.00	21.01
168	ಸಾತಗಳ್ಳಿ 2ನೇ ಹಂತ	4597	ಮೂಲೆ	9.00 ಉ – ಪ	9.20	6.10	56.12	37660.00	21.13
169	ಸಾತಗಳ್ಳಿ 2ನೇ ಹಂತ	4596	ಮೂಲೆ	9.00 ಪ – ದ	9.00	(6.15+6.20)/2	55.57	37660.00	20.93
170	ಸಾತಗಳ್ಳಿ 2ನೇ ಹಂತ	4545	ಮೂಲೆ	9.00 ಉ	9.00	(6.10+6.15)/2	55.12	37660.00	20.76
171	ಸಾತಗಳ್ಳಿ 2ನೇ ಹಂತ	5406	ಮೂಲೆ	9.00 ಪೂ – ಪ	9.00	(6.00+8.50)/2	65.25	37660.00	24.57
172	ಸಾತಗಳ್ಳಿ 2ನೇ ಹಂತ	5405	ಮಧ್ಯಂತರ	9.00 ದ	9.00	6.00	54.00	32280.00	17.43
173	ಸಾತಗಳ್ಳಿ 2ನೇ ಹಂತ	5404	ಮಧ್ಯಂತರ	9.00 ದ	9.00	6.00	54.00	32280.00	17.43
174	ಸಾತಗಳ್ಳಿ 2ನೇ ಹಂತ	5403	ಮಧ್ಯಂತರ	9.00 ದ	9.00	6.00	54.00	32280.00	17.43
175	ಸಾತಗಳ್ಳಿ 2ನೇ ಹಂತ	5402	ಮಧ್ಯಂತರ	9.00 ದ	9.00	6.00	54.00	32280.00	17.43
176	ಹಂಚ್ಯಾ – ಸಾತಗಳ್ಳಿ 'ಬಿ' ವಲಯ	1698	ಮಧ್ಯಂತರ	9.00 ಪೂ	15.00	24.00	360.00	48643.00	175.11
177	ಹಂಚ್ಯಾ – ಸಾತಗಳ್ಳಿ 'ಬಿ' ವಲಯ	1697	ಮಧ್ಯಂತರ	9.00 ಪೂ	15.00	24.00	360.00	48643.00	175.11
178	ಹಂಚ್ಯಾ – ಸಾತಗಳ್ಳಿ 'ಬಿ' ವಲಯ	1696	ಮಧ್ಯಂತರ	9.00 ಪೂ	15.00	24.00	360.00	48643.00	175.11
179	ಹಂಚ್ಯಾ – ಸಾತಗಳ್ಳಿ 'ಬಿ' ವಲಯ	1695	ಮಧ್ಯಂತರ	9.00 ಪೂ	15.00	24.00	360.00	48643.00	175.11
180	ಹಂಚ್ಯಾ – ಸಾತಗಳ್ಳಿ 'ಬಿ' ವಲಯ	1694	ಮಧ್ಯಂತರ	9.00 ಪೂ	15.00	24.00	360.00	48643.00	175.11
181	ಹಂಚ್ಯಾ – ಸಾತಗಳ್ಳಿ 'ಬಿ' ವಲಯ	1693	ಮಧ್ಯಂತರ	9.00 ಪೂ	15.00	24.00	360.00	48643.00	175.11
182	ಹಂಚ್ಯಾ – ಸಾತಗಳ್ಳಿ 'ಬಿ' ವಲಯ	1692	ಮಧ್ಯಂತರ	9.00 ಪೂ	15.00	24.00	360.00	48643.00	175.11
183	ಹಂಚ್ಯಾ – ಸಾತಗಳ್ಳಿ 'ಬಿ' ವಲಯ	1688	ಮಧ್ಯಂತರ	9.00 ಪೂ	15.00	24.00	360.00	48643.00	175.11
184	ಹಂಚ್ಯಾ – ಸಾತಗಳ್ಳಿ 'ಬಿ' ವಲಯ	1689	ಮಧ್ಯಂತರ	9.00 ಪೂ	15.00	24.00	360.00	48643.00	175.11
185	ಹಂಚ್ಯಾ – ಸಾತಗಳ್ಳಿ 'ಬಿ' ವಲಯ	1690	ಮಧ್ಯಂತರ	9.00 ಪೂ	15.00	24.00	360.00	48643.00	175.11
186	ಹಂಚ್ಯಾ – ಸಾತಗಳ್ಳಿ 'ಬಿ' ವಲಯ	1691	ಮಧ್ಯಂತರ	9.00 ಪೂ	15.00	24.00	360.00	48643.00	175.11
187	ವಸಂತನಗರ	651	ಮಧ್ಯಂತರ	12.00 ಪೂ– ಪ	9.00	12.00	108.00	37660.00	40.67
188	ವಸಂತನಗರ	682	ಮಧ್ಯಂತರ	12.00 ಪೂ– ಪ	9.00	12.00	108.00	37660.00	40.67
189	ವಸಂತನಗರ	725	ಮಧ್ಯಂತರ	ಪಶ್ಚಿಮ 12.00	9.00	12.00	108.00	37660.00	40.67
190	ವಸಂತನಗರ	754	ಮಧ್ಯಂತರ	ಪಶ್ಚಿಮ 12.00	9.00	12.00	108.00	37660.00	40.67
191	ವಸಂತನಗರ	9	ಮಧ್ಯಂತರ	ಪಶ್ಚಿಮ 9.00	12.00	18.00	216.00	37660.00	81.35
192	ವಸಂತನಗರ	10	ಮಧ್ಯಂತರ	ಪಶ್ಚಿಮ 9.00	12.00	18.00	216.00	37660.00	81.35
193	ವಸಂತನಗರ	11	ಮಧ್ಯಂತರ	ಪಶ್ಚಿಮ 9.00	12.00	18.00	216.00	37660.00	81.35
194	ವಸಂತನಗರ	12	ಮಧ್ಯಂತರ	ಪಶ್ಚಿಮ 9.00	12.00	18.00	216.00	37660.00	81.35
195	ವಸಂತನಗರ	210	ಮಧ್ಯಂತರ	ಪಶ್ಚಿಮ 9.00	12.00	18.00	216.00	37660.00	81.35
196	ವಸಂತನಗರ	1910	ಮಧ್ಯಂತರ	ಪೂರ್ವ 24.00	15.00	24.00	360.00	37660.00	135.58
197	ವಸಂತನಗರ	1911	ಮಧ್ಯಂತರ	ಪೂರ್ವ 24.00	15.00	24.00	360.00	37660.00	135.58
198	ವಸಂತನಗರ	1912	ಮಧ್ಯಂತರ	ಪೂರ್ವ 24.00	15.00	24.00	360.00	37660.00	135.58
199	ವಸಂತನಗರ	1913	ಮಧ್ಯಂತರ	ಪೂರ್ವ 24.00	15.00	24.00	360.00	37660.00	135.58
200	ವಸಂತನಗರ	1914	ಮಧ್ಯಂತರ	ಪೂರ್ವ 24.00	15.00	24.00	360.00	37660.00	135.58
								ಒಟ್ಟು (ಲಕ್ಷಗಳು)	18629.43

ಇ–ಹರಾಜಿನ ಷರತ್ತು ಮತ್ತು ನಿಯಮ ನಿಬಂಧನೆಗಳು ಕೆಳಕಂಡಂತಿವೆ.

1) ಹರಾಜಿನಲ್ಲಿ ಪಾಲ್ಗೊಳ್ಳುವವರು ಭಾರತೀಯ ಪ್ರಜೆಯಾಗಿರಬೇಕು, ಭಾರತ ದೇಶದಲ್ಲಿ ನೋಂದಣಿಯಾಗಿರುವ ಪಾಲುದಾರ ಸಂಸ್ಥೆ/ಲಿಮಿಟೆಡ್ ಕಂಪೆನಿಗಳು/ಟ್ರಸ್ಟ್‌ಗಳು ಭಾಗವಹಿಸಬಹುದಾಗಿದೆ. 2) ಇ–ಹರಾಜಿನಲ್ಲಿ ಭಾಗವಹಿಸಲಿಚ್ಛಿಸುವವರು ಇ–ಹರಾಜಿಗೆ ಸಂಬಂಧಿಸಿದ ಮಾಹಿತಿಯನ್ನು https://kppp.karnataka.gov.in ವೆಬ್‌ಸೈಟ್‌ನಲ್ಲಿ ಲಾಗಿನ್ ಆಗಿ ಮುಖಪುಟದ ಡೌನ್‌ಲೋಡ್‌ನಲ್ಲಿ ಟೆಂಡರ್‌ದಾರರಿಗೆ ಬಳಕೆದಾರರ ಕೈಪಿಡಿಗಳು ಇಲ್ಲಿ New e-Auction Bidding user manual ಅನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್– 080–46010000 ಮತ್ತು 080–68948777 ಗೆ ಸಂಪರ್ಕಿಸಬಹುದು. 3) ಹರಾಜಿನಲ್ಲಿ ಪಾಲ್ಗೊಳ್ಳುವವರು https://kppp.karnataka.gov.in ವೆಬ್‌ಸೈಟ್ ನಿಂದ ನಿಗಧಿತ ಮಾದರಿ ಸಹಿಯ ನಮೂನೆ (ಇದರಲ್ಲಿ ಅರ್ಜಿದಾರರ ಹೆಸರು ಮತ್ತು ತಂದೆಯ ಹೆಸರನ್ನು ಕನ್ನಡ ಹಾಗೂ ಆಂಗ್ಲ ಭಾಷೆಯಲ್ಲಿ ನಮೂದಿಸುವುದು) ಹಾಗೂ ಸಂಪರ್ಕದ ಮಾಹಿತಿಯ ನಮೂನೆಯನ್ನು ಡೌನ್‌ಲೋಡ್ ಮಾಡಿಕೊಂಡು, ವಿವರಗಳನ್ನು ಭರ್ತಿ ಮಾಡಿ, ವೆಬ್‌ಸೈಟ್‌ನಲ್ಲಿ ಅಪಲೋಡ್ ಮಾಡಬೇಕಾಗಿರುತ್ತದೆ. 4) ಇ–ಹರಾಜಿನ ಮೂಲಕ ನಿವೇಶನವನ್ನು ಜಂಟಿಯಾಗಿ ಖರೀದಿಸುವವರು ಜಂಟಿಯಾಗಿ ದಾಖಲೆಗಳನ್ನು ಇ–ಹರಾಜಿನ ಪೋರ್ಟಲ್‌ನಲ್ಲಿ ಅಪಲೋಡ್ ಮಾಡಬೇಕು. 5) ಹರಾಜಿಗೊಳಪಡಿಸಿರುವ ನಿವೇಶನಗಳು ಎಲ್ಲಿ ಹೇಗೆ ಇವೆಯೋ ಅದೇ ಸ್ಥಿತಿಯಲ್ಲಿ ಯಶಸ್ವಿ ಬಿಡ್ಡುದಾರರಿಗೆ ಹಂಚಿಕೆ ಮಾಡಲಾಗುವುದು, ಹರಾಜಿನಲ್ಲಿ ಭಾಗವಹಿಸುವ ಬಿಡ್ಡುದಾರರು ನಿವೇಶನದ ಸ್ಥಳ, ರಸ್ತೆಯ ಅಗಲ ಮುಂತಾದವುಗಳನ್ನು ಖುದ್ದಾಗಿ ಪರಿಶೀಲಿಸಿಕೊಂಡು ಹರಾಜಿನಲ್ಲಿ ಭಾಗವಹಿಸುವುದು. ರಸ್ತೆಯ ಅಗಲದ ವ್ಯತ್ಯಾಸ ಅಥವಾ ಇನ್ಯಾವುದೇ ಕಾರಣಗಳಿಂದ ಹರಾಜಿನಲ್ಲಿ ಪಡೆದ ನಿವೇಶನಗಳನ್ನು ರದ್ದುಪಡಿಸಲಾಗುವುದಿಲ್ಲ / ಬದಲಿ ನಿವೇಶನ ನೀಡಲಾಗುವುದಿಲ್ಲ ಹಾಗೂ ಹರಾಜಿನಲ್ಲಿ ಹಂಚಿಕೆಯಾದ ನಿವೇಶನಗಳಿಗೆ ಬದಲಿ ನಿವೇಶನ ನೀಡಲು ನಿಯಮಾವಳಿಯಲ್ಲಿ ಅವಕಾಶವಿರುವುದಿಲ್ಲ. 6) ಪ್ರತಿ ನಿವೇಶನದ ಹರಾಜಿನಲ್ಲಿ ಕನಿಷ್ಠ ಇಬ್ಬರು ಬಿಡ್ಡುದಾರರು ಭಾಗವಹಿಸಬೇಕಾಗಿರುತ್ತದೆ. ಒಬ್ಬರೇ ಬಿಡ್ಡುದಾರರು ಇದ್ದಲ್ಲಿ ಅಂತಹ ಬಿಡ್ಡನ್ನು ತಿರಸ್ಕರಿಸಲಾಗುವುದು. 7) ಇ–ಹರಾಜಿನ ಅಂತಿಮ ದಿನಾಂಕದ ಅಂತಿಮ ಸಮಯ/ಕ್ಷಣದಲ್ಲಿ ಪ್ರಗತಿಯಲ್ಲಿರುವ ಬಿಡ್ಡುಗಳಿಗೆ ಪ್ರತಿ ಬಿಡ್ಡಿಗೆ 5 ನಿಮಿಷ ಡೆಲ್ಟಾ ಟೈಂ ಇದ್ದು, ಉದಾ: ಹರಾಜು ಅಂತ್ಯವಾಗುವ ವೇಳೆ 16.00 ಆಗಿದ್ದು, ನೀವು 15.57 ಕ್ಕೆ ಬಿಡ್ ಮಾಡಿದಾಗ 16.02 ರವರೆಗೆ ಅವಧಿ ವಿಸ್ತರಣೆಯಾಗುತ್ತದೆ. ಇದು ಅಂತಿಮವಾಗುವವರೆಗೆ ವಿಸ್ತರಣೆಯಾಗುತ್ತಾ ಹೋಗುತ್ತದೆ. 8) ಹರಾಜಿಗೊಳಪಡಿಸಲ್ಪಟ್ಟಿರುವ ನಿವೇಶನಗಳ ದರ ರೂ.1.00 ಕೋಟಿಗಿಂತ ಕಡಿಮೆ ಇದ್ದರೆ ರೂ.2.00 ಲಕ್ಷ ಇ.ಎಂ.ಡಿ ಮತ್ತು ನಿವೇಶನಗಳ ದರ ರೂ.1.00 ಕೋಟಿ ಹಾಗೂ ಅಧಿಕವಿದ್ದಲ್ಲಿ ರೂ.4.00 ಲಕ್ಷ ಇ.ಎಂ.ಡಿ ಶುಲ್ಕವನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ICICI ಬ್ಯಾಂಕ್‌ಗೆ DEBIT CARD/CREDIT CARD/NET BANKING ಮೂಲಕ ಪಾವತಿಸಬೇಕಾಗಿರುತ್ತದೆ. ಇದರೊಂದಿಗೆ ಹರಾಜು ಸೇವಾ ಶುಲ್ಕವನ್ನು ಬಿಡ್ಡುದಾರರೇ ಭರಿಸತಕ್ಕದ್ದು. 9) ರೂ.1.00 ಕೋಟಿಗಿಂತ ಕಡಿಮೆ ಮೌಲ್ಯದ ನಿವೇಶನಗಳಿಗೆ ಕನಿಷ್ಠ ಬಿಡ್ ಏರಿಕೆ ಮೊತ್ತ ರೂ.25,000/– ಮತ್ತು ರೂ.1.00 ಕೋಟಿ ಹಾಗೂ ಮೇಲ್ಪಟ್ಟ ಮೌಲ್ಯದ ನಿವೇಶನಗಳಿಗೆ ರೂ.1,00,000/– ಗಳಾಗಿರುತ್ತದೆ. 10) ಅತ್ಯಧಿಕ ಮೊತ್ತದ ಬಿಡ್ಡುದಾರರು ಬಿಡ್ ಅಂಗೀಕೃತವಾದ ಬಗ್ಗೆ https://kppp.karnataka.gov.in ವೆಬ್‌ಸೈಟ್‌ನಲ್ಲಿ ಲಾಗಿನ್ ಆಗಿ ಪರಿಶೀಲಿಸಿಕೊಂಡು ಬಿಡ್ ಮೌಲ್ಯದ ಶೇ.25 ರಷ್ಟು ಹಣವನ್ನು ಅವರ ಸ್ವಂತ ಬ್ಯಾಂಕ್ ಖಾತೆಯಿಂದಲೇ ಆರ್.ಟಿ.ಜಿ.ಎಸ್/ಎನ್.ಇ.ಎಫ್.ಟಿ ಮೂಲಕ (ಇ.ಎಂ.ಡಿ. ರೂ.4.00 ಲಕ್ಷ ಅಥವಾ ರೂ.2.00 ಲಕ್ಷ ಹೊರತು ಪಡಿಸಿ) ಬಿಡ್ಡು ಅಂಗೀಕರಿಸಿದ 72 ಗಂಟೆಯೊಳಗಾಗಿ ಖಾತೆದಾರರು ಆಯುಕ್ತರು, ಮೈ.ಅ.ಪ್ರಾ, ಮೈಸೂರು ರವರ ಹೆಸರಿನಲ್ಲಿರುವ **Commissioner MDA Mysore, Bank of Baroda, Account No.89260100004660 (IFSC Code No. BARB0VJMUDA,** 5ನೇ ಅಕ್ಷರ ಸೊನ್ನೆ ಆಗಿರುತ್ತದೆ), ಖಾತೆಗೆ ಪಾವತಿ ಮಾಡಬಹುದಾಗಿರುತ್ತದೆ. ಶೇಕಡ 25 ರಷ್ಟು ಹಣ ಪಾವತಿಸಿದ ಬಗ್ಗೆ ದಾಖಲಾತಿ ಒದಗಿಸುವ ಸಂದರ್ಭದಲ್ಲಿ 2 ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವನ್ನು ಸಲ್ಲಿಸುವುದು. ಯಶಸ್ವಿ ಬಿಡ್ಡುದಾರರು ಬಿಡ್ ಮೊಬಲಗಿನ ಶೇಕಡ 25 ಭಾಗ ಹಣ ಪಾವತಿಸಲು ವಿಫಲರಾದಲ್ಲಿ ಇ.ಎಂ.ಡಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಂಡು ಸದರಿ ನಿವೇಶನವನ್ನು ಮರು ಹರಾಜಿಗೆ ಒಳಪಡಿಸಲಾಗುವುದು. 11) ಹರಾಜಿಗೆ ಪ್ರಕಟಿಸಿದ ನಿವೇಶನಗಳನ್ನು ಯಾವುದೇ ಕಾರಣ ನೀಡದೇ ಹರಾಜು ಅವಧಿಯ ಯಾವುದೇ ಸಮಯದಲ್ಲಿ ಹಿಂಪಡೆಯುವ ಹಕ್ಕನ್ನು ಮೈ.ಅ.ಪ್ರಾ. ಕಾಯ್ದಿರಿಸಿಕೊಂಡಿದೆ. 12) ಹರಾಜಾದ ನಿವೇಶನಗಳನ್ನು 1991ರ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ಮೂಲೆ ಮತ್ತು ವಾಣಿಜ್ಯ ನಿವೇಶನಗಳ ಹಂಚಿಕೆ) ನಿಯಮ ಕಲಂ 6(2) ರನ್ವಯ ಅಂತಿಮ ಬಿಡ್ಡನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಆಯುಕ್ತರು, ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು ರವರು ಹೊಂದಿರುತ್ತಾರೆ. 13) ಇ–ಹರಾಜಿನಲ್ಲಿ ವಿಫಲರಾದವರಿಗೆ ಹರಾಜು ಅಂತಿಮಗೊಂಡ ನಂತರ ಇ.ಎಂ.ಡಿ ಮೊತ್ತವನ್ನು https://kppp.karnataka.gov.in ರವರು ನೇರವಾಗಿ ಬ್ಯಾಂಕ್ ಖಾತೆಗೆ ಮರುಪಾವತಿ ಮಾಡಲು ಕ್ರಮವಹಿಸುತ್ತಾರೆ. 14) ಬಿಡ್ಡುದಾರರಿಗೆ ಬಿಡ್ಡಿನಲ್ಲಿ ಅಂತಿಮಗೊಂಡ ನಿವೇಶನಗಳನ್ನು ಹಸ್ತಾಂತರಿಸುವ ಸಂದರ್ಭದಲ್ಲಿ ಒಟ್ಟು ವಿಸ್ತೀರ್ಣದಲ್ಲಿ ಕಡಿಮೆ ಇದ್ದಲ್ಲಿ ಪಾವತಿಸಲ್ಪಟ್ಟಿರುವ ಹೆಚ್ಚುವರಿ ಮೊತ್ತವನ್ನು ಮರುಪಾವತಿಸಲಾಗುವುದು ಹಾಗೂ ಹೆಚ್ಚುವರಿ ವಿಸ್ತೀರ್ಣವಿದ್ದಲ್ಲಿ, ಸದರಿ ವಿಸ್ತೀರ್ಣಕ್ಕೆ ಹೆಚ್ಚುವರಿ ಹಣ ಪಾವತಿಸಲು ತಿಳುವಳಿಕೆ ನೀಡಲಾಗುವುದು. ಇದಕ್ಕೆ ಬಿಡ್ಡುದಾರರು ಒಪ್ಪದಿದ್ದಲ್ಲಿ ಸದರಿಯವರು ಪಾವತಿಸಿರುವ ಶೇ.25 ರಷ್ಟು ಮೊಬಲಗನ್ನು ಮುಟ್ಟುಗೋಲು ಹಾಕಿಕೊಂಡು ಹರಾಜನ್ನು ರದ್ದುಗೊಳಿಸಲಾಗುವುದು. 15) "ಬಿಡ್ಡುದಾರರು ಬಿಡ್ ಮೊಬಲಗಿನ ಶೇಕಡ 75 ರಷ್ಟು ಹಣವನ್ನು ಸಹ ಅವರ ಸ್ವಂತ ಬ್ಯಾಂಕ್ ಖಾತೆಯಿಂದಲೇ ಪಾವತಿಸಿದ ನಂತರ ಹಣ ಪಾವತಿಸಿರುವ ರಸೀದಿ ಪ್ರತಿಯೊಂದಿಗೆ ಕ್ರಯಪತ್ರ ಕೋರಿ ಅರ್ಜಿ ಸಲ್ಲಿಸುವುದು. 16) ಬಿಡ್ಡುದಾರರಿಗೆ ಬಿಡ್ಡು ಮೊತ್ತದ ಉಳಿಕೆ ಶೇ.75 ರಷ್ಟು ಮೊತ್ತ ಪಾವತಿಸಲು ಬಡ್ಡಿ ರಹಿತವಾಗಿ ಹರಾಜು ಸ್ಥಿರೀಕರಣ ಪತ್ರ ಸ್ವೀಕರಿಸಿದ ದಿನಾಂಕದಿಂದ 45 ದಿವಸಗಳು ಅವಕಾಶವಿದ್ದು, ನಂತರದ 90 ದಿನಗಳ ಅವಧಿಗೆ ಶೇ.18 ರ ಬಡ್ಡಿ ದರದಲ್ಲಿ ಹಾಗೂ ತದನಂತರದ 30 ದಿನಗಳ ಅವಧಿಗೆ ಶೇ.21 ರ ಬಡ್ಡಿ ದರದಲ್ಲಿ ಸಕ್ಷಮ ಪ್ರಾಧಿಕಾರದ ಅನುಮತಿ ಪಡೆದು ಪಾವತಿಸಲು ಅವಕಾಶವಿರುತ್ತದೆ. 17) ಆದಾಯ ತೆರಿಗೆ ಕಾಯ್ದೆ 1961 ರ ಕಾಲಂ 194 ಐಎ ಪ್ರಕಾರ ಹರಾಜಾದ ಸ್ವತ್ತಿನ ಒಟ್ಟು ಮೊತ್ತವು ರೂ.50.00 ಲಕ್ಷ ಮೀರಿದ ಪ್ರಕರಣಗಳಲ್ಲಿ ಹರಾಜು ಖರೀದಿದಾರರು ನಿವೇಶನದ ಒಟ್ಟು ಮೊತ್ತದಲ್ಲಿ ಶೇಕಡ 1 ರಷ್ಟು ಮೊತ್ತವನ್ನು ಕಟಾಯಿಸಿ, ಆದಾಯ ತೆರಿಗೆ ಇಲಾಖೆ ಪಾವತಿಸತಕ್ಕದ್ದು. 18) ಹರಾಜು ಪ್ರಕಟಣೆಯಲ್ಲಿ ನೀಡಿರುವ ರೇಖಾಂಶ ಮತ್ತು ಅಕ್ಷಾಂಕ್ಷಗಳು ಕೆಲವೊಮ್ಮೆ ಕೈತಪ್ಪಿನಿಂದ ನಿಖರವಾಗಿ ನಿವೇಶನವನ್ನು ಗುರುತಿಸದೇ ಇದ್ದ ಪಕ್ಷದಲ್ಲಿ ಪ್ರಕಟಣೆಯಲ್ಲಿ ನೀಡಿರುವ ಸಂಬಂಧಪಟ್ಟ ಅಭಿಯಂತರರನ್ನು ಸಂಪರ್ಕಿಸಿ ಖಚಿತಪಡಿಸಿಕೊಳ್ಳಬಹುದಾಗಿದೆ. ರೇಖಾಂಶ ಮತ್ತು ಅಕ್ಷಾಂಕ್ಷಗಳು ವ್ಯತ್ಯಾಸವಾಗಿರುವುದಾಗಿ ತಿಳಿಸಿ ಪಾವತಿಸಿರುವ ಹಣವನ್ನು ಮರುಪಾವತಿ ಕೋರಿದ್ದಲ್ಲಿ ಮರುಪಾವತಿಸಲು ಅವಕಾಶವಿರುವುದಿಲ್ಲ.

19 "ನಿವೇಶನಗಳ ಸ್ಥಳದ (Location), ಅಭಿಮುಖ, ರಸ್ತೆ ಅಳತೆ ಇನ್ನಿತರೆ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬೇಕಾದ ಅಭಿಯಂತರರ ವಿವರ –

ಅ) ವಲಯ ಕಛೇರಿ–1 – 1. ನಾಚನಹಳ್ಳಿ–ಕುಪ್ಪಲೂರು 3ನೇ ಹಂತ, ಜೆ.ಪಿ.ನಗರ ಬಡಾವಣೆ – ಶ್ರೀಮತಿ.ರೂಪಶ್ರೀ, ಸಾ.ಅ., ಮೊಬೈಲ್ ನಂ.974029156. ಆ) ವಲಯ ಕಛೇರಿ–2– ದಟ್ಟಗಳ್ಳಿ 3ನೇ ಹಂತ ಬಡಾವಣೆ – ಶ್ರೀ. ರಾಜಶೇಖರ್.ಜಿ, ಕಿ.ಅ., ಮೊಬೈಲ್ ನಂ.9880929640, ಇ) ವಲಯ ಕಛೇರಿ–3 – ವಿಜಯನಗರ 4ನೇ ಹಂತ ಬಡಾವಣೆ – ಶ್ರೀ. ಕೆ.ಪಿ.ಸತೀಶ್‌ಚಂದ್ರ, ಸ.ಅ., ಮೊಬೈಲ್ ನಂ..9480446452. ಈ) ವಲಯ ಕಛೇರಿ–4– ಹೆಬ್ಬಾಳು 2ನೇ ಹಂತ ಬಡಾವಣೆ, ವಿಜಯನಗರ 2ನೇ ಹಂತ ಬಡಾವಣೆ – ಶ್ರೀಮತಿ. ಪವಿತ್ರ.ಆರ್,ಸ.ಅ., ಮೊಬೈಲ್ ನಂ.8197542740. ಉ) ವಲಯ ಕಛೇರಿ–5ಬಿ – ದೇವನೂರು 2ನೇ ಹಂತ 2ನೇ ಫೇಸ್ – ಶ್ರೀ. ಕೆ.ಪಿ.ಸತೀಶ್‌ಚಂದ್ರ, ಸ.ಅ., ಮೊಬೈಲ್ ನಂ..9480446452. ಊ) ವಲಯ ಕಛೇರಿ–6 – ಶಾಂತವೇರಿ ಗೋಪಾಲಗೌಡ ನಗರ, ಲಾಲ್ ಬಹದ್ದೂರ್‌ಶಾಸ್ತ್ರಿ ನಗರ, ಲಲಿತಾದ್ರಿನಗರ (ದಕ್ಷಿಣ) – ಶ್ರೀ. ರಾಜಶೇಖರ್.ಜಿ, ಕಿ.ಅ., ಮೊಬೈಲ್ ನಂ.9880929640, ಋ) ವಲಯ ಕಛೇರಿ–8 – ಸಾತಗಳ್ಳಿ 2ನೇ ಮತ್ತು ಹಂಚ್ಯಾ–ಸಾತಗಳ್ಳಿ 'ಬಿ' ವಲಯ ಬಡಾವಣೆ, ವಸಂತನಗರ – ಶ್ರೀಮತಿ. ಮೇಘನ, ಕಿ.ಅ., ಮೊಬೈಲ್ ನಂ.9480884440. 20) ಹರಾಜಿಗೆ ಸಂಬಂಧಿಸಿದ ಮಾಹಿತಿಯನ್ನು ದೂರವಾಣಿ ಸಂಖ್ಯೆ– 0821–2421629 ಅನ್ನು ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿರುತ್ತದೆ.

ಸಹಿ/– ಆಯುಕ್ತರು, ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು

DIPR/DDMYS/02/KSMCA/992/2025-26

ಗ್ಯಾರಂಟಿಗಳಿಗೆ ಬಳಸಲಾಗಿರುವ 25 ಸಾವಿರ ಕೋಟಿ ಹಣ ವಾಪಸ್ ಕೊಡಿ

ಮಾ.11, ದಸಂಸದಿಂದ ಬೆಂಗಳೂರು ಚಲೋ ಪ್ರತಿಭಟನೆ

ಮಡಿಕೇರಿ, ಫೆ.27– ರಾಜ್ಯದ ಗ್ಯಾರಂಟಿ ಯೋಜನೆಗಳಿಗೆ ಬಳಸಿಕೊಂಡಿರುವ ಪರಿಶಿಷ್ಟರು ಮತ್ತು ಗಿರಿಜನರಿಗೆ ಮೀಸಲಿಟ್ಟಿದ್ದ 25 ಸಾವಿರ ಕೋಟಿ ಹಣವನ್ನು ಹಿಂದಕ್ಕೆ ನೀಡುವುದರೊಂದಿಗೆ, ಪರಿಶಿಷ್ಟರ ಮೀಸಲು ಹಣದ ದುರ್ಬಳಕೆಗೆ ಅಗತ್ಯ ಕ್ರಮ ಕೈಗೊಳ್ಳುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಮಾ.11 ರಂದು ಪ್ರೊ.ಬಿ.ಕೃಷ್ಣಪ್ಪ ಸ್ಥಾಪಿತ ಕರ್ನಾಟಕ ದಲಿತ ಸಂಘರ್ಷ ಸಮಿತಿಯ ವತಿಯಿಂದ ಬೃಹತ್ ಬೆಂಗಳೂರು ಚಲೋ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ.



ಬೆಂಗಳೂರು ಚಲೋ ಪೋಸ್ಟರ್ ಬಿಡುಗಡೆ ಮಾಡಲಾಯಿತು.

ಸುದ್ದಿಗೋಷ್ಠಿಯಲ್ಲಿ ದಸಂಸ ಜಿಲ್ಲಾ ಸಂಚಾಲಕರಾದ ಗಾಯತ್ರಿ ನರಸಿಂಹ ಅವರು ಬೆಂಗಳೂರಿನ ಫ್ರೀಡಂ ಪಾರ್ಕಿನಲ್ಲಿ ನಡೆಯುವ ಬೃಹತ್ ಬೆಂಗಳೂರು ಚಲೋ ಪ್ರತಿಭಟನೆಯ ಭಿತ್ತಿಪತ್ರ ಬಿಡುಗಡೆಗೊಳಿಸಿ ಮಾತನಾಡಿ ಅಂದು ಬೆಳಗ್ಗೆ 11 ಗಂಟೆಗೆ ನಡೆಯುವ ಪ್ರತಿಭಟನೆಯಲ್ಲಿ ಜಿಲ್ಲೆಯ ದಸಂಸ ಪ್ರತಿನಿಧಿಗಳು ಕಾರ್ಯಕರ್ತರು ಪಾಲ್ಗೊಳ್ಳಲಿದ್ದಾರೆಂದು ತಿಳಿಸಿದರು.

ಪ್ರತಿಭಟನೆಯ ಮೂಲಕ ಪ್ರಮುಖವಾಗಿ ಪರಿಶಿಷ್ಟ ಜಾತಿ ಉಪ ಯೋಜನೆ ಮತ್ತು ಗಿರಿಜನ ಉಪ ಯೋಜನೆಗೆ ಶೇ.24.1ರಷ್ಟು ಅನುದಾನ ಮೀಸಲಿರಿಸಬೇಕು. ಯೋಜನೆಯ ಹಣದ ದುರ್ಬಳಕೆ ತಡೆಯಬೇಕೆಂದು ಒತ್ತಾಯಿಸಲಾಗುತ್ತಿದೆ ಎಂದರು.

ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿನ ನಿವೇಶನ ರಹಿತ ಕುಟುಂಬಗಳಿಗೆ ನಿವೇಶನಗಳನ್ನು ಹಂಚಿಕೆ ಮಾಡಲು ಸರ್ಕಾರ ಖರೀದಿಸುವ ಜಮೀನು ದರ ಅವೈಜ್ಞಾನಿಕವಾಗಿದೆ. ಈ ದರವನ್ನು ಪರಿಷ್ಕರಿಸಬೇಕು. ಖಾಲಿ ನಿವೇಶನ(ಖಾಲಿ ಜಾಗ) ಹೊಂದಿರುವ ವಸತಿ ಸೌಲಭ್ಯ ವಂಚಿತರಿಗೆ ವಸತಿ ಮಂಜೂರು ಮಾಡಬೇಕು ಹಾಗೂ ಕಟ್ಟಡ ನಿರ್ಮಾಣದ ಸಾಮಗ್ರಿಗಳ ದರ ಏರಿಕೆಯ ಪರಿಣಾಮ ವಸತಿ ನಿರ್ಮಾಣ ವೆಚ್ಚ ಕನಿಷ್ಟ 5 ಲಕ್ಷಕ್ಕೆ ಹೆಚ್ಚಿಸಬೇಕೆಂದು ಆಗ್ರಹಿಸಲಾಗುತ್ತದೆಂದು ತಿಳಿಸಿದರು.

ಕರ್ನಾಟಕ ರತ್ನ ಘೋಷಣೆಗೆ ಒತ್ತಾಯ: ಕರ್ನಾಟಕ ದಲಿತ ಸಂಘರ್ಷ ಸಮಿತಿ ಸಂಸ್ಥಾಪಕರಾದ ಪ್ರೊ.ಬಿ.ಕೃಷ್ಣಪ್ಪ ಅವರಿಗೆ ಸರ್ಕಾರ ಕರ್ನಾಟಕ ರತ್ನ ಪ್ರಶಸ್ತಿ ಘೋಷಣೆ ಮಾಡಬೇಕು ಹಾಗೂ ಅವರ ಜನ್ಮ ದಿನ ಜೂ.9 ಅನ್ನು ರಜಾರಹಿತ ದಿನವನ್ನಾಗಿ ಆಚರಣೆ ಮಾಡಬೇಕೆಂದು ತಿಳಿಸಿದರು.

ಗೋಷ್ಠಿಯಲ್ಲಿ ದಸಂಸ ಜಿಲ್ಲಾ ಸಂಘಟನಾ ಸಂಚಾಲಕ ಭೋಜ ಪಿ., ಮಡಿಕೇರಿ ತಾಲ್ಲೂಕು ಮಹಿಳಾ ಸಂಚಾಲಕರಾದ ಗೌರಮ್ಮ ಹೆಚ್.ಹೆಚ್, ಪೊನ್ನಂಪೇಟೆ ತಾಲೂಕು ಸಂಚಾಲಕ ಗಣೇಶ ಪಿ.ಜಿ., ಸದಸ್ಯರುಗಳಾದ ನಿತಿನ್ ಪಿ.ಪಿ ಮತ್ತು ಕಾವೇರಿ ಪಿ.ಕೆ. ಉಪಸ್ಥಿತರಿದ್ದರು.

ಯಾರಿಂದಲೂ ಸನಾತನ ಧರ್ಮ ನಾಶಪಡಿಸಲಾಗದು

ವಿರಾಜಪೇಟೆಯಲ್ಲಿ ಬೃಹತ್ ಶೋಭಾಯಾತ್ರೆ

ವಿರಾಜಪೇಟೆ, ಫೆ.27–ಹಿಂದೂ ಧರ್ಮವು ಸನಾತನ ಧರ್ಮವಾಗಿದ್ದು ಇದನ್ನು ಎಂದಿಗೂ ಯಾರಿಂದಲೂ ನಾಶಪಡಿಸಲು ಸಾಧ್ಯವಿಲ್ಲ ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಗೋ ಸೇವಾ ಪ್ರಮುಖ್ ಪ್ರವೀಣ್ ಸರಳಾಯ ತಿಳಿಸಿದರು.

ಪಟ್ಟಣದಲ್ಲಿ ಹಿಂದೂ ಸಂಗಮ ಪ್ರಯುಕ್ತದ ಬೃಹತ್ ಶೋಭಾಯಾತ್ರೆ ಮತ್ತು ನಡೆದ ಸಭಾ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದರು. ನಮ್ಮ ದೇಶದ ಸಂಸ್ಕೃತಿಯ ಮೇಲೆ ಆದೆಷ್ಟೋ ಪರಕೀಯರು ದಾಳಿ ನಡೆಸಿದರೂ ಈ ಧರ್ಮವನ್ನು ಎಂದಿಗೂ ನಾಶ ಮಾಡಲಾಗಲಿಲ್ಲ. ನಿತ್ಯ ನೂತನವಾದ ಧರ್ಮ ನಮ್ಮದು ಎಂದರು.

ಮೈಸೂರಿನ ಬೃಂದಾವನ ಆಸ್ಪತ್ರೆಯ ವೈದ್ಯರಾದ ಡಾ.ಮಾತಂಡ ಅಯ್ಯಪ್ಪ, ಹಿಂದೂ ಸಂಗಮ ಆಯೋಜನಾ ಸಮಿತಿ


ವಿರಾಜಪೇಟೆಯಲ್ಲಿ ಗುರುವಾರ ಬೃಹತ್ ಶೋಭಾಯತ್ರೆ ನಡೆಯಿತು.

ವಿರಾಜಪೇಟೆ ತಾಲೂಕು ಅಧ್ಯಕ್ಷ ಕುಪ್ಪಂಡ ರಾಜೀವ್ ಕಾರ್ಯಪ್ಪ, ಆಯೋಜನ ಸಮಿತಿಯ ತಾಲೂಕು ಉಪಾಧ್ಯಕ್ಷರಾದ ಡಾ.ಚೇಂದಿರ ಬೋಪಣ್ಣ ಮಾತನಾಡಿದರು.

ಸಭಾ ಕಾರ್ಯಕ್ರಮಕ್ಕೂ ಮೊದಲು ಪಟ್ಟಣದ ತೆಲುಗರ ಬೀದಿಯ ಮಾರಿಯಮ್ಮ ಗುಡಿಯಿಂದ ವಿವಿಧ ಸಾಂಸ್ಕೃತಿಕ ಕಲಾ ತಂಡಗಳಾದ ಉಮ್ಮತಾಟ್, ಭಜನೆ ಕುಣಿತ, ಹನುಮಂತನ ಸ್ತಬ್ದ ಚಿತ್ರ, ವಾದ್ಯಗೋಷ್ಠಿಯೊಂದಿಗೆ ಶೋಭಾಯಾತ್ರೆ ನಡೆಯಿತು. ಅದೇ ಸಮಯಕ್ಕೆ ಮೀನುಪೇಟೆ ಮುತ್ತಪ್ಪ ದೇವಾಲಯದಿಂದ ಒಂದು ತಂಡ, ಪಂಜರುಪೇಟೆ ಸರ್ವೋದಯ ಕಾಲೇಜಿನಿಂದ ಮತ್ತೊಂದು ತಂಡ ಸಮಾಗಮಗೊಂಡಿತು.

ಅಮ್ಮತ್ತಿ ಬಳಿ ಕಾರು ಹರಿದು ವ್ಯಕ್ತಿ ಸಾವು

ಮಡಿಕೇರಿ, ಫೆ.27– ಸ್ಕೂಟಿ ಡಿಕ್ಕಿಯಾಗಿ ರಸ್ತೆಗೆ ಬಿದ್ದ ವ್ಯಕ್ತಿಯ ಮೇಲೆ ಕಾರು ಹರಿದು ಪಾದಚಾರಿ ಸ್ಥಳದಲ್ಲೇ ಮೃತಪಟ್ಟ ಘಟನೆ ಸಿದ್ದಾಪುರ ಸಮೀಪದ ಅಮ್ಮತ್ತಿಯಲ್ಲಿ ನಡೆದಿದೆ. ಅಪಘಾತದಲ್ಲಿ ಬೈಕ್ ಸವಾರ ಗಂಭೀರ ಗಾಯಗೊಂಡಿದ್ದು ಚಿಕಿತ್ಸೆಗಾಗಿ ಮಡಿಕೇರಿ ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದೆ.

ಅಮ್ಮತ್ತಿ ಕಡೆಯಿಂದ ಕಾಲ್ನಡಿಗೆಯಲ್ಲಿ ಬರುತ್ತಿದ್ದ ವ್ಯಕ್ತಿಗೆ ಸ್ಕೂಟಿ ಡಿಕ್ಕಿ ಹೊಡೆದ ಪರಿಣಾಮ ಪಾದಚಾರಿ ರಸ್ತೆಗೆ ಬಿದ್ದಿದ್ದಾರೆ. ಇದೇ ವೇಳೆ ಹಿಂದಿನಿಂದ ಬಂದ ಕಾರೊಂದು ಪಾದಚಾರಿಯ ಮೇಲೆ ಹರಿದಿದ್ದು ಆತ ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ. ಇಲ್ಲಿನ ಆನಂದ ಪುರ ನಿವಾಸಿ ಏನೋಸ್ ಮನೋಹರ್ (ಮನು–43) ಎಂಬಾತನೇ ಮೃತ ವ್ಯಕ್ತಿ ಎಂದು ಗುರುತಿಸಲಾಗಿದೆ. ಗಂಭೀರ ಸ್ಥಿತಿಯಲ್ಲಿದ್ದ ಸ್ಕೂಟಿ ಸವಾರ ನೆಲ್ಯಹುದಿಕೇರಿಯ ಹಂಸ ಎಂಬಾತನನ್ನು ಮಡಿಕೇರಿಯ ಜಿಲ್ಲಾಸ್ಪತ್ರೆ ದಾಖಲಿಸಲಾಗಿದೆ. ಘಟನಾ ಸ್ಥಳಕ್ಕೆ ಸಿದ್ದಾಪುರ ಪೊಲೀಸರು ಆಗಮಿಸಿ ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ. ವಾಹನ ಡಿಕ್ಕಿ ಪಡಿಸಿ ಪರಾರಿಯಾದ ಕಾರನ್ನು ಪತ್ತೆ ಹಚ್ಚಲು ಪೊಲೀಸರು ಶೋಧ ಕಾರ್ಯ ಮುಂದುವರೆಸಿದ್ದಾರೆ.

ಭಾನುವಾರ ಮಡಿಕೇರಿಯಲ್ಲಿ ರೇಣುಕಾಚಾರ್ಯ ಜಯಂತಿ

ಮಡಿಕೇರಿ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ ಮಾ.1 ರಂದು ಬೆಳಗ್ಗೆ 11 ಗಂಟೆಗೆ ನಗರದ ಗಾಂಧಿ ಭವನದಲ್ಲಿ ಶ್ರೀ ರೇಣುಕಾಚಾರ್ಯ ಜಯಂತಿ ನಡೆಯಲಿದೆ. ಮುಖ್ಯ ಅತಿಥಿಗಳಾಗಿ ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್. ಭೋಜರಾಜು, ಶಾಸಕರಾದ ಡಾ.ಮಂತರ್ ಗೌಡ, ಎ.ಎಸ್. ಪೊನ್ನಣ್ಣ, ಸಂಸದರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಜಿಲ್ಲಾಧಿಕಾರಿ ಎಸ್.ಜೆ.ಸೋಮಶೇಖರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಎನ್.ಬಿಂದುಮಣಿ ಸೇರಿದಂತೆ ಇತರರು ಪಾಲ್ಗೊಳ್ಳಲಿದ್ದಾರೆ.

ದೇವಸ್ಥಾನದ ಮೇಲೆ ಬಿದ್ದ ಮರ ತೆರವುಗೊಳಿಸಿ

ವಿರಾಜಪೇಟೆ, ಫೆ.27– ಬುಧವಾರ ಮದ್ಯಾಹ್ನ ವಿರಾಜಪೇಟೆಯಲ್ಲಿ ಭಾರೀ ಮಳೆಯಿಂದಾಗಿ ಪಟ್ಟಣದ ತೆಲುಗರ ಬೀದಿಯಲ್ಲಿರುವ ಮಧುರೈ ವೀರನ್ ಸ್ವಾಮಿ ದೇವಸ್ಥಾನದ ಕಟ್ಟಡದ ಮೇಲೆ ಒಣಗಿದ ಬೀಟೆ ಮರ ಬಿದ್ದು ನಷ್ಟ ಸಂಭವಿಸಿದೆ.



ಮಳೆಯಿಂದ ದೇವಸ್ಥಾನದ ಮೇಲೆ ಬಿದ್ದಿರುವ ಮರ

ದೇವಸ್ಥಾನದ ಮೇಲ್ಚಾವಣೆ ಮತ್ತು ತಡೆಗೋಡೆಗೆ ಹಾನಿಯಾಗಿರುವ ಕಾರಣ ದೇವಸ್ಥಾನ ಆಡಳಿತ ಮಂಡಳಿಯ ಪದಾಧಿಕಾರಿಗಳು ನಷ್ಟವಾಗಿರುವ ಬಗ್ಗೆ ಹಾಗೂ ದೇವಸ್ಥಾನ ಕಟ್ಟಡದ ಮೇಲೆ ಬಿದ್ದಿರುವ ಮರವನ್ನು ತೆರವು ಗೊಳಿಸುವಂತೆ ಕೋರಿ ಕಂದಾಯ ಹಾಗೂ ಅರಣ್ಯ ಇಲಾಖೆಗೆ ಅರ್ಜಿ ಸಲ್ಲಿಸಿರುವುದಾಗಿ ಸಮಿತಿ ತಿಳಿಸಿದ್ದಾರೆ.

ನಾಳೆ ಕೆಲವೆಡೆ ವಿದ್ಯುತ್ ವ್ಯತ್ಯಯ

ಮಡಿಕೇರಿ, ಫೆ.27– ಭಾನುವಾರ (ಮಾ.1) ತುರ್ತು ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಬೆಳಗ್ಗೆ 10ರಿಂದ ಸಂಜೆ 5ರವರೆಗೆ ಹೊದ್ದೂರು, ಕಬಡಗೇರಿ, ಕೊಳಕೇರಿ, ಕುಂಜಿಲ, ಎಮ್ಮೆಮಾಡು, ನೆಲಜಿ, ಬಲ್ಲಮಾವಟಿ, ಪೆರೂರು, ನಾಪೋಕ್ಲು ಟೌನ್, ಕೊಟ್ಟಮುಡಿ, ಪಾಲೂರು, ಚೆರಿಯಪರಂಬು, ಹಳೆತಾಲೂಕು ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ಈ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ಸಾರ್ವಜನಿಕರು ಸಹಕರಿಸುವಂತೆ ಚಾವಿಸನಿನಿ ಕಾರ್ಯ ಮತ್ತು ಪಾಲನೆ ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್ ಅವರು ಕೋರಿದ್ದಾರೆ.

ಬೋಜಮ್ಮ ನಿಧನ



ನಾಪೋಕ್ಲು: ಇಲ್ಲಿಗೆ ಸಮೀಪದ ಸಣ್ಣ ಪುಲಿಕೋಟು ಗ್ರಾಮದ ನಿವಾಸಿ ಕುಯ್ಯಮುಡಿ ದಿ.ಚಂಗಪ್ಪನವರ ಪತ್ನಿ ಬೋಜಮ್ಮ (85) ಶುಕ್ರವಾರ ನಿಧನರಾದರು. ಮೃತರ ಅಂತ್ಯಕ್ರಿಯೆ ಸಣ್ಣ ಪುಲಿಕೋಟು ಗ್ರಾಮದಲ್ಲಿ ಶುಕ್ರವಾರ ಜರುಗಿತ್ತು. ಮೃತರು ನಾಲ್ವರು ಪುತ್ರಿಯರು ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ.

ಮಾ.4, ಶ್ರೀಜಗದ್ಗುರು ರೇಣುಕಾಚಾರ್ಯ ಜಯಂತಿ

ಮಂಡ್ಯ, ಫೆ.27– ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸರ್ವ ಬಣಜಿಗ (ಬಲಿಜ)ರ ಸಂಘ ಇವರ ಸಹಯೋಗದಲ್ಲಿ ಶ್ರೀಜಗದ್ಗುರು ರೇಣುಕಾಚಾರ್ಯ ಜಯಂತಿ ಮಾ.4ರಂದು ಬೆಳಗ್ಗೆ 11 ಗಂಟೆಗೆ ಗಾಂಧಿ ಭವನದಲ್ಲಿ ನಡೆಯಲಿದೆ.

ಕಾರ್ಯಕ್ರಮದಲ್ಲಿ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಉಪಸ್ಥಿತರಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಕಾರ್ಯಕ್ರಮ ಉದ್ಘಾಟಿಸುವರು. ಶಾಸಕ ಪಿ.ರವಿಕುಮಾರ್ ಅಧ್ಯಕ್ಷತೆ ವಹಿಸಲಿದ್ದು, ಶಾಸಕರಾದ ರಮೇಶ್‌ಬಾಬು, ಪಿ.ಎಂ.ನರೇಂದ್ರಸ್ವಾಮಿ, ದರ್ಶನ್ ಪುಟ್ಟಣ್ಣಯ್ಯ, ಹೆಚ್.ಟಿ ಮಂಜು, ಕೆ.ಎಂ ಉದಯ್, ರಾಜ್ಯ ಪ.ಜಾತಿ, ಪಂಗಡಗಳ ಆಯೋಗದ ಅಧ್ಯಕ್ಷ ಡಾ.ಮೂರ್ತಿ, ಎಂಎಲ್‌ಸಿಗಳಾದ ದಿನೇಶ್ ಗೂಳಿಗೌಡ, ಮಧು ಜಿ. ಮಾದೇಗೌಡ, ಕೆ.ವಿವೇಕಾನಂದ, ಮುಖಂಡರಾದ ಎಂ.ಎಸ್ ಆತ್ಮಾನಂದ, ಡಾ.ಹೆಚ್.ಕೃಷ್ಣ, ಮುಡಾ ಅಧ್ಯಕ್ಷ ಬಿ.ಪಿಪ್ರಕಾಶ್, ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ ಉಪಾಧ್ಯಕ್ಷ ವಿಜಯ ಲಕ್ಷ್ಮಿ ರಘುನಂದನ್, ಮೈಸೂರು ಸಕ್ಕರೆ ಕಂಪನಿ ನಿಯಮಿತ ಅಧ್ಯಕ್ಷರಾದ ಸಿ.ಡಿ ಗಂಗಾಧರ, ಕೈಮಗ್ಗ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಬಿ. ನಾಗೇಂದ್ರ ಕುಮಾರ್ ಭಾಗವಹಿಸಲಿದ್ದಾರೆ.

ಚಿನಕುರಳಿ ಬಿಜಿಎಸ್‌ನಲ್ಲಿ ವಿಜ್ಞಾನ ವಸ್ತು ಪ್ರದರ್ಶನ

ಚಿನಕುರಳಿ, ಫೆ.27–ಇಲ್ಲಿನ ಬಿಜಿಎಸ್ ಶಿಕ್ಷಣ ಸಂಸ್ಥೆಯಲ್ಲಿ ವಿಜ್ಞಾನ ದಿನದ ಅಂಗವಾಗಿ ಶುಕ್ರವಾರ ವಿದ್ಯಾರ್ಥಿಗಳಿಂದ ವಿಜ್ಞಾನ ವಸ್ತು ಪ್ರದರ್ಶನ ನಡೆಯಿತು.

ವಿಜ್ಞಾನ ವಸ್ತು ಪ್ರದರ್ಶನಕ್ಕೆ ಸಂಸ್ಥೆಯ ಕಾರ್ಯದರ್ಶಿ ಡಾ.ಜೆ.ಎನ್.ರಾಮಕೃಷ್ಣೇಗೌಡ ಚಾಲನೆ ನೀಡಿ, ಬಳಿಕ ಶಾಲೆಯಲ್ಲಿ ಮಕ್ಕಳು ತಯಾರಿಸಿಕೊಂಡು ಬಂದಿದ್ದ ವಿಜ್ಞಾನ ವಸ್ತು ಪ್ರದರ್ಶನದ ಮಾದರಿಯನ್ನು ವೀಕ್ಷಣೆ ಮಾಡಿ ಮಕ್ಕಳಿಂದ ಮಾಹಿತಿ ಪಡೆದರು.


ವಿಜ್ಞಾನ ವಸ್ತು ಪ್ರದರ್ಶನವನ್ನು ಸಂಸ್ಥೆ ಕಾರ್ಯದರ್ಶಿ ಡಾ.ಜೆ.ಎನ್.ರಾಮಕೃಷ್ಣೇಗೌಡ ಉದ್ಘಾಟಿಸಿದರು.

ವಿಜ್ಞಾನ ವಸ್ತು ಪ್ರದರ್ಶನದಲ್ಲಿ ಶಾಲೆಯ ಪ್ರೀಕೆಜಿ ಮಕ್ಕಳಿಂದ ಹಿಡಿದು 9ನೇ ತರಗತಿ ವರೆಗೆ 300ಕ್ಕೂ ಅಧಿಕ ವಿದ್ಯಾರ್ಥಿಗಳು ಭಾಗವಹಿಸಿದ್ದರು. ವಿಜ್ಞಾನ ವಸ್ತು ಪ್ರದರ್ಶನದಲ್ಲಿ ವಿಜ್ಞಾನ, ತಂತ್ರಜ್ಞಾನ, ಕೃಷಿ, ಮಾದರಿ ನಗರ, ವಿದ್ಯುತ್ ಉತ್ಪಾದನೆ, ಜಲಸಂರಕ್ಷಣೆ ಸೇರಿದಂತೆ ಹಲವು ಮಾದರಿಯನ್ನು ವಿದ್ಯಾರ್ಥಿಗಳು ಪ್ರದರ್ಶಿಸಿದರು.

ಸಂಸ್ಥೆ ಕಾರ್ಯದರ್ಶಿ ಡಾ.ಜೆ.ಎನ್.ರಾಮಕೃಷ್ಣೇಗೌಡ ಮಾತನಾಡಿ, ಮಕ್ಕಳಿಗೆ ಚಿಕ್ಕ ವಯಸ್ಸಿನಿಂದಲೇ ವಿಜ್ಞಾನದ ಬಗ್ಗೆ ಅರಿವು ಮೂಡಿಸುವ ಉದ್ದೇಶದಿಂದ ನಮ್ಮ ಶಾಲೆಗಳಲ್ಲಿ ಪ್ರತಿ ವರ್ಷ ವಿಜ್ಞಾನ ವಸ್ತು ಪ್ರದರ್ಶನವನ್ನು ಆಯೋಜನೆ ಮಾಡಿಕೊಂಡು ಬರಲಾಗುತ್ತಿದೆ. ಇಂತಹ ಕಾರ್ಯಕ್ರಮಗಳಿಂದ ಮಕ್ಕಳಿಗೆ ವಿಜ್ಞಾನದ ಬಗ್ಗೆ ಅರಿವು ಮೂಡಲಿದೆ. ಮುಂದೆ ನಮ್ಮ ಮಕ್ಕಳು ದೊಡ್ಡ ವಿಜ್ಞಾನಿಗಳಾಗಬಹುದು. ಇಲ್ಲ ಅವರಲ್ಲಿ ವಿಜ್ಞಾನದ ಬಗ್ಗೆ ಹೆಚ್ಚಿನ ಆಸಕ್ತಿ ಮೂಡಬಹುದಾಗಿದೆ. ಮಕ್ಕಳು ಮಾಡಿಕೊಂಡು ಬಂದಿರುವ ವಿಜ್ಞಾನದ ಮಾದರಿಗಳನ್ನು ನೋಡಿದರೆ ಆಶ್ಚರ್ಯವಾಗುತ್ತದೆ ಎಂದರು.

ನಮ್ಮ ಎಲ್ಲಾ ಬಿಜಿಎಸ್ ಶಾಲೆಗಳಲ್ಲೂ ಪ್ರತಿ ವರ್ಷ ವಿಜ್ಞಾನ ವಸ್ತು ಪ್ರದರ್ಶನ ಮಾಡಲಾಗುತ್ತಿದೆ. ಪೋಷಕರು ಹಾಗೂ ಶಿಕ್ಷಕರ ಸಹಕಾರದಿಂದ ಕಾರ್ಯಕ್ರಮ ಯಶಸ್ವಿಯಾಗಿದೆ. ಇಂತಹ ಕಾರ್ಯಕ್ರಮಗಳನ್ನು ನಡೆಸುವುದರಿಂದ ಮಕ್ಕಳಿಗೆ ಆತ್ಮಸ್ಥೈರ್ಯ ತುಂಬಿದಂತಾಗುತ್ತದೆ. ಮುಂದಿನ ದಿನಗಳಲ್ಲಿ ಮಕ್ಕಳ ಜೀವನದ ವೈಜ್ಞಾನಿಕವಾದ ರೂಪುರೇಷೆಗಳನ್ನು ಪಡೆದು ಶೈಕ್ಷಣಿಕ ಗುಣಮಟ್ಟ ಕಾಪಾಡಿಕೊಳ್ಳಲೆಂದು ತಿಳಿಸಿದರು.

ವಿಎಸ್‌ಎಸ್‌ಎನ್‌ಬಿ ಅಧ್ಯಕ್ಷ ಸಿ.ಎಸ್.ಗೋಪಾಲಗೌಡ, ಗ್ರಾಪಂ ಮಾಜಿ ಸದಸ್ಯ ಸಿ.ಡಿ.ಮಹದೇವು, ಕಿಸಾನ್ ಕಾಂಗ್ರೆಸ್ ಅಧ್ಯಕ್ಷ ಸಿ.ಆರ್.ರಮೇಶ್, ಪ್ರಗತಿ ಸೇವಾ ಟ್ರಸ್ಟ್ ಅಧ್ಯಕ್ಷ ನಾಗೇಶ್, ಮುಖಂಡ ಮಂಜುನಾಥ್, ಪ್ರಾಂಶುಪಾಲ ಚಿದಂಬರ್ ಸೇರಿದಂತೆ ಶಿಕ್ಷಕರು, ಸಿಬ್ಬಂದಿಗಳು ಹಾಜರಿದ್ದರು.

ಈಜಲು ಹೋದ ವಿದ್ಯಾರ್ಥಿ ನೀರು ಪಾಲು

ಶ್ರೀರಂಗಪಟ್ಟಣ, ಫೆ.27– ಕಾವೇರಿ ನದಿಯಲ್ಲಿ ಈಜಲು ಹೋದ ವಿದ್ಯಾರ್ಥಿಯೋರ್ವ ನೀರಿನಲ್ಲಿ ಮುಳುಗಿ ಸಾವನ್ನಪ್ಪಿರುವ ಘಟನೆ ತಾಲೂಕಿನ ಪ್ರಸಿದ್ಧ ಪ್ರವಾಸಿ ತಾಣ ಬಲಮುರಿಯಲ್ಲಿ ಶುಕ್ರವಾರ ಸಂಜೆ ನಡೆದಿದೆ.



ದಾವಣಗೆರೆ ನಿವಾಸಿ ನಿಸಾರ್ ಅಹಮ್ಮದ್ ಅವರ ಪುತ್ರ ಹಾಗೂ ಅಲ್ಲಿನ ಸರ್ಕಾರಿ ಕಾಲೇಜಿನ ವಿದ್ಯಾರ್ಥಿ ಜವೀದ್(22) ಸಾವನ್ನಪ್ಪಿದ ವಿದ್ಯಾರ್ಥಿ. ಈತ ತನ್ನ ಸಹಪಾಠಿಗಳೊಂದಿಗೆ ಪ್ರವಾಸಕ್ಕೆ ಆಗಮಿಸಿದ್ದ ಎನ್ನಲಾಗಿದೆ. ಶ್ರೀರಂಗಪಟ್ಟಣದ ಐತಿಹಾಸಿಕ ತಾಣಗಳನ್ನು ವೀಕ್ಷಿಸಿ ಅಂತಿಮವಾಗಿ ಬಲಮುರಿಗೆ ಸ್ನೇಹಿತರೊಂದಿಗೆ ಆಗಮಿಸಿದ್ದ ಜಾವೀದ್ ಕಾವೇರಿ ನದಿಯಲ್ಲಿ ಈಜಲು ಹೋಗಿ ನೀರಿನಲ್ಲಿ ಮುಳುಗಿದ್ದಾರೆ. ಈ ವೇಳೆ ಸ್ನೇಹಿತರು ಆತನ ರಕ್ಷಿಸಲು ಮುಂದಾ ದರೂ ನೀರಿನ ಸೆಳೆತ ಹೆಚ್ಚಾಗಿದ್ದರಿಂದ ಸಾಧ್ಯವಾಗಲಿಲ್ಲ.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಸ್ಥಳೀಯ ನುರಿತ ಈಜುಗಾರರ ತಂಡ ಹಾಗೂ ಅಗ್ನಿಶಾಮಕ ದಳದ ಸಿಬ್ಬಂದಿ ಕಾವೇರಿ ನದಿಯಿಂದ ಜಾವೇದ್ ಶವವನ್ನು ಹೊರ ತೆಗೆದಿದ್ದಾರೆ. ಕೆಆರ್‌ಎಸ್ ಠಾಣೆ ಪೊಲೀಸರು ಸ್ಥಳಕ್ಕಾಗಮಿಸಿ ಪರಿಶೀಲನೆ ನಡೆಸಿ ಶವವನ್ನು ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ರವಾನಿಸಿದರು. ಈ ಸಂಬಂಧ ಕೆಆರ್‌ಎಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪ್ರಸಿದ್ಧ ಪ್ರವಾಸಿ ತಾಣಗಳಾದ ಎಡಮುರಿ, ಬಲಮುರಿಯಲ್ಲಿ ಕಾವೇರಿ ಒಳಹರಿವು ಅಪಾಯಕಾರಿಯಾಗಿದ್ದರೂ, ಪ್ರವಾಸಿಗರು ಇಲ್ಲಿ ಅಳವಡಿಸಿರುವ ಎಚ್ಚರಿಕೆ ಫಲಕಗಳನ್ನು ನಿರ್ಲಕ್ಷಿಸಿ ನೀರಿಗಿಳಿಯುತ್ತಿರುವುದು ಇಂತಹ ಅವಘಡಗಳಿಗೆ ಕಾರಣವಾಗುತ್ತಿದೆ. ಹೀಗಾಗಿ ಈ ಬಗ್ಗೆ ಜಿಲ್ಲಾಡಳಿತ, ತಾಲೂಕು ಆಡಳಿತ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಸ್ಥಳೀಯ ನಿವಾಸಿಗಳು ಒತ್ತಾಯಿಸಿದ್ದಾರೆ.

ಮಾನಸಿಕ ಖಿನ್ನತೆಗೆ ಒಳಗಾಗಿದ್ದ ವೈದ್ಯ ಆತ್ಮಹತ್ಯೆ

ಮಂಡ್ಯ, ಫೆ.27– ಕೌಟುಂಬಿಕ ಕಲಹದ ಹಿನ್ನೆಲೆಯಲ್ಲಿ ಮಾನಸಿಕ ಖಿನ್ನತೆಗೆ ಒಳಗಾಗಿದ್ದ ವೈದ್ಯರೊಬ್ಬರು ಮಾತ್ರೆ ಸೇವಿಸಿ ಆತ್ಮಹತ್ಯೆಗೆ ಶರಣಾಗಿರುವ ಘಟನೆ ನಗರದ ಹರಿಪ್ರಿಯ ಹೋಟೇಲ್‌ನಲ್ಲಿ ಶುಕ್ರವಾರ ನಡೆದಿದೆ.

ಮೂಲತಃ ಕೆ.ಆರ್.ನಗರ ಮೂಲದ ಸುಖದೇವ್(53) ಆತ್ಮಹತ್ಯೆಗೆ ಶರಣಾದ ವೈದ್ಯ. ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಇವರು ಶುಕ್ರವಾರ ನಗರದ ಹರಿಪ್ರಿಯ ಹೋಟೇಲ್‌ನಲ್ಲಿ ರೂಂ ಪಡೆದು ವಿಶ್ರಾಂತಿ ಪಡೆಯುತ್ತಿದ್ದರು. ಹೋಟೇಲ್ ರೂಂನಲ್ಲಿ ಸುಖದೇವ್ ಅವರು ಮದ್ಯ ಸೇವನೆ ಮಾಡಿದ್ದು, ಇದೇ ವೇಳೆ 30 ಮಾತ್ರೆಗಳನ್ನು ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎನ್ನಲಾಗಿದೆ. ಈ ವೇಳೆ ಕೊಠಡಿಗೆ ತೆರಳಿದ್ದ ರೂಂ ಬಾಯ್ ಸುಖದೇವ್ ಸಾವನ್ನಪ್ಪಿರುವುದನ್ನು ಕಂಡು ತಕ್ಷಣ ಪೊಲೀಸರಿಗೆ ತಿಳಿಸಿದ್ದಾರೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಪೊಲೀಸರು ಪರಿಶೀಲನೆ ನಡೆಸಿ ಮರಣೋತ್ತರ ಪರೀಕ್ಷೆಗಾಗಿ ಶವವನ್ನು ಮಿಮ್ಸ್ ಶವಾಗಾರಕ್ಕೆ ರವಾನಿಸಿದರು. ಈ ಸಂಬಂಧ ಪಶ್ಚಿಮ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.


ದೇವಾಲಯ ಲೋಕಾರ್ಪಣೆ ಅಂಗವಾಗಿ ದೇವರಿಗೆ ವಿಶೇಷವಾಗಿ ಅಲಂಕರಿಸಲಾಗಿತ್ತು.

ಆಲೂರಿನಲ್ಲಿ ಬೀರೇಶ್ವರ ದೇಗುಲ ಲೋಕಾರ್ಪಣೆ

ಮದ್ದೂರು, ಫೆ.27– ತಾಲೂಕಿನ ಆಲೂರು ಗ್ರಾಮದಲ್ಲಿ ಜೀರ್ಣೋದ್ಧಾರಗೊಂಡ ಶ್ರೀಬೀರೇಶ್ವರ ದೇವಾಲಯವನ್ನು ಲೋಕಾರ್ಪಣೆ ಗೊಳಿಸಲಾಯಿತು.

ಧಾರ್ಮಿಕ ಕಾರ್ಯಕ್ರಮಗಳ ಅಂಗವಾಗಿ ಮುಂಜಾನೆಯಿಂದಲೇ ನೂತನ ರಾಜಗೋಪುರ, ವಿಮಾನ ಗೋಪುರಗಳ ಕಳಸ ಪ್ರತಿಷ್ಠಾಪನೆ, ಶ್ರೀಚಿಕ್ಕಮ್ಮ ತಾಯಿ ಹಾಗೂ ಶ್ರೀಕಾಳಮ್ಮ ತಾಯಿ, ಶ್ರೀಗಣಪತಿ, ಶ್ರೀನಂದಿ, ನವಗ್ರಹಗಳ ಪ್ರತಿಷ್ಠಾಪನೆ ಹಾಗೂ ಕುಂಭಾಭಿಷೇಕ, ಹೋಮ ಹವನ ನಡೆದವು. ನಂತರ ದೇವರಿಗೆ ಅಭಿಷೇಕ, ಮಹಾ ಮಂಗಳಾರತಿ ಮಾಡಿ ಭಕ್ತರಿಗೆ ಪ್ರಸಾದ ವಿನಿಯೋಗ ಮಾಡಲಾಯಿತು. ಬೆಳಗ್ಗೆ 9ರಿಂದ ಸಂಜೆವರೆಗೆ ದೇವಸ್ಥಾನದ ಆವರಣದಲ್ಲಿ ಸಾವಿರಾರು ಭಕ್ತರಿಗೆ ಅನ್ನ ಸಂತರ್ಪಣೆ ಹಮ್ಮಿಕೊಳ್ಳಲಾಗಿತ್ತು.

ನಂಜನಗೂಡು ನಂಜುಂಡೇಶ್ವರ ದೇವಾಲಯದ ಪ್ರಧಾನ ಅರ್ಚಕ ನಾಗಚಂದ್ರ ದೀಕ್ಷಿತ್ ಧಾರ್ಮಿಕ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು. ಈ ವೇಳೆ ಶಾಸಕ ಕೆ.ಎಂ.ಉದಯ್, ಮಾಜಿ ಸಚಿವ ಹೆಚ್.ಎಂ.ರೇವಣ್ಣ ಕಾಗಿನೆಲೆ ಹೊಸ ದುರ್ಗ ಶಾಖಾ ಮಠದ ಶ್ರೀಈಶ್ವರಾನಂದಪುರಿ ಸ್ವಾಮೀಜಿ, ಎಂಎಲ್‌ಸಿ ಮಧು ಜಿ.ಮಾದೇಗೌಡ ಸೇರಿದಂತೆ ಗಣ್ಯರು ಆಗಮಿಸಿ ದೇವರ ದರ್ಶನ ಪಡೆದರು. ಅಲ್ಲದೇ ಸಾವಿರಾರು ಭಕ್ತರು ಆಗಮಿಸಿದ್ದರು.

ಗ್ರಾಮದ ಯಜಮಾನರಾದ ಚೇತನ್, ನಾಗೇಂದ್ರ, ಶ್ರೀಧರ್, ಮಧು ಹೆಗಡೆ, ಸೋಮಶೇಖರ್, ಬೀರಯ್ಯ, ರಾಮಣ್ಣ, ಭರತ್, ಕಾರ್ತಿಕ್, ಮಹದೇವು, ಪೂಜಾರಿಗಳಾದ ಶಿವಬೀರಯ್ಯ, ಬೀರೇಶ್, ಬೀರೇಶ್ ಆಲೂರು, ಬೀರೇಶ್ ಎಲೆಕೆರೆ, ಮುಖಂಡರಾದ ದಿನೇಶ್, ಸುಪ್ರೀತ್ ಸೇರಿದಂತೆ ಹಲವರಿದ್ದರು.

ಅಶೋಕ್ ನಿಧನ



ಕೆ.ಆರ್.ಪೇಟೆ, ಫೆ.27– ತಾಲೂಕಿನ ಅಗ್ರಹಾರಬಾಚಹಳ್ಳಿ ಗ್ರಾಪಂ ಸದಸ್ಯರಾದ ಶಶಿರೇಖಾ ಅವರ ಪತಿ ಅಶೋಕ್ (46) ಶುಕ್ರವಾರ ಸ್ವಗ್ರಾಮ ವಳಗೆರೆಮೆಣಸ ಗ್ರಾಮದಲ್ಲಿ ನಿಧನರಾದರು. ಮೃತರು ಪತ್ನಿ ಶಶಿರೇಖಾ, ಇಬ್ಬರು ಪುತ್ರಿಯರು, ತಂದೆ, ತಾಯಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಫೆ.28 ರಂದು ಬೆಳಗ್ಗೆ 11 ಗಂಟೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಇಂದಿನಿಂದ ದ್ವಿತೀಯ ಪಿಯುಸಿ ಪರೀಕ್ಷೆ

ಚಾಮರಾಜನಗರ, ಫೆ.27– ದ್ವಿತೀಯ ಪಿಯುಸಿ ಪರೀಕ್ಷೆಗಳು ಫೆ.28ರಿಂದ ಮಾ.17ರವರೆಗೆ ನಡೆಯಲಿದ್ದು, ಇದಕ್ಕಾಗಿ ಸಕಲ ಸಿದ್ದತೆ ಮಾಡಲಾಗಿದೆ ಎಂದು ಜಿಲ್ಲಾಧಿಕಾರಿ ಶ್ರೀರೂಪ ತಿಳಿಸಿದ್ದಾರೆ.

ಜಿಲ್ಲೆಯಲ್ಲಿ ಒಟ್ಟು 6285 ಹೊಸ ವಿದ್ಯಾರ್ಥಿಗಳು, 150 ಖಾಸಗಿ ವಿದ್ಯಾರ್ಥಿಗಳು ಹಾಗೂ 474 ಪುನರಾವರ್ತಿತ ವಿದ್ಯಾರ್ಥಿಗಳು ಸೇರಿದಂತೆ ಒಟ್ಟು 6909 ಪರೀಕ್ಷಾರ್ಥಿಗಳು ಹಾಜರಾಗಲಿದ್ದಾರೆ. ಜಿಲ್ಲೆಯಲ್ಲಿ ಒಟ್ಟು 17 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ.

ಪರೀಕ್ಷಾ ದಿನಗಳಂದು ಪರೀಕ್ಷೆ ಬರೆಯುವ ವಿದ್ಯಾರ್ಥಿಗಳು ತಮ್ಮ ಪರೀಕ್ಷಾ ಪ್ರವೇಶ ಪತ್ರ (ಹಾಲ್ ಟಿಕೆಟ್) ತೋರಿಸಿ ತಮ್ಮ ಗ್ರಾಮಗಳಿಂದ ಪರೀಕ್ಷಾ ಕೇಂದ್ರಗಳಿಗೆ ಕೆಎಸ್‌ಆರ್‌ಟಿಸಿ ಬಸ್ಸುಗಳಲ್ಲಿ ಉಚಿತವಾಗಿ ಪ್ರಯಾಣಿಸಲು ಅವಕಾಶ ಕಲ್ಪಿಸಲಾಗಿದೆ. ಸಂಚರಿಸುವ ಮಾರ್ಗದಲ್ಲಿ ಪರೀಕ್ಷಾ ಕೇಂದ್ರವಿದ್ದರೆ ಕೋರಿಕೆಯ ಮೇರೆಗೆ ಬಸ್ ನಿಲುಗಡೆ ಮಾಡಲು ಕೆಎಸ್‌ಆರ್‌ಟಿಸಿ ಅಧಿಕಾರಿಗಳಿಗೆ ಸೂಚಿಸಲಾಗಿದೆ.

ಪರೀಕ್ಷೆ ನಡೆಯುವ ಸಮಯದಲ್ಲಿ ಹಾಗೂ ವಿದ್ಯಾರ್ಥಿಗಳಿಗೆ ಓದುವ ಸಮಯದಲ್ಲಿ ತೊಂದರೆಯಾಗದಂತೆ ನಿರಂತರ ವಿದ್ಯುತ್ ಪೂರೈಸಲು ಸೆಸ್ಕ್ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ.



ಪರೀಕ್ಷಾ ಕೇಂದ್ರದ ಸುತ್ತಲಿನ 200 ಮೀ. ವ್ಯಾಪ್ತಿಯನ್ನು ನಿಷೇಧಿತ ಪ್ರದೇಶವೆಂದು ಘೋಷಿಸಲಾಗಿದೆ. ಪರೀಕ್ಷಾ ಪಾವಿತ್ರತೆಯನ್ನು ಕಾಪಾಡುವ ದೃಷ್ಟಿಯಿಂದ ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿ ಸಿಸಿ ಟಿವಿ ಕ್ಯಾಮರಾಗಳನ್ನು ಅಳವಡಿಸಲಾಗಿದ್ದು, ಸಂಪೂರ್ಣ ಪರೀಕ್ಷಾ ಪ್ರಕ್ರಿಯೆಯು ಸಿ.ಸಿ. ಟಿವಿ. ಕಣ್ಗಾವಲಿನಲ್ಲಿ ನಡೆಯಲಿದೆ. ಜಿಲ್ಲಾ ಹಂತದಲ್ಲಿ ಇದನ್ನು ವೀಕ್ಷಿಸಲು ಪ್ರತ್ಯೇಕ ತಂಡವನ್ನು ರಚಿಸಲಾಗಿದೆ. ಪರೀಕ್ಷಾ ಸಂದರ್ಭದಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ಹರಡಬಹುದಾದ ಸುಳ್ಳು ಸುದ್ದಿ, ವದಂತಿಗಳಿಗೆ ವಿದ್ಯಾರ್ಥಿಗಳು ಹಾಗೂ ಪೋಷಕರು ಕಿವಿಗೊಡಬಾರದು. ಪರೀಕ್ಷಾ ಪಾವಿತ್ರತೆ ಕಾಪಾಡಲು ಎಲ್ಲಾ ಕೇಂದ್ರಗಳ ಮುಖ್ಯಸ್ಥರು ಹಾಗೂ ಪ್ರಾಂಶುಪಾಲರಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ.

ಪ್ರೊ.ನಂಜುಂಡಸ್ವಾಮಿ ಸ್ಮಾರಕಕ್ಕೆ ಜಿಲ್ಲಾಧಿಕಾರಿ ಭೇಟಿ

ಚಾಮರಾಜನಗರ, ಫೆ.27– ಜಿಲ್ಲಾಧಿಕಾರಿ ಶ್ರೀರೂಪ ಅವರು ಗುರುವಾರ ಚಾಮರಾಜನಗರ ತಾಲೂಕಿನ ಹೊಂಡರಬಾಳು ಅಮೃತ ಭೂಮಿಯಲ್ಲಿರುವ ಪ್ರೊ.ನಂಜುಂಡಸ್ವಾಮಿ ಅವರ ಸ್ಮಾರಕಕ್ಕೆ ಭೇಟಿ ನೀಡಿ, ಸಾವಯವ ಮತ್ತು ಸಹಜ ಕೃಷಿ ಚಟುವಟಿಕೆಗಳನ್ನು ಪರಿಶೀಲಿಸಿದರು.

ಸ್ಥಳೀಯ ಸಂಪನ್ಮೂಲಾಧಾರಿತ ರಾಸಾಯನಿಕ ಮುಕ್ತ ಬೇಸಾಯ, ಮಣ್ಣಿನ ಆರೋಗ್ಯ, ಬೀಜ ಸಂರಕ್ಷಣೆ ಹಾಗೂ ಪರಿಸರ ಸ್ನೇಹಿ ಕೃಷಿ ವಿಧಾನಗಳಿಗೆ ಒತ್ತು ನೀಡಿರುವ ಬಗ್ಗೆ ಮಾಹಿತಿ ಪಡೆದರು.

ಇದೇ ಸಂದರ್ಭದಲ್ಲಿ ಸ್ಥಳೀಯವಾಗಿ ಉತ್ಪಾದನೆಯಾಗುವ ಸಾವಯವ ಉತ್ಪನ್ನಗಳ ಮೌಲ್ಯವರ್ಧನೆಗಾಗಿ ಸ್ಥಾಪಿಸಿರುವ ಆಹಾರ ಸಂಸ್ಕರಣ ಘಟಕವನ್ನು (Food Processing Unit) ಜಿಲ್ಲಾಧಿಕಾರಿ ವೀಕ್ಷಿಸಿದರು. ವಿವಿಧ ತೋಟಗಳಲ್ಲಿ ಬೆಳೆಯುತ್ತಿರುವ ತರಕಾರಿ ಹಾಗೂ ಹಸಿರು ಸೊಪ್ಪಿನ ಗುಣಮಟ್ಟವನ್ನು ಪರಿಶೀಲಿಸಿದರು.


ಹಸಿರು ಸೊಪ್ಪಿನ ಗುಣಮಟ್ಟ ಪರಿಶೀಲಿಸುತ್ತಿರುವ ಜಿಲ್ಲಾಧಿಕಾರಿ.

ರೈತ ಮುಖಂಡರಾದ ಹೊನ್ನೂರು ಪ್ರಕಾಶ್ ಅವರು ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿಯವರಿಗೆ ಮಾಹಿತಿ ನೀಡಿದರು.

ಉದ್ಯೋಗ ಮೇಳದಲ್ಲಿ ನೇಮಕಾತಿ ಪತ್ರ ವಿತರಣೆ

193 ಅಭ್ಯರ್ಥಿಗಳಿಗೆ ಉದ್ಯೋಗ, 480 ಮಂದಿಗೆ 2 ಹಂತದ ಸಂದರ್ಶನಕ್ಕೆ ಆಯ್ಕೆ

ಚಾಮರಾಜನಗರ, ಫೆ.27– ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಸಂಜೀವಿನಿ–ಕರ್ನಾಟಕ ಗ್ರಾಮೀಣ ಜೀವನೋಪಾಯ ಸಂವರ್ಧನಾ ಸಂಸ್ಥೆ, ಇನ್ನಿತರ ಇಲಾಖೆ, ನಿಗಮ ಆಶ್ರಯದಲ್ಲಿ ದೀನ್ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆಯಡಿ ಜಿಲ್ಲಾ ಕೇಂದ್ರದಲ್ಲಿಂದು ಆಯೋಜಿಸಲಾಗಿದ್ದ ಜಿಲ್ಲಾ ಮಟ್ಟದ ಉದ್ಯೋಗ ಮೇಳದಲ್ಲಿ ಉದ್ಯೋಗಕ್ಕೆ ಆಯ್ಕೆಯಾದ ಅಭ್ಯರ್ಥಿಗಳಿಗೆ ಲೋಕಸಭಾ ಸದಸ್ಯರಾದ ಸುನೀಲ್ ಬೋಸ್ ಉದ್ಯೋಗ ನೇಮಕಾತಿ ಪತ್ರ ವಿತರಿಸಿದರು.


ಅಭ್ಯರ್ಥಿಗಳಿಗೆ ಸಂಸದ ಸುನೀಲ್ ಬೋಸ್ ಅವರು ನೇಮಕ ಪತ್ರ ನೀಡುತ್ತಿರುವುದು.

ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿಂದು ಲೋಕಸಭಾ ಸದಸ್ಯರಾದ ಸುನೀಲ್ ಬೋಸ್ ಅವರು ಉದ್ಯೋಗ ಮೇಳದಲ್ಲಿ ಪಾಲ್ಗೊಂಡು ಸ್ಥಳದಲ್ಲಿಯೇ ಉದ್ಯೋಗಕ್ಕೆ ಆಯ್ಕೆಗೊಂಡ ಅಭ್ಯರ್ಥಿಗಳಿಗೆ ಉದ್ಯೋಗ ನೇಮಕ ಪತ್ರ ನೀಡಿ ಶುಭ ಹಾರೈಸಿದರು.

ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ಹೆಚ್.ವಿ. ಚಂದ್ರು, ಚೂಡಾ ಅಧ್ಯಕ್ಷರಾದ ಮಹಮ್ಮದ್ ಅಸ್ಗರ್ ಮುನ್ನಾ, ಜಿಲ್ಲಾಧಿಕಾರಿ ಶ್ರೀರೂಪ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್, ಹೆಚ್ಚುವರಿ ಜಿಲ್ಲಾಧಿಕಾರಿ ಟಿ.ಜವರೇಗೌಡ, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಎನ್. ಶಶಿಧರ್, ಉಪವಿಭಾಗಾಧಿಕಾರಿ ದಿನೇಶ್ ಕುಮಾರ್ ಮೀನಾ, ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಶೃತಿ. ಡಿ.ಸಿ, ಗ್ಯಾರಂಟಿ ಯೋಜನೆಯ ತಾಲೂಕು ಅಧ್ಯಕ್ಷರಾದ ಸೋಮೇಶ್ವರ, ಇತರರು ಈ ಸಂದರ್ಭದಲ್ಲಿ ಇದ್ದರು.

ಇಂದು ನಡೆದ ಉದ್ಯೋಗ ಮೇಳಕ್ಕೆ ಆನ್‌ಲೈನ್‌ನಲ್ಲಿ 668, ಆಫ್‌ಲೈನ್‌ನಲ್ಲಿ 602 ಅಭ್ಯರ್ಥಿಗಳು ಸೇರಿದಂತೆ ಒಟ್ಟು 1290 ಅಭ್ಯರ್ಥಿಗಳು ನೋಂದಣಿಯಾಗಿದ್ದರು. ಇವರಲ್ಲಿ 495 ಪುರುಷರು, 790 ಮಹಿಳೆಯರು ಸೇರಿದ್ದಾರೆ. ಉದ್ಯೋಗ ಮೇಳದಲ್ಲಿ 101 ಉದ್ಯೋಗದಾತ ಕಂಪನಿಗಳು ಭಾಗವಹಿಸಿದ್ದವು. 85 ಪುರುಷರು, 108 ಮಹಿಳೆಯರು ಸೇರಿದಂತೆ ಒಟ್ಟು 193 ಅಭ್ಯರ್ಥಿಗಳು ಸ್ಥಳದಲ್ಲಿಯೇ ಉದ್ಯೋಗಕ್ಕೆ ಆಯ್ಕೆಯಾಗಿದ್ದಾರೆ.

190 ಪುರುಷರು, 290 ಮಹಿಳೆಯರು ಸೇರಿದಂತೆ ಒಟ್ಟು 480 ಅಭ್ಯರ್ಥಿಗಳು ಉದ್ಯೋಗಕ್ಕಾಗಿ 2ನೇ ಹಂತದ (ಶಾರ್ಟ್‌ಲಿಸ್ಟ್) ಸಂದರ್ಶನಕ್ಕೆ ಆಯ್ಕೆಯಾಗಿದ್ದಾರೆ. ಇಂದು ಬೆಳಿಗ್ಗೆ ಜೆ.ಹೆಚ್.ಪಟೇಲ್ ಸಭಾಂಗಣದಲ್ಲಿ ಜಿಲ್ಲಾಮಟ್ಟದ ಉದ್ಯೋಗ ಮೇಳವನ್ನು ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ಹೆಚ್.ವಿ.ಚಂದ್ರು ಅವರು ಉದ್ಘಾಟಿಸಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಜಿಲ್ಲಾ ಪಂಚಾಯತ್ ಸಿಇಓ ಮೋನಾ ರೋತ್ ಅವರು ಯುವ ಜನರಿಗೆ ಉದ್ಯೋಗ ಪಡೆಯಲು ನೆರವಾಗುವ ಉದ್ದೇಶದಿಂದ ಕಳೆದ ವರ್ಷವು ಉದ್ಯೋಗ ಮೇಳ ಆಯೋಜಿಸಲಾಗಿತ್ತು. ಅಂದಿನ ಉದ್ಯೋಗ ಮೇಳದಲ್ಲಿ 500ಕ್ಕೂ ಹೆಚ್ಚು ಜನರಿಗೆ ಉದ್ಯೋಗ ಲಭಿಸಿತ್ತು. ಈ ಬಾರಿ 100ಕ್ಕೂ ಹೆಚ್ಚು ಕಂಪನಿಗಳು ಉದ್ಯೋಗ ಮೇಳದಲ್ಲಿ ಪಾಲ್ಗೊಂಡಿವೆ. ಕಳೆದ ಬಾರಿಗಿಂತಲೂ ಹೆಚ್ಚು ಅಭ್ಯರ್ಥಿಗಳಿಗೆ ಉದ್ಯೋಗ ಪಡೆಯಲು ಎಲ್ಲ ಅನುಕೂಲಗಳನ್ನು ಕಲ್ಪಿಸಲಾಗಿದೆ ಎಂದರು.

ಚೂಡಾ ಅಧ್ಯಕ್ಷರಾದ ಮಹಮ್ಮದ್ ಅಸ್ಗರ್ ಮುನ್ನ ಅವರು ಮಾತನಾಡಿ ಉದ್ಯೋಗ ಮೇಳವನ್ನು ಅಚ್ಚುಕಟ್ಟಾಗಿ ಆಯೋಜಿಸುತ್ತಾ ಬರಲಾಗುತ್ತಿದೆ. ಅರ್ಹರೆಲ್ಲರೂ ಉದ್ಯೋಗವಂತರಾಗಲು ವಿವಿಧ ಕಂಪನಿಗಳನ್ನು ಉದ್ಯೋಗ ಮೇಳದಲ್ಲಿ ಆಹ್ವಾನಿಸಿ ಅವಕಾಶಗಳನ್ನು ಕಲ್ಪಿಸಲಾಗುತ್ತಿದೆ. ಜಿಲ್ಲೆಯ ಯುವ ಜನರು ಇಂತಹ ಉದ್ಯೋಗ ಮೇಳಗಳನ್ನು ಬಳಸಿಕೊಂಡು ಉತ್ತಮ ಭವಿಷ್ಯ ರೂಪಿಸಿಕೊಳ್ಳಬೇಕು ಎಂದು ತಿಳಿಸಿದರು.

ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ, ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಶೃತಿ. ಡಿ.ಸಿ, ಜಿಲ್ಲಾ ಉದ್ಯೋಗಾಧಿಕಾರಿ ಮಹಮ್ಮದ್ ಅಕ್ಬರ್ ಉದ್ಘಾಟನಾ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಅರ್ಚಕ ಅನಂತ್ ಪ್ರಸಾದ್‌ಗೆ ಮಾತೃ ವಿಯೋಗ



ಚಾಮರಾಜನಗರ: ಹರಳುಕೋಟೆ ಜನಾರ್ಧನಸ್ವಾಮಿ ದೇಗುಲ ಅರ್ಚಕರಾದ ಅನಂತ್ ಪ್ರಸಾದ್ ಅವರ ಮಾತೃಶ್ರೀ ಶ್ರೀಮತಿ ಜಯಮ್ಮ(84) ವಯೋಸಹಜ ಕಾರಣದಿಂದ ಶುಕ್ರವಾರ ಸಂಜೆ ನಿಧನರಾಗಿದ್ದಾರೆ. ಮೃತರ ಅಂತ್ಯಕ್ರಿಯೆಯು ಚಾಮರಾಜನಗರದ ಶ್ರೀ ಶಂಕರ ರುದ್ರಭೂಮಿಯಲ್ಲಿ ಶನಿವಾರ ಮಧ್ಯಾಹ್ನ 3 ಕ್ಕೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮಹದೇವಸ್ವಾಮಿ ನಿಧನ



ಬೇಗೂರು(ಗುಂಡ್ಲುಪೇಟೆ): ಗ್ರಾಮದ ನಿವಾಸಿ ಜಿಲ್ಲಾ ಉಪ್ಪಾರ ಸಂಘಟನಾ ಕಾರ್ಯದರ್ಶಿ ಡಿ.ಮಹದೇವಸ್ವಾಮಿ (45) ಅನಾರೋಗ್ಯದಿಂದ ಗುರುವಾರ ರಾತ್ರಿ ನಿಧನರಾದರು. ಪತ್ನಿ, ತಂದೆ, ತಾಯಿ ಇದ್ದಾರೆ. ಇವರ ಅಂತ್ಯಕ್ರಿಯೆ ಬೇಗೂರು ಗ್ರಾಮದ ತೋಟದಲ್ಲಿ ನಡೆಯಿತು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಸೈಟು ಮಾರಾಟಕ್ಕಿದೆ
30x40 N/F
ಶ್ರೀನಗರ 'C' ಬ್ಲಾಕ್
ಜೆ.ಪಿ. ನಗರ ರಿಂಗ್ ರಸ್ತೆ ಹತ್ತಿರ.
9008570086
9591810822

ಕಳೆದಿದೆ
ಸ್ವತ್ತಿನ ಸಂಖ್ಯೆ:107/2A, SIHS ಬ್ಲಾಕ್, 2ನೇ ಕ್ರಾಸ್, ರಾಜೇಂದ್ರನಗರ ಬಡಾವಣೆ, ಎನ್.ಆರ್. ಮೊಹಲ್ಲಾ, ಮೈಸೂರು ಸಿಟಿ, ಇದರ ಅಳತೆ: ಪೂರ್ವ–ಪಶ್ಚಿಮ: 25 ಅಡಿ, ಉತ್ತರ–ದಕ್ಷಿಣ: 50 ಅಡಿ. ಈ ಸ್ವತ್ತಿಗೆ ಸಂಬಂಧಿಸಿದಂತೆ K.H.B. ರವರು ನೀಡಿರುವ ದಿನಾಂಕ: 06.07.1996ರ ಮೂಲ ಮಂಜೂರಾತಿ ಪತ್ರ ಮತ್ತು ದಿನಾಂಕ : 25.07.1996ರ ಮೂಲ ಸ್ವಾಧೀನ ಪತ್ರ ಕಳೆದು ಹೋಗಿರುತ್ತದೆ. ಸದರಿ ದಾಖಲಾತಿಗಳು ಯಾರಿಗಾದರೂ ಸಿಕ್ಕಿದ್ದಲ್ಲಿ ಈ ಕೆಳಕಂಡ ವಿಳಾಸಕ್ಕೆ ತಲುಪಿಸಲು ಪ್ರಾರ್ಥಿಸುತ್ತೇವೆ.
ನವೀನ್ ಕುಮಾರ್.ಆರ್. # 141, 2ನೇ ಅಡ್ಡ ರಸ್ತೆ, 1ನೇ ಮುಖ್ಯ ರಸ್ತೆ, ಗಂಗೋತ್ರಿ ಬಡಾವಣೆ, ಮೈಸೂರು.

ಭೋಗ್ಯಕ್ಕೆ
D.No-8396- 4ನೇ ಹಂತ, ವಿಜಯನಗರ, ಮೈಸೂರು
2. B.H.K. ಭೋಗ್ಯಕ್ಕೆ. ಸಸ್ಯಹಾರಿಗೆ ಮಾತ್ರ.
9611947301
9448904584

MUDA APPROVED SITE for SALE
S&S Layout, near Srinagara Railway Crossing Gate
- 30x40 West Facing
- E-Khata • Loan Available
- 900 m from Ring Road
- Immediate Registration

Direct Owner Sale
98455 45245

WANTED
Experienced
Sale Girls - 10
Sales Boys - 10
Accountant - 1
For a saree and ready made garments near Olympia talkies, Mysore. Contact:
90368 45117 / 93410 50500

WANTED
GRAPHIC DESIGNER (FRESHER)
TATA ACE DRIVER
9448067939
9739569260

40x60
Site sale, University Layout Dattagalli 3rd Stage
Call: 9880273834

40x44 N/W, ಕಾರ್ನರ್ ಸೈಟು ಮಾರಾಟಕ್ಕಿದೆ. ರೇರಾ ಅಪ್ರೂಡ್ GSS ನಿರ್ವಾಣ್ ಲೇಔಟ್, (Opp Park) 32 ಲಕ್ಷಗಳು, ತಳೂರು TVS ಫ್ಯಾಕ್ಟರಿ ಹತ್ತಿರ, ಮೈಸೂರು.
9742198093

WANTED
Staff for Reputed Hotel at Hebbal, Mysore. • Receptionist/Front Office Executive(F) • House Keeping Supervisor(F) • Garden(M) • Housekeeping Staff(F) Apply Now!
9606016969

ಮುಡಾ ಸೈಟು ಮಾರಾಟಕ್ಕಿದೆ
40x60
ದಟ್ಟಗಳ್ಳಿ, ಮೈಸೂರು
8904497670

FOR SALE
40x60, MUDA Auction Site @ Vijayanagar 4th Stage, 1st Phase.
100x55 E/F @ Vijayangar 4th Stage, 2nd Phase, 80 Ft Road.
65x40 House for Sale at Yadavagiri 4th Cross.
10 Acres Land near Talakad
Call: 7411363509

ತಕ್ಷಣ ಬೇಕಾಗಿದ್ದಾರೆ
ವರ್ಕ್ ಫ್ರಮ್ ಹೋಂ ಕೆಲಸಕ್ಕೆ ವಿದ್ಯಾರ್ಥಿಗಳಿಗೆ & ಪುರುಷರಿಗೆ ಹಾಗೂ ಮಹಿಳೆಯರಿಗೆ ಮೊದಲ ಆದ್ಯತೆ (ಮನೆಯಿಂದಲೇ ಕೆಲಸ) 7th, 10th, PUC, Any Degree ಪಾಸ್, ಫೇಲ್ ಆದವರು ಸಂಪರ್ಕಿಸಿ:
HR: 9742133993

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9535361279

DUPLEX HOUSE 20X30 ON LEASE
Semi Furnished @ Vijayanagar 4th Stage, 2nd Phase MYSORE
3 BHK North Face, Vaastu.
Rs. 20 Lacs
7483215886, 8217777186

ಜಮೀನು ಮಾರಾಟಕ್ಕಿದೆ
ಮೈಸೂರು–ಬಿಳಿಕೆರೆ–ಕೆ.ಆರ್.ನಗರ ಹೈವೆ ರಸ್ತೆಗೆ ಹೊಂದಿಕೊಂಡಿರುವ 1 ಎಕರೆ ಜಮೀನು
ಡಾಂಬಾರು ರಸ್ತೆಗೆ ಹೊಂದಿಕೊಂಡಿರುವ 20 ಗುಂಟೆ ಜಮೀನು ಶ್ರೀರಾಂಪುರ ರಿಂಗ್ ರಸ್ತೆಯಿಂದ 15 ಕಿಮೀ ಅಹಲ್ಯಗ್ರಾಮ
ಮೈಸೂರಿನ ಸುತ್ತಮುತ್ತ ಜಮೀನು ಹಾಗೂ ಸೈಟು ಬೇಕಾಗಿದ್ದರೆ ಸಂಪರ್ಕಿಸಿ
7411848108

30x40 E/F ಸೊಸೈಟಿ ಸೈಟು ಮಾರಾಟಕ್ಕಿದೆ. 20 ಲಕ್ಷಗಳು ನಂಜುಂಡೇಶ್ವರನಗರ, ತಳೂರು TVS ಫ್ಯಾಕ್ಟರಿ ಹತ್ತಿರ, ಮೈಸೂರು.
9972557534
8722353178

ತುರ್ತಾಗಿ ಬೇಕಾಗಿದ್ದಾರೆ
ಮೈಸೂರಿನ ಪ್ರತಿಷ್ಠಿತ TRUSTನಲ್ಲಿ ಕೆಲಸ ಮಾಡಲು ಈ ಕೆಳಕಂಡ ಹುದ್ದೆಗೆ ಕೂಡಲೇ ಬೇಕಾಗಿದ್ದಾರೆ.
1) ಆಫೀಸ್ ಮ್ಯಾನೇಜರ್,
2) ಸಹಾಯಕರು(ಕಛೇರಿ),
3) ಅರ್ಚಕರ ಸಹಾಯಕರು,
4) ಅಡಿಗೆಯವರ ಸಹಾಯಕರು
7624877447
9448413041

OSHO
ಬೆಂಗಳೂರಿನಲ್ಲಿ ಓಶೋರವರ 2 ದಿನದ ಧ್ಯಾನ ಶಿಬಿರ
March 20 to 22
8971135017

SITE FOR SALE
30x40 West. 42 Lakhs
SHIVA ENCLAVE
Chikkanahalli Main Road Ilvala, Mysore
42 Lakh final. Direct owner
Mob: 9972399939

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ ಕಾರ್ಖಾನೆಯೊಂದಕ್ಕೆ ತಕ್ಷಣ ಪುರುಷ & ಮಹಿಳಾ ಕಾರ್ಮಿಕರು ಬೇಕಾಗಿದ್ದಾರೆ. (7th Pass)
ವೇತನ : 14,638+ESI & PF ಜೊತೆಗೆ ಊಟದ ಸೌಲಭ್ಯವಿದೆ.
8453408502

JOB VACANCY
SALES EXECUTIVE, REQUIRED
Reputed Ceramic Tiles Showroom at Bannimantap. Mysore invites applications for the post of Sales Executive. Qualification: PUC/Any Degree, Experience: Minimum 1 Year Required, Age Limit: Up to 30 Years Working Hours: 9:30 AM to 6:30 PM Salary: 18,000-20,000 per month Interested candidates are requested to send their resume via WhatsApp to:
9845802314

ಜಮೀನು ಮಾರಾಟಕ್ಕಿದೆ
1 ಎಕರೆ 10 ಗುಂಟೆ ಮತ್ತು 1 ಎಕರೆ ಜಮೀನು ಮಾರಾಟಕ್ಕಿದೆ, 1 ಎಕರೆಗೆ 1 ಕೋಟಿ 60 ಲಕ್ಷ, ಮೈಸೂರು ಅರಮನೆ ಯಿಂದ 20 ಕಿ.ಮೀ. ದಟ್ಟಗಳ್ಳಿ ಯಿಂದ 10 ಕಿ.ಮೀ, ಕೊಳ್ಳುವವರು ಮಾತ್ರ, ಸಂಪರ್ಕಿಸಿ
9341624462

IMMEDIATE REQUIREMENT
Accountant (Tally ERP 9)
Internal Auditor (Expert in MS-Office), (Minimum 2 Years of Experience)
(Attractive Salary with ESI and EPF)
0821-2543527
0821-4148888
Location: https://share.google/uYmBavXxoTXI1XuAM

REQUIRED OFFICE STAFF @ MYSURU
Eligibility: ✓ Graduate.
✓ Computer & MS Office.
✓ Kannada & English Typing.
✓ Good Communication Skills.
✓ Should have Two Wheeler.
Contact: 9606744641

ತಕ್ಷಣ ಬೇಕಾಗಿದ್ದಾರೆ
11, 10 ಕ್ಯಾಂಟರ್‌ಗೆ ಮತ್ತು ರಾತ್ರಿ ಪಾಳಿಗೆ ಟ್ರಕ್ ಚಾಲಕರು ಬೇಕಾಗಿದ್ದಾರೆ. ಕ್ಯಾಂಟೀನ್ ಪಿಎಫ್ ಮತ್ತು ಇಎಸ್ಐ ಸೌಲಭ್ಯವಿದೆ. ದಯವಿಟ್ಟು ಸಂಪರ್ಕಿಸಿ:
9341623350

ADVOCATES REQUIRED @ MYSURU
Eligibility:
✓ Research & Drafting Skills.
✓ Proficiency in Kannada & English.
✓ Should have Two Wheeler.
Contact: 9972797250

ಕೆಲಸಕ್ಕೆ ಬೇಕಾಗಿದ್ದಾರೆ
ಸೇಲ್ಸ್ ಗರ್ಲ್ ಮತ್ತು ಸೇಲ್ಸ್ ಬಾಯ್ಸ್, ಸಂಪರ್ಕಿಸಿ: ಪಯೋನೀರ್ ಸ್ಪೋರ್ಟ್ಸ್, ಪಂಚಮಂತ್ರ ರಸ್ತೆ, ಮೈಸೂರು.
9980151488
9886324288

ನಿವೇಶನ ಮಾರಾಟಕ್ಕಿದೆ
ಬೋಗಾದಿಯ ಕರ್ನಾಟಕ ಬ್ಯಾಂಕ್ ಹಿಂಭಾಗ 70x30, ಅಳತೆಯ ನಿವೇಶನ ಮಾರಾಟಕ್ಕಿದೆ. ಆಸಕ್ತಿವುಳ್ಳವರು ಸಂಪರ್ಕಿಸಿ
9964051275
9342188773

SITE FOR SALE
Vijayanagara 4th stage. Kalyani nagara attach Reshab layout E/F 30/42 site with 40 feet Road. Call
8884616461
8073300783

30x40 & 40x60 Site/House for sale in
Vijayanagar, Dattagalli, Gokulam, Niveditha Nagar, Ramakrishna Nagar, Srirampura, Vasu Layout, Hebbal, Siddartha layout, Satagalli, Vidyaranyapuram, Vidyashankar layout, Police layout
MS PROPERTIES - 9110612459

SITE FOR SALE
ಜ್ಞಾನಭಾರತಿ ಬಡಾವಣೆ, 2nd Phase, ಸೈಟ್‌ನಂ 363, 36x40 Corner Site, East Face, ರಾಷ್ಟ್ರೋತ್ಥಾನ ಶಾಲೆ ಹತ್ತಿರ, ದಡದಹಳ್ಳಿ, Direct Owner Contact
9663402349

Ladies P.G available for Rent in Bhogodi 2nd Stage near Nirmithi Kendra 5th Cross Students Capacity Around 60 Members 20 Rooms and Fully Furnished
9481382535
8197679929

ಬೇಕಾಗಿದ್ದಾರೆ
ಮೈಸೂರಿನ ಹೂಟಗಳ್ಳಿ ಇಂಡಸ್ಟ್ರಿಯಲ್ ಏರಿಯಾ ರಾಣಿಮದ್ರಾಸ್ ಕಾರ್ಖಾನೆ ಹತ್ತಿರವಿರುವ ಕಾರ್ಖಾನೆಗೆ ಹಗಲು ಮತ್ತು ರಾತ್ರಿ(12 ಗಂಟೆ) ಕೆಲಸ ಮಾಡಲು ಓದುಬರಹ ತಿಳಿದಿರುವ 40 ರಿಂದ 60 ವರ್ಷ ಒಳಗಿನ ಪುರುಷ ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ. ವೇತನ ತಿಂಗಳಿಗೆ 16000/- ESI, PF ಕ್ಯಾಟೀನ್ ಸೌಲಭ್ಯವಿರುತ್ತದೆ.
9731976148

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ ಕೆಲಸಕ್ಕೆ SSLC/Pass/Fail 12 ಘಂಟೆ ಪಾಳಿಗೆ ESI/PF ಸೌಲಭ್ಯವಿರುತ್ತದೆ. ಆಕರ್ಷಕ ಸಂಬಳ, ಮೊದಲು ಬಂದವರಿಗೆ ಆದ್ಯತೆ. ತಂಗಲು ಸ್ಥಳವಾಕಾಶವಿರುತ್ತದೆ.
9341866418
9341866416

JOB OPPORTUNITY
Reputed Govt Approved Financial Co invites Retired officials For Job Opportunity in Sharada Platina Opp Big Clock Tower 1st Floor Mysore-01, Date 04-03-2026 at 10.30 Am Education : SSLC & above any degree, Bring necessary document. Call
Call : 7022034200

SITE FOR REQUIRED
Please contact Direct owner Required in Bhogadi, Roopanagar, Vijayanagara
8884616461
8073300783

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9535175624

ಸೈಟ್ ಮಾರಾಟಕ್ಕಿದೆ
(30x50)
ವಿಜಯನಗರ 2ನೇ ಹಂತ (ವಿದ್ಯಾವರ್ಧಕ ಇಂಜಿನಿಯರ್ ಕಾಲೇಜು ಹಿಂಭಾಗ)(ರೆವಿನ್ಯೂ)
9886651605



Solar Water Heater SALES & SERVICE
BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

ಜಮೀನು ಮಾರಾಟಕ್ಕಿದೆ
ಮೈಸೂರು–ಬೆಂಗಳೂರು ಹೈವೆ ಟೋಲ್ ಪ್ಲಾಜಾ ಹತ್ತಿರ 28 ಗುಂಟೆ ಜಮೀನು (ಜನರಲ್) ಮಣಿಪಾಲ್ ಆಸ್ಪತ್ರೆಯಿಂದ 18 KM
7899871415

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಬೇಕಾಗಿದ್ದಾರೆ
ಮೇಟಗಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಕಾರ್ಖಾನೆಯಲ್ಲಿ ಕೆಲಸ ನಿರ್ವಹಿಸಲು ಪುರುಷರು ಹಾಗೂ ಮಹಿಳೆಯರು ಗುತ್ತಿಗೆ ಆಧಾರದ (Casual Labour) ಬೇಕಾಗಿರುತ್ತಾರೆ, ವಯೋಮಿತಿ 18 ರಿಂದ 35 ವರ್ಷದೊಳಗಿನವರು, ವಿದ್ಯಾರ್ಹತೆಯ ಅವಶ್ಯಕತೆ ಇರುವುದಿಲ್ಲ. ಇಚ್ಛೆ ಉಳ್ಳವರು ಸಂಪರ್ಕಿಸಿ
9611238376
7795794028

20x30 ಹೊಸ ಮನೆ, 2 BHK ಮಾರಾಟಕ್ಕೆ ಇದೆ
ಶಾಂತವೇರಿ ಗೋಪಾಲಗೌಡ ನಗರ, ಮೈಸೂರು. ಸಂಪರ್ಕಿಸಿ:
Mob: 9844212414

ಜಮೀನು ಮಾರಾಟಕ್ಕಿದೆ
2.25 ಎಕರೆ ಜಮೀನು ಬಡಾವಣೆ ಸುತ್ತಮುತ್ತ ಉದ್ಬೂರುನಲ್ಲಿ ಮಾರಾಟಕ್ಕಿದೆ.
ಆಸಕ್ತರು ಸಂಪರ್ಕಿಸಿ:
Mob: 7411501819

ಬೇಕಾಗಿದ್ದಾರೆ
ಸತತ 8 ವರ್ಷಗಳಿಂದ ನಮ್ಮ ಸಂಸ್ಥೆ ಇದ್ದು ನಮ್ಮಲ್ಲಿ ಹೋಂ ನರ್ಸಿಂಗ್ ಕೆಲಸ ಮಾಡುವವರು ಸಂಪರ್ಕಿಸಿ ಹಾಗೂ ಯಾವುದೇ ವಿದ್ಯಾಭ್ಯಾಸ ಇದ್ದರು ಇಲ್ಲದಿದ್ದರೂ ಮಹಿಳೆಯರು ಹಾಗೂ ಪುರುಷರು ತಕ್ಷಣವೇ ಸಂಪರ್ಕಿಸಿ. ಅವಶ್ಯಕತೆ ಇದ್ದಲ್ಲಿ ತಿಂಗಳ ಮಧ್ಯದಲ್ಲಿ ಹಣ ಪಡೆಯುವ ಸೌಲಭ್ಯ ಇರುತ್ತದೆ.
9513203333, 9739292222

ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ
ಪಿರಿಯಾಪಟ್ಟಣದಲ್ಲಿ ಕೆಲಸ ಮಾಡಲು ಅರ್ಹ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ಊಟ, ವಸತಿ ಉಚಿತ ವಿದ್ದು, ESI & PF ಆಕರ್ಷಕ ವೇತನವಿರುತ್ತದೆ.
Mob: 7406337991

ಅಡುಗೆಯವರು ಬೇಕಾಗಿದ್ದಾರೆ
ಮಾಂಸಹಾರಿ ಹೋಟೆಲ್‌ಗೆ ನಾಟಿ ಸ್ಟೈಲ್ ಅಡುಗೆ ಮಾಡುವ ಪುರುಷರು ಮತ್ತು ಮಹಿಳೆಯರು ಬೇಕಾಗಿದ್ದಾರೆ.
Mob: 6364548607

SITE FOR SALE
30x40 East Facing 2 sites
MUDA APPROVED
Per Sq Ft. Rs. 4800/-
Rainbow School back side Martikyathanalli, Gadige Main Road, Mysore.
9844189895, 7892948089

ಬೇಕಾಗಿದ್ದಾರೆ
ಹೊಟೇಲ್ ಒಂದರಲ್ಲಿ ಕೆಲಸ ಮಾಡಲು ಮಾಂಸಾಹಾರಿ ಮತ್ತು ಸಸ್ಯಾಹಾರಿ ಅಡುಗೆ ಭಟ್ಟರು,, ಪರೋಟ ಮಾಸ್ಟರ್, ಪಾತ್ರೆ ಕ್ಲೀನ್ ಮಾಡುವವರು ಹಾಗೂ ಹೌಸ್ ಕೀಪಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ (ಕಡ್ಡಾಯವಾಗಿ ನಮ್ಮಲ್ಲೇ ಉಳಿದುಕೊಳ್ಳುವ ಅಭ್ಯರ್ಥಿಗಳು ಮಾತ್ರ ಕರೆ ಮಾಡಿ).
Mob: 8105734012

ಕೆಲಸದವರು ಬೇಕಾಗಿದ್ದಾರೆ (ಮಹಿಳೆ)
ಟಿ ನರಸೀಪುರದಲ್ಲಿ ಉಳಿದುಕೊಂಡು, ಇಬ್ಬರಿಗೆ ಅಡುಗೆ ಮತ್ತು ಮನೆ ಕೆಲಸ ಮಾಡುವುದು. 15 ಸಾವಿರ ಸಂಬಳ ಊಟ ಹಾಗೂ ವಸತಿ ನೀಡಲಾಗುವುದು.
Mob: 96635 70750

New Independent Duplex (30x40) house for lease
Vijayanagar 3rd Stage, A1 Block. Facilities: Borewell, lift, solar, parking place available. Contact:
9591319191, 9740097600

FOR SALE
30x50 Sites Near RT Nagar Brahmins Lyt, 50ft & 60ft Road
20x30, 30x40 MUDA Approved Sites Near Rainbow School Bogadi
30x40|30x50 MUDA Sites KHB Attach, HD Kote Road.
2 & 3 BHK Apartments @ Ramakrishna Nagar.
PRAKRUTHI PROPERTIES
95386 90359, 90359 90359

SITE FOR SALE
30X40, 30X50
Near Manipal(Colombia) Hospital, Mysuru-Bengaluru Highway.
9187469224

FOR SALE
40x60 Properties @ Saraswati Puram
40x60 Commercial Property @ Srirampura 80ft Road
20X30 NEW DUPLEX HOUSE @ BALAJI ENCLAVE, UTTANAHALLI
40x60 Site @ Sharadha Lyt, JP Nagar
Properties @ Kuvempu Ngr
PRAKRUTHI PROPERTIES
95386 90359, 90359 90359

ಬೇಕಾಗಿದ್ದಾರೆ
ಕೂರ್ಗಳ್ಳಿ ಕೈಗಾರಿಕಾ ಪ್ರದೇಶ ಮೈಸೂರ್ ಕಂಪನಿಗೆ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ವಯಸ್ಸು : 18 ರಿಂದ 50, ಸಂಪರ್ಕಿಸಿ:
7892725603
8971460235

JOB'S IN MYSORE
AGE (18-24) 10th PUC ಮೇಲ್ಪಟ್ಟ ವಿವಿಧ ವಿಭಾಗಕ್ಕೆ EARN(10,600/- ರಿಂದ 20,800/-) pm ಪರಸ್ಥಳವರಿಗೆ ಮಾತ್ರ ವಸತಿ ಯಾವುದೇ ಶುಲ್ಕವಿರುವುದಿಲ್ಲ
Call ಕಾವ್ಯ Join Us
9342827788
9342238667

ಬೇಕಾಗಿದ್ದಾರೆ
ಪೆಟ್ರೋಲ್‌ಬಂಕ್‌ನಲ್ಲಿ ಹೆಲ್ಪರ್ ಮತ್ತು ಕ್ಯಾಷಿಯರ್ ಕೆಲಸ ಮಾಡಲು ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ. ಸ್ಥಳ: ವಿಜಯನಗರ ವಾಟರ್ ಟ್ಯಾಂಕ್ ಹತ್ತಿರ, ಮೈಸೂರು ನಗರ
6364748485

ಕಳೆದಿದೆ
ಗಾವಡಗೆರೆ ಗ್ರಾಮ, ಗಾವಡಗೆರೆ ಹೋಬಳಿ, ಹುಣಸೂರು ತಾಲೂಕು, ಮೈಸೂರು ಜಿಲ್ಲೆ ಇಲ್ಲಿ ವಾಸವಿರುವ ನಟೇಶ S/o ನಾಗರಾಜನಾಯಕ ಇವರಿಗೆ ಸೇರಿದ ಶುದ್ಧ ಕ್ರಯ ಪತ್ರ, Sale deed (Hun- 1-02560 -2011-12) Date: 1-1-2026 ದಾಖಲಾತಿಗಳು ಗಾವಡಗೆರೆಯಲ್ಲಿ ಕಳೆದು ಹೋಗಿರುತ್ತದೆ. ಸಿಕ್ಕಿದವರು ಹತ್ತಿರದ ಪೊಲೀಸ್ ಠಾಣೆಗೆ ತಿಳಿಸಿ ಅಥವಾ ಕರೆಮಾಡಿ:
9845563620

ಸದ್ಗುರು ಮ್ಯಾರೇಜಸ್
ವಧುವರರನ್ನು ಹುಡುಕಲು ಸಹಾಯಬೇಕೆ? ನಮಗೆ ಕರೆ ಮಾಡಿ, ಶೀಘ್ರ ವಿವಾಹಕ್ಕೆ ಕೂಡಲೇ ಗುರೂಜಿಯನ್ನು ಸಂಪರ್ಕಿಸಿ
9448229184
7899625268

ವಧು–ವರಾನ್ವೇಷಣೆ
ಒಕ್ಕಲಿಗ/ಕುರುಬ/ಲಿಂಗಾಯತ, ನಾಯಕ/ SC & ಎಲ್ಲಾ ಜಾತಿಯ ವಧು–ವರರಿಗಾಗಿ ಕೂಡಲೇ ಸಂಪರ್ಕಿಸಿ
(II Marriages Also)
9343175000

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡುಗಳು
1) ಶಿವರಾಂ ಪೇಟೆ 2) ಹರ್ಷ ರಸ್ತೆ 3) ವಿನೋಬ ರಸ್ತೆ 4) ಹುಲೀಕೆರೆ 5) ಗುಂಡ್ಲುಪೇಟೆ/ಕೊಳ್ಳೇಗಾಲ
9686422400
9242406261

ವರನಿಗೆ ವಧು ಬೇಕಾಗಿದೆ
ಹೆಸರು : ಸುರೇಶ್‌ಗೌಡ
ಜಾತಿ : ಒಕ್ಕಲಿಗ ಗೌಡ
ವಯಸ್ಸು : 36
ತಂದೆ, ತಾಯಿಗೆ : ಒಬ್ಬನೆ ಮಗ, ಒಳ್ಳೆಯ ಆಸ್ತಿವಂತರು, ಹುಡುಗನಿಗೆ ಮಾತು ಬರಲ್ಲ ಮತ್ತೆ ಹುಡುಗನಿಗೆ ಯಾವ ಕೆಟ್ಟ ಚಟಗಳು ಇಲ್ಲ. ವಿಚ್ಛೇದನೆ ಪಡೆದವರು ಸರಿಯೆ. ಸಂಪರ್ಕಿಸಿ
ಕುಮಾರ್ 9845019678

ಮಳಿಗೆ ಬಾಡಿಗೆಗೆ ಇದೆ
16x21
101 ಗಣಪತಿ ದೇವಸ್ಥಾನ, ತ್ಯಾಗರಾಜ ರಸ್ತೆ, ಮೈಸೂರು.
9845920613

ಬೇಕಾಗಿದ್ದಾರೆ
ಮೈಸೂರು ನಗರದ ಸುತ್ತ ಮುತ್ತ ಕಾರ್ಖಾನೆಗಳಲ್ಲಿ, ಕಂಪನಿಗಳಲ್ಲಿ ಹಾಗೂ ಉನ್ನತ ಆಸ್ಪತ್ರೆಗಳಿಗೆ, ಸ್ಕೂಲ್‌ಗಳಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್, ಹೌಸ್ ಕೀಪಿಂಗ್, ವಾರ್ಡ್ ಬಾಯ್ helper, Labours, ಮಹಿಳೆಯರು & ಪುರುಷರು ತಕ್ಷಣ ಬೇಕಾಗಿದ್ದಾರೆ. ಊಟ ವಸತಿ, ESI & PF ಸೌಲಭ್ಯವಿದೆ. ಜನಸುರಕ್ಷಾ ನಿಧಿ ಸೌಹಾರ್ದ ಕೋ–ಆಪರೇಟಿವ್ ಸೊಸೈಟಿ ಹಿನಕಲ್ ಇಲ್ಲಿ ಪಿಗ್ಮಿ ಕಲೆಕ್ಟರ್ ಕೆಲಸಕ್ಕೆ ತಕ್ಷಣ ಬೇಕಾಗಿದ್ದಾರೆ.
(FULL TIME & PART TIME JOB)
ಸಂಪರ್ಕಿಸಿ : 7795367205, 9611208553/ 9036461347

ಮನೆ ಮತ್ತು ಮಳಿಗೆ ಬಾಡಿಗೆಗೆ ಇದೆ
ಯರಗನಹಳ್ಳಿ ರಿಂಗ್ ರೋಡ್, ಸಾಯಿಬಾಬಾ ಮಂದಿರದ ಬಳಿ, ನೆಲ ಮಹಡಿ ಮಳಿಗೆ, ಮೊದಲನೇ ಮಹಡಿ ಮಳಿಗೆ, ಎರಡನೇ ಮಹಡಿ ಮನೆ ಬಾಡಿಗೆಗೆ ದೊರೆಯುತ್ತದೆ.
9945049415

FOR SALE
Farm land in Hullepura, Gundulpete, Very near Bandipura Jungle. 7 acre
9845920613

FOR SALE
Single owner driven Toyota Cruiser Hyryder 2024 August.
9845920613

COMMERCIAL SHOPS FOR RENT
Size: 10x13 near Gundlupet circle Ch.nagar.
Contact : 8310585050

50x80
Site Sale Roopa nagar
Call: 9880273834

ಬೇಕಾಗಿದ್ದಾರೆ
ಮೈಸೂರಿನ ಕಂಪೆನಿಗಳಲ್ಲಿ ಕೆಲಸ ಮಾಡಲು ಅನುಭವವುಳ್ಳ ಸೆಕ್ಯೂರಿಟಿ ಸೂಪರ್ವೈಸರ್ ಗೆ (22 ಸಾವಿರ) ಹಾಗೂ ಗಾರ್ಡ್‌ಗೆ(20 ಸಾವಿರ ಸಂಬಳ. 12 hour's duty)ಬೇಕಾಗಿದ್ದಾರೆ. ವಯೋಮಿತಿ 50 ವರ್ಷದ ಒಳಗೆ ಮತ್ತು ಹೌಸ್ ಕೀಪಿಂಗ್ ಕೆಲಸ ಮಾಡಲು ಹುಡುಗಿಯರು ಬೇಕಾಗಿದ್ದಾರೆ. ಸ್ಥಳ: ಇನ್ಫೋಸಿಸ್ ಹತ್ತಿರ, ಹೆಬ್ಬಾಳ. ಸಂಪರ್ಕಿಸಿ:
8073642734
9113654639

ಪ್ರವಾಸ
ಬೆಂಗಳೂರು/ಮೈಸೂರಿನಿಂದ ಮಹಾಬಲೇಶ್ವರ (ಗಿರಿಧಾಮ) 18–5–2026 ರಿಂದ, ಅಷ್ಟವಿನಾಯಕ + 5 ಜ್ಯೋತಿರ್ಲಿಂಗ–21–5–2026ರಿಂದ ಮಧ್ಯ ಪ್ರದೇಶ 5–6–2026ರಿಂದ ಬುಕ್ಕಿಂಗ್ ಕೊನೆ ದಿನಾಂಕ – 15–3–2026
ಬದ್ರಿನಾಥ ಟ್ರಾವಲ್ಸ್– ಮೈಸೂರು, ಬೆಳಗಾವಿ
7676956347
9448347054

ಸೈಟು ಬೇಕಾಗಿದೆ
ಯಾವುದೇ ಅಳತೆಯಾದರೂ ಸರಿ ವರುಣ, JSS, ಬಸವೇಶ್ವರ, ನಿರ್ಮಾಣನಗರ, ಕ್ಯಾಲಿಬರ್, ಬ್ಯಾಂಕರ್ಸ್ ಲೇಔಟ್, ವರುಣ / ವಾಜಮಂಗಲ ಹಾಗೂ ಅಕ್ಕಪಕ್ಕದ ಬಡಾವಣೆಗಳಲ್ಲಿ T. ನರಸೀಪುರ ರಸ್ತೆ / ಬನ್ನೂರು ರಸ್ತೆ.
9686071750
9187593627

ಬೇಕಾಗಿದ್ದಾರೆ
1. ಶಾಲಾ ಬಸ್ ಚಾಲಕರು
2. ಅಡುಗೆ ಸಹಾಯಕ / ಕ್ಯಾಂಟೀನ್ ಕೆಲಸಕ್ಕೆ ಹುಡುಗರು.
ಉಚಿತ ಊಟ ಹಾಗೂ ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ:
9964586817
9379399998

HOUSE FOR SALE
40X60 S/F Old House, V. Nagar 1st Stage, 3.25 cr, 40x60 E/F, 2 Floor, Brindavan Extn. - 3.15 cr, 40x12 E/F, 40x25 Old House, Gokulam- 3.15 cr
9483315583
9832407342

ಕೂಡಲೇ ಬೇಕಾಗಿದ್ದಾರೆ
ಹೆಬ್ಬಾಳ್ ಏರಿಯ– ಮೇಟಗಳ್ಳಿ– ಸಿಟಿ ಸುತ್ತಮುತ್ತ ಕೆಲಸ ಮಾಡಲು ವಿದ್ಯಾವಂತ ಸೆಕ್ಯೂರಿಟಿ ಗಾರ್ಡ್‌ಗಳೂ ಬೇಕಾಗಿದ್ದಾರೆ. ವಯಸ್ಸು 30 ರಿಂದ 50. ಕೂಡಲೇ ಸಂಪರ್ಕಿಸಿ
8073722464

ಮೈಸೂರು ಮಿತ್ರ 46 — ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ಕ್ರೀಡಾಂಗಣ ಕೈ ಬಿಡದಿದ್ದರೆ ಧಾರವಾಡ ಮಾದರಿ ಹೋರಾಟ

ರಾಜ್ಯ ಸರ್ಕಾರಕ್ಕೆ ವಿಪಕ್ಷ ನಾಯಕ ಆರ್.ಅಶೋಕ್ ಎಚ್ಚರಿಕೆ

ತಿ.ನರಸೀಪುರ, ಫೆ.27– ಪಟ್ಟಣದ ಸಿಲ್ಕ್ ಫಿಲೇಚರ್ ಆವರಣದಲ್ಲಿ ಕ್ರೀಡಾಂಗಣ ನಿರ್ಮಾಣ ಕೈ ಬಿಡದಿದ್ದರೇ ಇತ್ತೀಚೆಗೆ ಧಾರವಾಡದಲ್ಲಿ ಉದ್ಯೋಗ ಭರ್ತಿಗೆ ಆಗ್ರಹಿಸಿ ಉದ್ಯೋಗಾಕಾಂಕ್ಷಿಗಳು ನಡೆಸಿದ ಮಾದರಿ ಹೋರಾಟ ಮಾಡಲಾಗುತ್ತದೆ ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ್ ರಾಜ್ಯ ಸರ್ಕಾರಕ್ಕೆ ಎಚ್ಚರಿಕೆ ನೀಡಿದರು.

ಸಿಲ್ಕ್ ಫಿಲೇಚರ್ ಆವರಣದಲ್ಲಿ ಕ್ರೀಡಾಂಗಣ ನಿರ್ಮಿಸದಂತೆ ಒತ್ತಾಯಿಸಿ ಕಾರ್ಮಿಕರು ಕರ್ತವ್ಯದಿಂದ ಹೊರಗುಳಿದು ನಡೆಸುತ್ತಿರುವ ಪ್ರತಿಭಟನೆಗೆ ಬೆಂಬಲ ಸೂಚಿಸಿ ಮಾತನಾಡಿದ ಅವರು, ನಾನು Save Mysore silk factory ಎನ್ನುವ ಅಭಿಯಾನದಲ್ಲಿ ಭಾಗವಹಿಸಿದ್ದೇನೆ. ಇಲ್ಲಿನ ಫ್ಯಾಕ್ಟರಿಗೆ 112 ವರ್ಷಗಳ ಇತಿಹಾಸವಿದೆ. ಈ ಕಾರ್ಖಾನೆಯಿಂದ ಚನ್ನಪಟ್ಟಣ ಹಾಗೂ ಮೈಸೂರು ಫ್ಯಾಕ್ಟರಿಗಳು ನಡೆಯುತ್ತಿವೆ. ಇಲ್ಲಿನ ಫ್ಯಾಕ್ಟರಿ ತಾಯಿ ಇದ್ದಂತೆ. ಆದರೆ ರಾಜ್ಯ ಸರ್ಕಾರ ಫ್ಯಾಕ್ಟರಿ ಮುಚ್ಚುವ ಮೂಲಕ ತಾಯಿ ಕೆಚ್ಚಲನ್ನೇ ಕತ್ತರಿಸುವ ಕೆಲಸಕ್ಕೆ ಮುಂದಾಗಿರುವುದು ನಾಚಿಕೆಗೇಡಿನ ವಿಷಯ ಎಂದು ಸರ್ಕಾರದ ನಡೆಯನ್ನು ಖಂಡಿಸಿದರು.

ಫ್ಯಾಕ್ಟರಿ ನಂಬಿಕೊಂಡು 2 ಸಾವಿರ ಕಾರ್ಮಿಕರು ಜೀವನ ನಡೆಸುತ್ತಿದ್ದಾರೆ. ಆದರೆ ರಾಜ್ಯ ಸರ್ಕಾರ ಅವೈಜ್ಞಾನಿಕವಾಗಿ ಫ್ಯಾಕ್ಟರಿ ಆವರಣದಲ್ಲಿ ಬೆಳೆದಿರುವ ನೂರಾರು ಮರಗಳ ಮಾರಣ ಹೋಮ ನಡೆಸಿ ಕ್ರೀಡಾಂಗಣ ನಿರ್ಮಾಣಕ್ಕೆ ಮುಂದಾಗಿರುವುದು ಯಾರಿಗೋ ಲಾಭ ಮಾಡಿಕೊಡುವ ಉದ್ದೇಶದಿಂದ ಎಂಬುದು ಸ್ಪಷ್ಟವಾಗಿ ಗೋಚರವಾಗುತ್ತಿದೆ. ಕಾಂಗ್ರೆಸ್ ನಾಯಕರೊಬ್ಬರ ಫ್ಯಾಕ್ಟರಿಗೆ ಅನುಕೂಲ ಮಾಡಿ ಕೊಡಲು ಹೋಗಿ ಸಾವಿರಾರು ಕಾರ್ಮಿಕರನ್ನು ಬೀದಿ ಪಾಲು ಮಾಡಲು ಸರ್ಕಾರ ಹೊರಟಿದೆ. ಕಾಂಗ್ರೆಸ್ ನಾಯಕನ ಫ್ಯಾಕ್ಟರಿ ಇದೆ. ತಿ.ನರಸೀಪುರ ಫ್ಯಾಕ್ಟರಿ ಮುಚ್ಚಿದರೆ ಆತ ನಡೆಸುತ್ತಿರುವ ಫ್ಯಾಕ್ಟರಿಯಿಂದ ನೂಲನ್ನು ಮೈಸೂರು ಹಾಗೂ ಚನ್ನಪಟ್ಟಣ ಫ್ಯಾಕ್ಟರಿಗೆ ತರಿಸಿಕೊಳ್ಳುವ ಹುನ್ನಾರ ನಡೆದಿದೆ. ಒಮ್ಮೆಲೆ ಕಾರ್ಮಿಕರು, ಬುದ್ಧಿ ಜೀವಿಗಳು, ಪರಿಸರವಾದಿಗಳ ಸಲಹೆ ಧಿಕ್ಕರಿಸಿ ಕ್ರೀಡಾಂಗಣ ಮಾಡುವ ಹಠ ಮಾಡಿದರೆ ಧಾರವಾಡದಲ್ಲಿ ನಡೆದ ಹೋರಾಟದ ಮಾದರಿ ಉಗ್ರ ಪ್ರತಿಭಟನೆ ಮಾಡಬೇಕಾಗುತ್ತದೆ. ಹಾಗಾಗಿ ಕ್ರೀಡಾ ಇಲಾಖೆಗೆ ಹಸ್ತಾಂತರವಾಗಿರುವ 5 ಎಕರೆ ಜಮೀನನ್ನು ಮತ್ತೆ ವಾಪಸ್ ಮಾಡಿ ಕ್ರೀಡಾಂಗಣಕ್ಕೆ ಬೇರೆ ಸ್ಥಳ ಗುರುತಿಸಿ ಅಲ್ಲಿ ಕ್ರೀಡಾಂಗಣ ನಿರ್ಮಿಸಬೇಕೆಂದು ಅವರು ಆಗ್ರಹಿಸಿದರು.

ಸಂಬಳ ಕಡಿಮೆ ಲಾಭ ಹೆಚ್ಚು: ಫ್ಯಾಕ್ಟರಿಯಲ್ಲಿ ಕಾರ್ಮಿಕರಿಗೆ ಕೇವಲ 15 ಸಾವಿರ ಸಂಬಳ ಕೊಡಲಾಗುತ್ತಿದೆ. ಸ್ಟೈಫೆಂಡರಿ ಕೇವಲ 3 ಸಾವಿರ, ಮಧ್ಯಾಹ್ನದ ಊಟ ಸಹ ನೀಡುತ್ತಿಲ್ಲ. ಫ್ಯಾಕ್ಟರಿ ಮಾತ್ರ ಹೆಚ್ಚಿನ ಲಾಭ ಮಾಡುತ್ತಿದೆ. ಪ್ರತಿ ವರ್ಷ 40 ರಿಂದ 50 ಕೋಟಿ ಲಾಭ ಮಾಡುತ್ತಿದ್ದು, ಈ ವರ್ಷ 96 ಕೋಟಿ ರೂ.ಗಳ ಲಾಭ ಮಾಡಿದೆ. ಲಾಭಾಂಶದಲ್ಲಿ ಒಂದು ಕೋಟಿ ಕೊಟ್ಟಿದ್ದರೂ, ಕಾರ್ಮಿಕರ ಸಂಬಳ ಡಬಲ್ ಆಗುತ್ತಿತ್ತು. ಆದರೆ ಆ ಕೆಲಸವಾಗಿಲ್ಲ. ಹೋಗಲಿ ಲಾಭಾಂಶದಲ್ಲಿ ಫ್ಯಾಕ್ಟರಿಯನ್ನಾದರೂ ಅಭಿವೃದ್ಧಿ ಮಾಡಿದ್ದಾರೆಂದರೆ ಅದು ಇಲ್ಲ. ಅದರ ಬದಲಿಗೆ ಅಧಿಕಾರಿಗಳು 1.50 ಕೋಟಿ ರೂ. ಖರ್ಚು ಮಾಡಿ ಫಾರಿನ್ ಟೂರ್ ಮಾಡಿದ್ದಾರೆ ಎಂದು ಆರೋಪಿಸಿದರು.



ಕಾರ್ಖಾನೆ ಆವರಣದಲ್ಲಿ ವಿಪಕ್ಷ ನಾಯಕ ಆರ್.ಅಶೋಕ್ ಮಾತನಾಡಿದರು.

> ಬಡವರ ಪರ ಹೋರಾಟ ಎಂದರೆ ನಮ್ಮ ನಾಯಕ ಆರ್.ಅಶೋಕ್ ಅವರು ಟೊಂಕ ಕಟ್ಟಿ ನಿಲ್ಲುತ್ತಾರೆ. ಅಂತಹ ನಾಯಕರು ಇಲ್ಲಿಗೆ ಬಂದು ಬೆಂಬಲ ಸೂಚಿಸಿದ್ದಾರೆ. ನನ್ನ ಉಪವಾಸ ಸತ್ಯಾಗ್ರಹ ಬೆಂಬಲಿಸಿ ಮಹಿಳಾ ಕಾರ್ಮಿಕರು, ಸಹೋದರ ಅರ್ಜುನ್ ಸಾಥ್ ನೀಡಿದ್ದಾರೆ. ಫ್ಯಾಕ್ಟರಿಯಲ್ಲಿ ಉಂಟಾದ ಸಮಸ್ಯೆ ಬಗೆಹರಿಸಲು ಶಾಂತಿಯುತವಾಗಿ, ರಕ್ತ ಪಾತವಿಲ್ಲದೇ ಪ್ರಶಾಂತವಾಗಿ ಹೋರಾಟ ಮಾಡಲು ನಿರ್ಧರಿಸಿ ಉಪವಾಸ ಸತ್ಯಾಗ್ರಹದ ತೀರ್ಮಾನ ಮಾಡಿ ಹೋರಾಟದಲ್ಲಿ ಭಾಗಿಯಾದೆ.
> – ತೋಟದಪ್ಪ ಬಸವರಾಜು, ಬಿಜೆಪಿ ಮುಖಂಡ.

ಫ್ಯಾಕ್ಟರಿ ಮುಚ್ಚುವ ಹುನ್ನಾರ: ಫ್ಯಾಕ್ಟರಿ ಮುಚ್ಚುವ ಮೊದಲ ಹಂತವಾಗಿ 13 ಎಕರೆ ಪೈಕಿ 6 ಎಕರೆಯನ್ನು ಕ್ರೀಡಾ ಇಲಾಖೆಗೆ ಹಸ್ತಾಂತರಿಸಲಾಗಿದೆ. ಮೊದಲಿಗೆ ಗುರುತಿಸಿರುವ 5 ಎಕರೆಯಲ್ಲಿ ಕ್ರೀಡಾಂಗಣ ನಿರ್ಮಿಸಿ, ನಂತರ ಅಲ್ಲಿ ಆಟ ಆಡಲು ಬರುವ ಕ್ರೀಡಾಪಟುಗಳಿಂದ ಫ್ಯಾಕ್ಟರಿಯಿಂದ ವಾಸನೆ ಬರುತ್ತಿದೆ ಎಂದು ಹೇಳಿಸುತ್ತಾರೆ. ಬಾಯ್ಲರ್ ಬ್ಲಾಸ್ಟ್ ಆದರೆ ಜೀವಕ್ಕೆ ಹೊಣೆ ಯಾರು ಎಂದು ಕೇಳುತ್ತಾರೆ. ನಂತರ ತಿಮರೋಡಿ ಗ್ಯಾಂಗ್ ರೀತಿ ಒಂದು ಗುಂಪಿನಿಂದ ಫ್ಯಾಕ್ಟರಿ ಬೇಕೋ ಅಥವಾ ಕ್ರೀಡಾಂಗಣ ಬೇಕೋ ಎಂದು ಹೇಳಿಸುತ್ತಾರೆ. ನಂತರ ಕ್ರೀಡಾಂಗಣ ಬೇಕು ಎಂದು ಬಿಂಬಿಸಿ ಫ್ಯಾಕ್ಟರಿ ಮುಚ್ಚಿಸಲು ಮುಂದಾಗುತ್ತಾರೆ. ಇದು ದೊಡ್ಡ ಹುನ್ನಾರವಾಗಿದ್ದು, ಕಾರ್ಮಿಕರು ಎಚ್ಚರಿಕೆಯಿಂದ ಇರುವಂತೆ ಸೂಚನೆ ನೀಡಿದರು.

ಬೇರೆಡೆ ಕ್ರೀಡಾಂಗಣ ಮಾಡಲೇನು ಅಡ್ಡಿ: ಫ್ಯಾಕ್ಟರಿ ಆವರಣದಲ್ಲಿಯೇ ಕ್ರೀಡಾಂಗಣ ಮಾಡಬೇಕೆಂಬ ಹಠ ಮಾಡಲಾಗುತ್ತಿದೆ. ಕ್ರೀಡಾಂಗಣ ನಿರ್ಮಿಸಲು ಈಗ ಗುರುತಿಸಿರುವ ಜಾಗ ಸಾಕೇ ಎಂಬ ಸಾಮಾನ್ಯ ಜ್ಞಾನ ಸರ್ಕಾರಕ್ಕೆ ಇಲ್ಲವೇ? ಒಂದು ಟ್ರ್ಯಾಕ್ 400 ಮೀಟರ್ ಇರುತ್ತೆ. ಕ್ರೀಡಾಂಗಣ ನಿರ್ಮಾಣಕ್ಕೆ ಕನಿಷ್ಠ 10 ಎಕರೆ ಜಾಗವಾದರೂ ಬೇಕು. ನೀವು ಕ್ರೀಡಾಂಗಣ ಮಾಡಲು ನಮ್ಮದೇನು ಅಡ್ಡಿ ಇಲ್ಲ. ಒಂದಲ್ಲಾ ಎರಡು ಕ್ರೀಡಾಂಗಣ ಮಾಡಿ. ನೀವು ಗುರತು ಮಾಡಿ ರುವ ಜಾಗದಲ್ಲಿ ಟೀಕ್, ಶ್ರೀಗಂಧ, ಬೇವು ಸೇರಿದಂತೆ ವಿವಿಧ ಜಾತಿಯ 500ಕ್ಕೂ ಹೆಚ್ಚು ಮರಗಳಿವೆ. ಇವನ್ನೆಲ್ಲಾ ಕಡಿಯುತ್ತೀರಾ, ಫ್ಯಾಕ್ಟರಿಗೆ ನದಿಯಿಂದ ನೀರಿನ ಪೈಪ್‌ಲೈನ್ ತಂದಿದ್ದಾರೆ. ಅದಕ್ಕೆ ಏನು ವ್ಯವಸ್ಥೆ ಮಾಡ್ತೀರಾ, ನಿಮ್ಮ ಯೋಗ್ಯತೆಗೆ ಒಂದು ಫ್ಯಾಕ್ಟರಿ ಮಾಡಿ 100 ಜನಕ್ಕೆ ಕೆಲಸ ಕೊಡಲಾಗಲ್ಲ. ಇರುವ ಫ್ಯಾಕ್ಟರಿಯನ್ನು ಮುಚ್ಚಿ ಕಾರ್ಮಿಕರನ್ನು ಬೀದಿಗೆ ತರಲು ಮಾಡುತ್ತಿರುವ ಪ್ರಯತ್ನಕ್ಕೆ ಧಿಕ್ಕಾರವಿದೆ ಎಂದು ಕಿಡಿಕಾರಿದರು.

ಉಪ್ಪಾರಭವನ, ಕನಕ ಭವನ ಕಾಮಗಾರಿ ಕಂಪ್ಲೀಟ್ ಮಾಡಿ: ಕ್ಷೇತ್ರದಲ್ಲಿ ಉಪ್ಪಾರ ಭವನ, ಕನಕ ಭವನ ಕಾಮಗಾರಿ ಅರ್ಧಕ್ಕೆ ನಿಂತಿದೆ. ಅದನ್ನು ಮುಗಿಸಲು ಯೋಗ್ಯತೆ ಇಲ್ಲದ ನೀವು ಈಗ ಕ್ರೀಡಾಂಗಣ ನಿರ್ಮಾಣಕ್ಕೆ ಕೈ ಹಾಕಿದ್ದೀರಾ, ನಿಲಸೋಗೆ ಬಳಿ 18 ಎಕರೆ ಜಮೀನಿದೆ. ಅಲ್ಲಿ ದೊಡ್ಡ ಕ್ರೀಡಾಂಗಣ ಮಾಡಿ. ಸರ್ಕಾರದ ಖಜಾನೆ ಖಾಲಿಯಾಗಿಲ್ಲದಿದ್ದರೆ ಭೂಮಿ ಖರೀದಿ ಮಾಡಿ, ಲೇಔಟ್ ಮಾಡು ವವರು 100 ರಿಂದ 200 ಎಕರೆ ಜಮೀನು ಖರೀದಿಸುತ್ತಾರೆ. ಅವರಿಗೆ ಸಿಗುವ ಜಮೀನು ನಿಮಗೆ ಸಿಗುವುದಿಲ್ಲವೇನು. ಪ್ರತಿ ತಾಲೂಕಿನಲ್ಲೂ ಕಾಂಗ್ರೆಸ್ ಕಚೇರಿ ಮಾಡಲು ನಿಮಗೆ ಜಮೀನು ಸಿಗುತ್ತದೆ. ಕ್ರೀಡಾಂಗಣ ಮಾಡಲು ಜಾಗ ಸಿಗುವುದಿಲ್ಲವೇ ಎಂದು ವ್ಯಂಗ್ಯವಾಡಿದರು.

ಒಂದಿಂಚೂ ಭೂಮಿ ಪರಭಾರೆ ಮಾಡಲು ಬಿಡಲ್ಲ: ಮೈಸೂರು ಮಹಾರಾಜರು ನೂರಾರು ಜನರಿಗೆ ಉದ್ಯೋಗ ದೊರಕಿಸಿಕೊಡಲು ಫ್ಯಾಕ್ಟರಿ ನಿರ್ಮಿಸಿದ್ದರು. ಅದನ್ನು ಉಳಿಸಿಕೊಳ್ಳಲು ಯೋಗ್ಯತೆ ಇಲ್ಲದ ನೀವು ಅದನ್ನು ಮುಚ್ಚಲು ಹುನ್ನಾರ ಮಾಡುತ್ತಿದ್ದೀರಾ. ಈ ಫ್ಯಾಕ್ಟರಿಯಿಂದ ಸಾವಿರಾರು ಕುಟುಂಬಗಳು ಜೀವನ ಸಾಗಿಸುತ್ತಿವೆ. ನೀವು ಅದಕ್ಕೂ ಕಲ್ಲು ಹಾಕಲು ಹೊರಟಿದ್ದೀರಾ. ಕಾರ್ಮಿಕರ ಪರವಾಗಿ ಒಂದು ಮಾತು ಹೇಳಲು ಬಯಸುತ್ತೇನೆ. ರೇಷ್ಮೆ ಕಾರ್ಖಾನೆಗೆ ಸೇರಿದ ಒಂದೇ ಒಂದು ಇಂಚು ಭೂಮಿಯನ್ನು ಪರಭಾರೆಯಾಗಲು ನಾವು ಬಿಡುವುದಿಲ್ಲ. ಫ್ಯಾಕ್ಟರಿ ಮುಚ್ಚುವ ಹುನ್ನಾರ ಸಹ ನಡೆಯಲು ಬಿಡುವುದಿಲ್ಲ ಎಂದು ಎಚ್ಚರಿಸಿದರು.

> ಪಾಕಿಸ್ತಾನದಲ್ಲಿ ಇಂಡಿಯಾದವರನ್ನು ನೋಡುವಂತೆ ತಿ.ನರಸೀಪುರದಲ್ಲಿ ಕಾಂಗ್ರೆಸ್‌ನವರು ಬಿಜೆಪಿಯವರನ್ನು ನೋಡುವ ಪರಿಸ್ಥಿತಿ ಇತ್ತು. ಪುರಸಭೆ ಸದಸ್ಯನಾಗಿದ್ದಾಗಲೂ ಪಟ್ಟಣದಲ್ಲಿ ನಡೆಯುತ್ತಿದ್ದ ಅನ್ಯಾಯ ವಿರೋಧಿಸಿದಾಗಲೆಲ್ಲಾ ಪಾಕಿಸ್ತಾನದಲ್ಲಿ ಇಂಡಿಯಾದವರ ತರಹ ದೂರ ಇಡುವ ಕೆಲಸವಾಗುತ್ತಿತ್ತು. ಇಂದು ನನಗೆ ಬಹಳ ಸಂತೋಷವಾಗಿದೆ. ನಮ್ಮ ಬೆಂಬಲಕ್ಕೆ ನಮ್ಮ ಪಕ್ಷದ ಹಿರಿಯ ನಾಯಕರು ಬಂದಿದ್ದಾರೆ. ಯಾವುದೇ ಕಾರಣಕ್ಕೂ ಯಾರೋ ರಾಜಕೀಯ ಪುಡಾರಿಗಳ ಹಿತಾಸಕ್ತಿಗೆ ನನ್ನೂರಿನ ಸಿಲ್ಕ್ ಫ್ಯಾಕ್ಟರಿ ಬಲಿ ಕೊಡಲು ಕೊನೆ ಉಸಿರಿರುವ ತನಕ ಬಿಡುವುದಿಲ್ಲ.
> – ಆರ್.ಅರ್ಜುನ್, ಪುರಸಭೆ ಮಾಜಿ ಸದಸ್ಯ.

ಜಿಲ್ಲಾಧಿಕಾರಿಗೆ ಎಚ್ಚರಿಕೆ ಕೊಟ್ಟು ಹೋಗ್ತೇನೆ: ಕ್ರೀಡಾಂಗಣ ನಿರ್ಮಿಸಲು ಗುರುತು ಹಾಕಿರುವ ಜಾಗದಲ್ಲಿ ಕಾಂಪೌಂಡ್ ನಿರ್ಮಿಸಿದರೆ ಅದರ ಪರಿಣಾಮ ಎದುರಿಸಲು ಸಿದ್ಧರಾಗಿರಬೇಕಾಗುತ್ತದೆ. ಈ ಬಗ್ಗೆ ಜಿಲ್ಲಾಧಿಕಾರಗಳಿಗೆ ಎಚ್ಚರಿಕೆ ನೀಡಿಯೇ ಹೋಗುತ್ತೇನೆ. ಕಾಮಗಾರಿ ಆರಂಭಿಸಿದರೆ ಮುತ್ತಿಗೆ ಹಾಕಿ ಉಗ್ರ ಪ್ರತಿಭಟನೆ ಮಾಡಲಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಅಧಿವೇಶನದಲ್ಲೂ ಚರ್ಚೆ: ಕ್ರೀಡಾಂಗಣ ನಿರ್ಮಾಣ ಕೈ ಬಿಡುವ ನಿರ್ಧಾರವನ್ನು ಮಾ.6ರೊಳಗೆ ಕೈಗೊಳ್ಳದಿದ್ದರೆ ಈ ಸಂಬಂಧ ಅಧಿವೇಶನದಲ್ಲಿ ಚರ್ಚೆ ಮಾಡುತ್ತೇನೆ. ಈ ವಿಷಯ ಅಧಿವೇಶನದಲ್ಲಿ ಚರ್ಚೆಯಾಗಬೇಕಾದರೆ, ಇಲ್ಲಿನ ಕಾರ್ಮಿಕರು ತೀವ್ರವಾದ ಹೋರಾಟಕ್ಕೆ ಮುಂದಾಗಬೇಕಾಗುತ್ತದೆ ಎಂದರು.

ಮಾಜಿ ಸಂಸದ ಪ್ರತಾಪ್ ಸಿಂಹ, ಮಾಜಿ ಸಚಿವ ಎನ್.ಮಹೇಶ್, ಮಾಜಿ ಶಾಸಕರಾದ ಸಿ.ರಮೇಶ್, ಬಾಲರಾಜ್, ಮೈಸೂರು ಜಿಲ್ಲಾ ಗ್ರಾಮಾಂತರ ಅಧ್ಯಕ್ಷ ಸುಬ್ಬಣ್ಣ, ಕ್ಷೇತ್ರಾಧ್ಯಕ್ಷ ಶಿವಕುಮಾರ್, ಡಾ.ರೇವಣ್ಣ, ಮೈಸೂರು ಜಿಲ್ಲೆ ಗ್ರಾಮಾಂತರ ಕಾರ್ಯದರ್ಶಿ, ಸಿದ್ದಪ್ಪ, ಪುರಸಭಾ ಮಾಜಿ ಸದಸ್ಯ ಎಸ್.ಕೆ.ಕಿರಣ್, ಜಿಲ್ಲಾ ಉಪಾಧ್ಯಕ್ಷ ಎನ್.ಎಂ.ರಾಮಚಂದ್ರ, ಮೈಸೂರು ಜಿಲ್ಲಾ ಗ್ರಾಮಾಂತರ ಎಸ್‌ಸಿ ಮೋರ್ಚಾ ಅಧ್ಯಕ್ಷ ಅನಿಲ್ ಕುಮಾರ್, ಮಾಧ್ಯಮ ವಕ್ತಾರ ದಯಾ ನಂದ್ ಪಟೇಲ್, ಪಿಎಸಿಎಸ್ ನಿರ್ದೇಶಕ ಪುಟ್ಟಸ್ವಾಮಿ, ಎಸ್‌ಸಿ ಮೋರ್ಚಾ ಅಧ್ಯಕ್ಷ ಚೌಹಳ್ಳಿ ಸಿದ್ದರಾಜು, ಕಾರ್ಯದರ್ಶಿ ಆಲಗೂಡು ಮಂಜು, ಪ್ರದೀಪ ಸೇರಿದಂತೆ ಮತ್ತಿತರರಿದ್ದರು.

ಬೀಚನಹಳ್ಳಿಯನ್ನು ಕಂದಾಯ ಗ್ರಾಮ ಮಾಡಲು ಸದನದಲ್ಲಿ ಪ್ರಸ್ತಾಪ



ಹೆಚ್.ಡಿ.ಕೋಟೆ ತಾಲೂಕಿನ ಬೀಚನಹಳ್ಳಿಯಲ್ಲಿ ಕಾಂಕ್ರೀಟ್ ರಸ್ತೆ, ಚರಂಡಿ ಕಾಮಗಾರಿಗೆ ಶಾಸಕ ಅನಿಲ್ ಚಿಕ್ಕಮಾದು ಭೂಮಿ ಪೂಜೆ ನೆರವೇರಿಸಿದರು.

ಹೆಚ್.ಡಿ.ಕೋಟೆ, ಫೆ.27– ತಾಲೂಕಿನ ಬೀಚನಹಳ್ಳಿ ಗ್ರಾಮವನ್ನು ಕಂದಾಯ ಗ್ರಾಮವಾಗಿ ಮಾಡಲು ಸದನದಲ್ಲಿ ಪ್ರಸ್ತಾಪಿಸುತ್ತೇನೆ ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ನೀರಾವರಿ ಇಲಾಖೆಯ 86 ಲಕ್ಷ ರೂ. ವೆಚ್ಚದಲ್ಲಿ ತಾಲೂಕಿನ ಬೀಚನಹಳ್ಳಿ ಸರ್ಕಾರಿ ಪದವಿಪೂರ್ವ ಕಾಲೇಜಿಗೆ ತೆರಳುವ ರಸ್ತೆಯಲ್ಲಿ ಕಾಂಕ್ರೀಟ್ ರಸ್ತೆ, ಚರಂಡಿ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಅವರು, ಕಾಲೇಜು ವಿದ್ಯಾರ್ಥಿಗಳು ಈ ರಸ್ತೆಯಲ್ಲಿ ಸಂಚರಿಸಲು ಸಮಸ್ಯೆಯಾಗುತ್ತಿದೆ ಎಂದು ಗ್ರಾಪಂ ಸದಸ್ಯ ಭಾಸ್ಕರ್ ಸಲ್ಲಿಸಿದ್ದ ಮನವಿ ಮೇರೆಗೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಲಾಗಿದೆ ಎಂದ ಅವರು, ಬೀಚನಹಳ್ಳಿಯನ್ನು ಕಂದಾಯ ಗ್ರಾಮವಾಗಿ ಮಾಡಲು ಕಂದಾಯ ಸಚಿವರು, ಮುಖ್ಯಮಂತ್ರಿಗಳ ಜೊತೆ ಚರ್ಚಿಸಿ ಸದನದಲ್ಲಿ ಈ ಸಂಬಂಧ ವಿಚಾರ ಮಂಡಿಸಲಾಗುವುದು ಎಂದರು.

ಈಗಾಗಲೇ ಜಲಾಶಯದ ಮುಂಭಾಗ 55 ಕೋಟಿ ವೆಚ್ಚದಲ್ಲಿ ಸ್ಟೀಲ್ ಸೇತುವೆ ಕಾಮಗಾರಿ ಪ್ರಗತಿಯಲ್ಲಿದ್ದು, ಹ್ಯಾಂಡ್ ಪೋಸ್ಟ್‌ನಿಂದ ಕಬಿನಿ ಡ್ಯಾಂವರೆಗೆ ಸಿಮೆಂಟ್ ರಸ್ತೆ ಕಾಮಗಾರಿ ಪೂರ್ಣಗೊಂಡಿದೆ. ಕಬಿನಿ ಬೃಂದಾವನ ಗಾರ್ಡನ್ ಅಭಿವೃದ್ಧಿಗೆ 50 ಕೋಟಿ ವೆಚ್ಚದ ಕ್ರಿಯಾ ಯೋಜನೆ ತಯಾರಾಗಿದ್ದು ಟೆಂಡರ್ ಹಂತಕ್ಕೆ ಬಂದಿದೆ. 60 ಕೋಟಿ ವೆಚ್ಚದಲ್ಲಿ ಕಬಿನಿ ನಾಲೆಗೆ ಲೈನಿಂಗ್ ಮತ್ತು ರಸ್ತೆ ಅಭಿವೃದ್ಧಿ ಪಡಿಸಲಾಗುವುದು ಎಂದರು.

ಈ ವೇಳೆ ಬೀಚನಹಳ್ಳಿ ಗ್ರಾಪಂ ಸದಸ್ಯ ಭಾಸ್ಕರ್, ಕಬಿನಿ ಸಹಾಯಕ ಕಾರ್ಯಪಾಲಕ ಅಭಿಯಂತರ ಗಣೇಶ್, ವಿಶ್ವನಾಥ್, ಪ್ರಾಂಶುಪಾಲ ಕಾಳಿಂಗೇಗೌಡ, ಉಪನ್ಯಾಸಕರಾದ ಶ್ರೀನಿವಾಸ್, ಕುಮಾರ್, ಹೇಮಂತ, ಮಣಿ, ಎಂ.ಕೆ.ನಾಗಣ್ಣ ಬಿ.ಎ. ಬಸಪ್ಪ, ಸೋಮಣ್ಣ, ರಮೇಶ್, ಗೋವಿಂದರಾಜು, ಮಧು, ಹೆಚ್.ಸಿ.ಮಂಜುನಾಥ್, ನರಸಿಂಹ ಮೂರ್ತಿ, ಅಶೋಕ್ ಇತರರಿದ್ದರು.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 9ರಲ್ಲಿ

ಒಂದನೇ ಪುಟದಿಂದ

ಡಿಕೆಶಿಗೆ ಸಿಎಂ ಪಟ್ಟ ಸುಳಿವು!

ಬೇಕಿದ್ದರೆ, ಯೋಗೇಶ್ವರ್ ನಮಗೆಲ್ಲಾ ಹಿರಿಯರು ಅವರ ನಾಯಕತ್ವದಲ್ಲೇ ಮುಂದೆ ನಾವೇನು ಮಾಡಬೇಕೆಂಬ ಬಗ್ಗೆ ಅವರೇ ಹೇಳಬೇಕು ಎಂದಿದ್ದಾರೆ. ನಾವು ಪದೇ ಪದೆ ಊಟಕ್ಕೆ ಸೇರುವುದರಿಂದ ಏನೂ ಪ್ರಯೋಜನ ಇಲ್ಲ. ಹೈಕಮಾಂಡ್‌ನಿಂದ ಬಂದಿರುವ ಸಂದೇಶ ಏನೆಂಬುದನ್ನು ಸುರೇಶ್ ಅವರನ್ನು ಭೇಟಿ ಮಾಡಿ ಖಚಿತಪಡಿಸಿಕೊಂಡು ಮುಂದೆ ತೀರ್ಮಾನ ಕೈಗೊಳ್ಳೋಣ. ಸದ್ಯಕ್ಕೆ ದುಡುಕುವುದು ಬೇಡ ಎಂದಿದ್ದಾರೆ. ಇದಕ್ಕೆ ಮಂಡ್ಯದ ರವಿ ಗಣಿಗ ಧ್ವನಿಗೂಡಿಸಿ, ಬರುವ ಸೋಮವಾರವೇ ಎಲ್ಲರೂ ಸೇರಿ ಸುರೇಶ್ ಅವರನ್ನು ಭೇಟಿ ಮಾಡುವ ಎಂಬ ತೀರ್ಮಾನ ಕೈಗೊಂಡಿದ್ದಾರೆ. ಬಾಲಕೃಷ್ಣ ಹುಟ್ಟು ಹಬ್ಬ ನೆಪವಷ್ಟೆ, ಶಿವಕುಮಾರ್ ಬೆಂಬಲಿಗರು ಶಕ್ತಿ ಪ್ರದರ್ಶನ ಮಾಡಬೇಕಿತ್ತು. ಈ ನೆಪದಲ್ಲಿ ರಾಜಕೀಯ ಚರ್ಚೆ ನಡೆಸಿದ್ದಲ್ಲದೆ, ಅವರೇ ಶಾಸಕರ ಜೊತೆ ಇರುವ ವಿಭಿನ್ನ ಫೋಟೋ ಹಂಚಿಕೊಂಡಿದ್ದಾರೆ.

ಇಂದಿನಿಂದ ದ್ವಿತೀಯ ಪಿಯು ಪರೀಕ್ಷೆ

ಉತ್ತರ ಪತ್ರಿಕೆ ನಿರ್ವಹಣೆ ಕೊಠಡಿಗಳಲ್ಲಿ ವೆಬ್‌ಕಾಸ್ಟಿಂಗ್ ನಡೆಯಲಿದ್ದು, ಜಿಲ್ಲಾಧಿಕಾರಿ ಕಚೇರಿ ಹಾಗೂ ಪರೀಕ್ಷಾ ಮಂಡಳಿಯಲ್ಲಿ ವೀಕ್ಷಣೆ ಮಾಡಲಾಗುತ್ತದೆ. ಪರೀಕ್ಷಾ ಕೇಂದ್ರಗಳಿಗೆ ಸಹ ಮುಖ್ಯ ಅಧೀಕ್ಷಕರು, ಸ್ಪೆಷಲ್ ಇನ್ವೆಸ್ಟಿಂಗ್ ಸ್ಕ್ವಾಡ್ ನೇಮಕ ಮಾಡಿದ್ದು, ನಗರ ಪ್ರದೇಶಕ್ಕೆ ಪ್ರತ್ಯೇಕವಾಗಿ ಪರೀಕ್ಷಾ ಮಂಡಳಿಯಿಂದ ಜಾಗೃತ ದಳವನ್ನು ರಚಿಸಲಾಗಿದೆ. ಈಗಾಗಲೇ ಪರೀಕ್ಷಾ ಮಂಡಳಿ, ಅಪರ ಜಿಲ್ಲಾಧಿಕಾರಿ ಹಾಗೂ ಪದವಿ ಪೂರ್ವ ಶಿಕ್ಷಣ ಇಲಾಖೆ ಉಪ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಎಲ್ಲಾ ಪರೀಕ್ಷಾ ಕೇಂದ್ರಗಳ ಮುಖ್ಯಸ್ಥರ ಸಭೆ ನಡೆಸಲಾಗಿದ್ದು, ಪ್ರವೇಶ ಪತ್ರಗಳನ್ನು ಅರ್ಹ ವಿದ್ಯಾರ್ಥಿಗಳಿಗೆ ವಿತರಿಸುವಂತೆ ಆಯಾ ಕಾಲೇಜು ಪ್ರಾಂಶುಪಾಲರಿಗೆ ಸೂಚಿಸಲಾಗಿದೆ ಎಂದು ಶಾಲಾ ಶಿಕ್ಷಣ ಇಲಾಖೆ(ಪದವಿ ಪೂರ್ವ) ಉಪ ನಿರ್ದೇಶಕರಾದ ಎಂ.ಪಿ.ನಾಗಮ್ಮ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಸಾರಿಗೆ ಬಸ್ ವ್ಯವಸ್ಥೆ: ಪರೀಕ್ಷೆ ನಡೆಯುವ ದಿನಗಳಂದು ವಿದ್ಯಾರ್ಥಿಗಳಿಗೆ ರಾಜ್ಯ ರಸ್ತೆ ಸಾರಿಗೆ ಬಸ್‌ಗಳಲ್ಲಿ ಉಚಿತ ಪ್ರಯಾಣದ ವ್ಯವಸ್ಥೆಯನ್ನು ಸರ್ಕಾರದಿಂದಲೇ ಮಾಡಲಾಗಿದ್ದು, ಪರೀಕ್ಷಾ ಕೇಂದ್ರಗಳ ಸುತ್ತಲಿನ 200 ಮೀಟರ್ ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ವಿಧಿಸಿ, ಆದೇಶಿಸಲಾಗಿದೆ. ಹಾಗೆಯೇ ಪರೀಕ್ಷಾ ಕೇಂದ್ರಗಳ ಸುತ್ತ ಪರೀಕ್ಷೆ ನಡೆಯುವ ದಿನಗಳು ಮಾತ್ರ ಜೆರಾಕ್ಸ್ ಮತ್ತು ಸೈಬರ್ ಕೇಂದ್ರಗಳನ್ನು ಮುಚ್ಚಲು ಕ್ರಮಕೈಗೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು.

ನಿಷೇಧ: ಪರೀಕ್ಷಾ ಕೇಂದ್ರಗಳಿಗೆ ಕಡ್ಡಾಯವಾಗಿ ಮೊಬೈಲ್ ಫೋನ್ ನಿಷೇಧಿಸಲಾಗಿದೆ. ಹಾಗೆಯೇ ಕುಡಿಯುವ ನೀರಿನ ವ್ಯವಸ್ಥೆ ಹಾಗೂ ಅಗತ್ಯ ತುರ್ತು ಚಿಕಿತ್ಸಾ ನೆರವು ನೀಡಲು ಆರೋಗ್ಯ ಇಲಾಖೆ ಸಿಬ್ಬಂದಿ ನಿಯೋಜಿಸುವ ಕ್ರಮಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ಫಲಿತಾಂಶ ಹೆಚ್ಚಳಕ್ಕೆ ಕ್ರಮ: ಕಳೆದ ಸಾಲಿನ ದ್ವಿತೀಯ ಪಿಯು ಪರೀಕ್ಷಾ ಫಲಿತಾಂಶದಲ್ಲಿ ಶೇ.74 ರಷ್ಟು ಫಲಿತಾಂಶದೊಂದಿಗೆ 14ನೇ ಸ್ಥಾನ ಪಡೆದ ಮೈಸೂರು ಜಿಲ್ಲೆಯಲ್ಲಿ ಫಲಿತಾಂಶ ಸುಧಾರಿಸುವ ನಿಟ್ಟಿನಲ್ಲಿ ಹಲವು ಶೈಕ್ಷಣಿಕ ಕಾರ್ಯಚಟುವಟಿಕೆ ಗಳನ್ನು ಹಮ್ಮಿಕೊಳ್ಳಲಾಗಿದೆ. ಈ ವರ್ಷ ಎರಡು ಬಾರಿ ಪೂರ್ವ ಸಿದ್ಧತಾ ಪರೀಕ್ಷೆ ನಡೆಸಿ ಜಿಪಿಎಸ್ ಫೋಟೋ ಕಳಿಸುವಂತೆ ಉಪನ್ಯಾಸಕರಿಗೆ ಸೂಚನೆ ನೀಡಲಾಗಿತ್ತು. ಜೊತೆಗೆ ಪೋಷಕರೊಂದಿಗೆ ಸಭೆ ನಡೆಸಿ, ವಿದ್ಯಾರ್ಥಿಗಳ ಓದಿಗೆ ಪೂರಕ ವಾತಾವರಣ ಮಾಡಿಕೊಡಬೇಕು ಎಂದು ತಿಳಿಸಲಾಗಿತ್ತು. ಒಟ್ಟಾರೆ ಈ ವರ್ಷ ದ್ವಿತೀಯ ಪಿಯು ಫಲಿತಾಂಶಕ್ಕಾಗಿ ಸಾಕಷ್ಟು ಪರಿಶ್ರಮ ಹಾಕಲಾಗಿದೆ ಎಂದು ಹೇಳಿದರು.

ಔತಣಕೂಟ; ಶಕ್ತಿ ಪ್ರದರ್ಶನ ಅಲ್ಲ

ಹೊಸ ಶಾಸಕರಿಗೆ ಮಂತ್ರಿ ಆಗಬೇಕೆಂಬ ಇಚ್ಛೆ ಇರುತ್ತದೆ. ತಮ್ಮ ಹಕ್ಕೋತ್ತಾಯಕ್ಕಾಗಿ ಔತಣಕೂಟ ಬಳಸಿಕೊಂಡಿರಬಹುದು. ಸಿದ್ದರಾಮಯ್ಯ, ನಾನು, ಪರಮೇಶ್ವರ್, ಎಚ್.ಕೆ.ಪಾಟೀಲ್, ಮಹದೇವಪ್ಪ ಎಲ್ಲರಿಗೂ ವಯಸ್ಸಾಗಿದೆ. ನಾವು ಚಿಕ್ಕ ವಯಸ್ಸಿನಲ್ಲೇ ಮಂತ್ರಿ ಆದೆವು. ಕೆಲವು ಶಾಸಕರಿಗೆ ತಾವೂ ಮಂತ್ರಿ ಆಗಬೇಕೆಂಬ ಆಸೆ ಇರುತ್ತದೆ. ನಮ್ಮನ್ನೂ ಮಂತ್ರಿ ಮಾಗಡಿ ಎಂಬುದಾಗಿ ಕೆಲವರು ಕೇಳುತ್ತಿದ್ದಾರೆ. ಇದು ಸಹಜ. ಕೆಪಿಸಿಸಿ ಅಧ್ಯಕ್ಷನಾಗಿ ಇವರ ಅಭಿಲಾಷೆಗಳನ್ನು ದೆಹಲಿ ನಾಯಕರ ಗಮನಕ್ಕೆ ತರುವುದಾಗಿ ತಿಳಿಸಿದರು.

ಶೇ.15ರಿಂದ 20ರಷ್ಟು ಹೆಚ್ಚಳ ಸಾಧ್ಯತೆ

ನಿರೀಕ್ಷೆ ಇದೆ. ಅಂದರೆ ವಾರ್ಷಿಕ ಗುರಿಯಲ್ಲಿ 3000 ಕೋಟಿ ರೂ. ಖೋತಾ ಆಗುವ ಸಾಧ್ಯತೆ ದಟ್ಟವಾಗಿದೆ.

30,000 ಕೋಟಿ ರೂ ಆದಾಯ ಟಾರ್ಗೆಟ್: ಮುಂದಿನ 2026–27ನೇ ಸಾಲಿಗೆ ಮುದ್ರಾಂಕ ಮತ್ತು ನೋಂದಣಿ ಶುಲ್ಕ ಮೂಲದಿಂದ 30,000 ಕೋಟಿ ರೂಪಾಯಿ ಆದಾಯ ಸಂಗ್ರಹ ಟಾರ್ಗೆಟ್ ನಿಗದಿಯಾಗುವ ಸಂಭವವಿದೆ. ಹಾಗಾಗಿ ಇಲಾಖೆಯು ಸ್ಥಿರಾಸ್ತಿಗಳ ಮಾರ್ಗಸೂಚಿ ದರ ಹೆಚ್ಚಳದ ಮೂಲಕ ಹೆಚ್ಚಿನ ಆದಾಯ ಸಂಗ್ರಹ ಪ್ರಯತ್ನಕ್ಕೆ ಮುಂದಾದಂತಿದೆ.

ಪ್ರತಿವರ್ಷ ಪರಿಷ್ಕರಣೆಗೂ ಅವಕಾಶ: ಸ್ಥಿರಾಸ್ತಿಗಳ ಮಾರ್ಗಸೂಚಿ ದರವನ್ನು ಪ್ರತಿವರ್ಷ ಪರಿಷ್ಕರಿಸಲು ನಿಯಮಗಳಲ್ಲಿ ಅವಕಾಶವಿದ್ದು, ಹಲವು ರಾಜ್ಯಗಳು ಪ್ರತಿವರ್ಷ ಆ ಪ್ರಕ್ರಿಯೆ ನಡೆಸುತ್ತವೆ. ಮಾರ್ಗಸೂಚಿ ದರ ಪರಿಷ್ಕರಣೆಯಾಗದಿದ್ದರೂ ಮಾರುಕಟ್ಟೆ ದರ ಏರುತ್ತಲೇ ಇರುತ್ತದೆ. ಆ ಹಿನ್ನೆಲೆಯಲ್ಲಿ ಮಾರ್ಗಸೂಚಿ ದರ ಪರಿಷ್ಕರಣೆ ಚಿಂತನೆ ನಡೆದಿದೆ. ಈ ಸಂಬಂಧ ಪೂರ್ವಭಾವಿ ಸಿದ್ಧತೆ ಈಗಷ್ಟೇ ಆರಂಭವಾಗಿದ್ದು, ಅಂತಿಮ ನಿರ್ಧಾರ ಕೈಗೊಳ್ಳಬೇಕಿದೆ ಎಂದು ಮೂಲಗಳು ಹೇಳಿವೆ. ರಾಜ್ಯಾದ್ಯಂತ 259 ಉಪ ನೋಂದಣಿ ಕಚೇರಿಗಳಿದ್ದು, ಅದರಲ್ಲಿ 43 ಕಚೇರಿಗಳು ಬೆಂಗಳೂರು ನಗರ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿವೆ. ರಾಜ್ಯದಲ್ಲಿ ವಾರ್ಷಿಕವಾಗಿ 22ರಿಂದ 24 ಲಕ್ಷ ಸ್ಥಿರಾಸ್ತಿ ನೋಂದಣಿ, ಇತರೆ ದಸ್ತಾವೇಜು ಪ್ರಕ್ರಿಯೆಗಳಾಗುತ್ತಿದ್ದು, ಅದರಲ್ಲಿ ಶೇ.60ರಷ್ಟು ನೋಂದಣಿ, ದಸ್ತಾವೇಜುಗಳು ಬೆಂಗಳೂರಿನ ಕಚೇರಿ ಗಳಲ್ಲಿ ನಡೆಯುತ್ತಿವೆ. ಮಾರ್ಗಸೂಚಿ ದರ ಪರಿಷ್ಕರಣೆಯಿಂದ ಸ್ಥಿರಾಸ್ತಿಗಳ ಮೌಲ್ಯವೂ ಪರಿಷ್ಕರಣೆಯಾಗಲಿದೆ ಎಂದು ಹೇಳಿವೆ.

ಹಲ್ಲೆ; ನಾಪೋಕ್ಲುವಿನಲ್ಲಿ ಬಿಗುವಿನ ಪರಿಸ್ಥಿತಿ

ಎರಡು ಕಡೆಯೂ ವಾಹನಗಳು ಸಾಲುಗಟ್ಟಿ ನಿಂತಿದ್ದು, ಸಂಚಾರ ಅಸ್ತವ್ಯಸ್ತಗೊಂಡಿತ್ತು. ಶನಿವಾರ (ಫೆ.28) ಬಲ್ಲಮಾವಟಿಯಲ್ಲಿ ಹಿಂದು ಸಂಗಮ ಸಮಾವೇಶವನ್ನು ಏರ್ಪಡಿಸಲಾಗಿದ್ದು, ಕೆ.ಜಿ.ಬೋಪಯ್ಯ ಸೇರಿದಂತೆ ಹಿಂದು ಪರ ಸಂಘಟನೆಗಳ ಮುಖಂಡರು ಮತ್ತು ಕಾರ್ಯಕರ್ತರು ವಾಹನಗಳಲ್ಲಿ ಕೇಸರಿ ಧ್ವಜ, ಧ್ವನಿವರ್ಧಕಗಳು ಸೇರಿದಂತೆ ಇನ್ನಿತರ ಸಾಮಗ್ರಿಗಳೊಂದಿಗೆ ವಾಹನಗಳಲ್ಲಿ ಪ್ರಚಾರದಲ್ಲಿ ತೊಡಗಿದ್ದರು. ನಾಪೋಕ್ಲುವಿನಲ್ಲಿರುವ ಪೊನ್ನಾಡು ಸೂಪರ್ ಮಾರ್ಕೆಟ್‌ನಲ್ಲಿ ಕೆಲವು ಪದಾರ್ಥಗಳ ಖರೀದಿಗಾಗಿ ಹಿಂದೂ ಪರ ಸಂಘಟನೆಯ ಕಾರ್ಯಕರ್ತ ಗೌತಮ್ ತಮ್ಮ ಜೀಪನ್ನು ನಿಲ್ಲಿಸಿದ್ದರು. ಪದಾರ್ಥಗಳನ್ನು ಖರೀದಿಸಿ ಬಂದು, ಜೀಪನ್ನು ಹತ್ತಿ ಚಾಲನೆ ಮಾಡಲು ಮುಂದಾಗಿದ್ದಾರೆ.

ಈ ವೇಳೆ ಅನ್ಯಕೋಮಿನ ವ್ಯಕ್ತಿಯೊಬ್ಬ ಬಂದು ಜೀಪಿನ ಮೇಲೆ ಕಟ್ಟಿರುವುದು ಏನು? ಯಾಕೆ ಹಾಗೆ ಕಟ್ಟಿದ್ದೀಯಾ? ಎಂದು ಪ್ರಶ್ನಿಸಿದ್ದಾನೆ. ಆಗ ಗೌತಮ್ ಜೀಪಿಗೆ ಕಟ್ಟಿರುವುದು ಕೇಸರಿ ಧ್ವಜ. ನಾಳೆ(ಫೆ.28) ಬಲ್ಲಮಾವಟಿಯಲ್ಲಿ ಹಿಂದು ಸಂಗಮ ಸಮಾವೇಶವಿರುವುದರಿಂದ ಪ್ರಚಾರಕ್ಕಾಗಿ ಕಟ್ಟಲಾಗಿದೆ ಎಂದು ತಿಳಿಸಿದ್ದಾರೆ.

ಏಕಾಏಕಿ ಕುಪಿತಗೊಂಡ ಅನ್ಯಕೋಮಿನ ಯುವಕ ಅವಾಚ್ಯ ಶಬ್ದಗಳಿಂದ ನಿಂದಿಸುತ್ತಾ, ಕಬ್ಬಿಣದ ರಾಡು ತಂದು ಗೌತಮ್ ತಲೆ ಸೇರಿದಂತೆ ದೇಹದ ಇನ್ನಿತರ ಕಡೆ ಹಲ್ಲೆ ನಡೆಸಿದ್ದಾನೆ. ಇದನ್ನು ನೋಡಿದ ಇನ್ನೂ ಮೂರ್‍ನಾಲ್ಕು ಮಂದಿ ಅನ್ಯಕೋಮಿನ ಯುವಕರು ಬ್ಯಾಟು ಮತ್ತು ದೊಣ್ಣೆಗಳೊಂ ದಿಗೆ ಹಲ್ಲೆ ನಡೆಸಿದ್ದಾರೆ ಎಂದು ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಲಾಗಿದೆ.

> ಶನಿವಾರ ಬಲ್ಲಮಾವಟಿಯಲ್ಲಿ ನಡೆಯುವ ಹಿಂದೂ ಸಂಗಮ ಸಮಾವೇಶಕ್ಕೆ ಬಿಗಿ ಪೊಲೀಸ್ ಬಂದೋಬಸ್ತ್ ಕಲ್ಪಿಸಲು ನಾನು ಕೊಡಗು ಜಿಲ್ಲಾ ಪೊಲೀಸ್ ಅಧೀಕ್ಷಕರೊಂದಿಗೆ ಮಾತನಾಡಿದ್ದೇನೆ. ಶಾಂತಿಯುತವಾಗಿ ಪ್ರಚಾರ ನಡೆಸುತ್ತಿದ್ದ ಹಿಂದೂ ಕಾರ್ಯಕರ್ತರ ಮೇಲೆ ದುಷ್ಕರ್ಮಿಗಳು ಹಲ್ಲೆ ಮಾಡಿರುವುದನ್ನು ಖಂಡಿಸಿ, ಈ ಕುರಿತಾಗಿ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದ್ದೇನೆ. ನಾಳೆ (ಶನಿವಾರ) ನಡೆಯಲಿರುವ ಹಿಂದೂ ಸಂಗಮ ಕಾರ್ಯಕ್ರಮವು ಯಾವುದೇ ಅಡ್ಡಿ–ಆತಂಕವಿಲ್ಲದೆ ಜರುಗಲಿದೆ ಹಾಗೂ ಎಲ್ಲರೂ ಶಾಂತತೆಯನ್ನು ಕಾಪಾಡಿಕೊಂಡು ಪೊಲೀಸರ ಸುರಕ್ಷಿತ ಪ್ರಯತ್ನ ಹಾಗೂ ತುರ್ತು ಕ್ರಮಕ್ಕೆ ಸಹಕರಿಸಬೇಕೆಂದು ವಿನಂತಿಸುತ್ತೇನೆ.
> - ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸಂಸದರು.

ಅಷ್ಟರಲ್ಲೇ ಹಲ್ಲೆ ನಡೆದ ವಿಷಯ ತಿಳಿದ ಹಿಂದೂ ಪರ ಸಂಘಟನೆಗಳು ಸ್ಥಳಕ್ಕೆ ಬರುತ್ತಿದ್ದಂತೆ ಆರೋಪಿಗಳು ಕೆಂಪು ಬಣ್ಣದ ಜೀಪಿನಲ್ಲಿ ಕಾಡಿನ ಪ್ರದೇಶದತ್ತ ಪರಾರಿಯಾಗಿದ್ದಾರೆ ಎನ್ನಲಾಗಿದೆ. ತಕ್ಷಣ ಹಲ್ಲೆಗೆ ಒಳಗಾಗಿದ್ದ ಗೌತಮ್‌ನನ್ನು ಆಸ್ಪತ್ರೆಗೆ ಕರೆದೊಯ್ದು ದಾಖಲು ಮಾಡಲಾಗಿದೆ.

ಇತ್ತ ಹಿಂದೂ ಪರ ಸಂಘಟನೆಗಳ ಕಾರ್ಯಕರ್ತರು ಕೆ.ಜಿ.ಬೋಪಯ್ಯ, ಮನು ಮುತ್ತಪ್ಪನವರ ನೇತೃತ್ವದಲ್ಲಿ ರಸ್ತೆ ಮಧ್ಯೆ ಕುಳಿತು ಹಿಂದೂ ಪರ ಘೋಷಣೆಗಳ ಕೂಗಿ ಹಲ್ಲೆ ನಡೆಸಿದವರ ಬಂಧನಕ್ಕೆ ಆಗ್ರಹಿಸಿದರಲ್ಲದೆ, ರಾಜ್ಯ ಸರ್ಕಾರದ ವಿರುದ್ಧವೂ ಘೋಷಣೆ ಕೂಗಲಾರಂಭಿಸಿದರು. ಹಲ್ಲೆ ವಿಚಾರ ತಿಳಿದು ಜನರು ಭಾರೀ ಸಂಖ್ಯೆಯಲ್ಲಿ ಜಮಾಯಿಸಿದ್ದರಿಂದ ಪರಿಸ್ಥಿತಿ ವಿಕೋಪಕ್ಕೆ ಹೋಯಿತು.

ವಿಷಯ ತಿಳಿದ ಡಿವೈಎಸ್ಪಿ ಚಂದ್ರಶೇಖರ್, ಸರ್ಕಲ್ ಇನ್ಸ್‌ಪೆಕ್ಟರ್‌ಗಳಾದ ಅನೂಪ ಮಾದಪ್ಪ ಚಂದ್ರಶೇಖರ್ ಅವರುಗಳು ಸಿಬ್ಬಂದಿಗಳೊಂದಿಗೆ ಪ್ರತಿಭಟನಾ ಸ್ಥಳಕ್ಕೆ ಬಂದು ಪ್ರತಿಭಟನಾಕಾರರ ಮನವೊಲಿಸಲು ಯತ್ನಿಸಿದರು. ಆದರೆ ಪ್ರತಿಭಟನಾಕಾರರು ಇದಕ್ಕೆ ಜಪ್ಪಯ್ಯ ಅನ್ನಲಿಲ್ಲ. ತಕ್ಷಣ ಆರೋಪಿಗಳ ವಿರುದ್ಧ ಎಫ್‌ಐಆರ್ ದಾಖಲಾಗಬೇಕು. ಅವರನ್ನು ಬಂಧಿಸಬೇಕು ಎಂದು ಆಗ್ರಹಿಸಿದರು. ಪೊಲೀಸರು ಸ್ಥಳದಲ್ಲೇ ದೂರು ಪಡೆದು, ಎಫ್‌ಐಆರ್ ದಾಖಲಿಸಿದ್ದಾರೆ. ಈ ವೇಳೆ ಪ್ರತಿಭಟನೆ ಹಿಂತೆಗೆದುಕೊಂಡ ಮುಖಂಡರು, ನಾಳೆ (ಶನಿವಾರ) ಮಧ್ಯಾಹ್ನದೊಳಗೆ ಆರೋಪಿಗಳನ್ನು ಬಂಧಿಸದಿದ್ದರೆ, ಬಲ್ಲಮಾವಟಿಯಲ್ಲಿ ಹಿಂದೂ ಸಂಗಮ ಸಮಾವೇಶ ಮುಗಿಸಿಕೊಂಡು ನೇರವಾಗಿ ಪೊಲೀಸ್ ಠಾಣೆಗೆ ಬಂದು ಮುತ್ತಿಗೆ ಹಾಕುವುದಾಗಿ ಎಚ್ಚರಿಕೆ ನೀಡಿದರು. ಈ ಮಧ್ಯೆ ಹಿಂದೂ ಮುಖಂಡನ ಮೇಲೆ ಅನ್ಯಕೋಮಿನ ಯುವಕರು ಹಲ್ಲೆ ನಡೆಸಿದ ವಿಚಾರ ಎಲ್ಲೆಡೆ ಹರಡಿದ್ದು, ಜನರು ಅಲ್ಲಲ್ಲಿ ಗುಂಪು ಗುಂಪಾಗಿ ನಿಂತು ಚರ್ಚಿಸುತ್ತಿರುವುದರಿಂದ ಪಟ್ಟಣ ಮತ್ತು ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿದೆ.

ಪೊಲೀಸರು ಪಟ್ಟಣದಾದ್ಯಂತ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಿದ್ದು, ಆಯಕಟ್ಟಿನ ಸೂಕ್ಷ್ಮ ಪ್ರದೇಶಗಳಲ್ಲಿ ಪೊಲೀಸ್ ತುಕಡಿಯನ್ನು ನಿಯೋಜಿಸಲಾಗಿದೆ. ಪ್ರಕರಣ ಕುರಿತು ನಾಪೋಕ್ಲು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರೆದಿದೆ.

ನೂಲು ಖರೀದಿಸುವ ಸಲುವಾಗಿ ಕೆಎಸ್‌ಐಸಿಗೆ ಎಳ್ಳು–ನೀರು!

ಮೌಲ್ಯವುಳ್ಳ ಮರಗಳಿದ್ದು, ಪಕ್ಷಿ ಸಂಕುಲಕ್ಕೆ ಆಶ್ರಯ ತಾಣವಾಗಿದೆ. ಈಗ ಕ್ರೀಡಾಂಗಣಕ್ಕಾಗಿ ಇಡೀ ಪರಿಸರವನ್ನು ಹಾಳು ಮಾಡುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಅಲ್ಲಿ ರೇಷ್ಮೆ ಹುಳ ಬೇಯಿಸುವ ಮೂರು ದೊಡ್ಡ ಬಾಯ್ಲರ್‌ಗಳಿವೆ. ಕ್ರೀಡಾಂಗಣ ನಿರ್ಮಿಸಿದರೆ ಅದೇನಾದರೂ ಸ್ಫೋಟವಾಗಿ ಪಕ್ಕದಲ್ಲಿ ಕ್ರೀಡಾಪಟುಗಳಿಗೆ ಅಪಾಯವಾದರೆ ಯಾರು ಹೊಣೆ ಎಂದು ಪ್ರಶ್ನಿಸಿದ ಅಶೋಕ್, ಕಾರ್ಖಾನೆಯಲ್ಲಿ ಬಳಕೆ ಮಾಡುವ ಕಲ್ಲಿದ್ದಲು ಧೂಳು ನಡುವೆ ಕ್ರೀಡಾ ಚಟುವಟಿಕೆ ಹೇಗೆ ಸಾಧ್ಯ ಎಂದು ಮರು ಪ್ರಶ್ನಿಸಿದರು.

98 ಕೋಟಿ ಲಾಭ: ಕೆಎಸ್‌ಐಸಿ ಕಾರ್ಖಾನೆಯಿಂದ 98 ಕೋಟಿ ರೂಪಾಯಿ ಲಾಭ ಬಂದಿದೆ. ಇದನ್ನು ಕಾರ್ಖಾನೆ ಅಭಿವೃದ್ಧಿಗೆ ಬಳಸದೆ ಬೆಸ್ಕಾಂನಲ್ಲಿ ಠೇವಣಿ ಇಟ್ಟಿದ್ದಾರೆ. ನಷ್ಟದಲ್ಲಿದ್ದರೆ ಕಾರ್ಖಾನೆ ಮುಚ್ಚಿಸುವುದಕ್ಕೂ ಒಂದು ಕಾರಣವಿದೆ ಎನ್ನಬಹುದು, ಆದರೆ ಲಾಭದಲ್ಲಿರುವ ಕಾರ್ಖಾನೆ ಏಕೆ ಮುಚ್ಚಿಸುತ್ತಿದ್ದಾರೆ ಎಂದು ಪ್ರಶ್ನಿಸಿದರು.

ಈ ಕಾರ್ಖಾನೆ ಮಹತ್ವ ಅರಿತು ಸರ್ಕಾರ ಈ ಕೂಡಲೇ ಕ್ರೀಡಾಂಗಣ ಯೋಜನೆ ಕೈ ಬಿಡಬೇಕು. ಇಲ್ಲದಿದ್ದರೆ ಮಾರ್ಚ್ 6 ರಿಂದ ಆರಂಭವಾಗುವ ವಿಧಾನಸಭಾ ಅಧಿವೇಶನದಲ್ಲಿ ಸರ್ಕಾರದ ಕ್ರಮದ ವಿರೋಧ ಹೋರಾಟ ಮಾಡುತ್ತೇವೆ. ಅಷ್ಟೇ ಅಲ್ಲದೆ ಸದನದ ಹೊರಗೆ ಕೂಡ ಪ್ರತಿಭಟನೆ ತೀವ್ರಗೊಳಿಸುತ್ತೇವೆ ಎಂದು ಅಶೋಕ್ ಎಚ್ಚರಿಸಿದರು.

ಶಾಸಕ ಟಿ.ಎಸ್.ಶ್ರೀವತ್ಸ, ಮಾಜಿ ಸಂಸದ ಪ್ರತಾಪ್ ಸಿಂಹ, ಮಾಜಿ ಶಾಸಕ ಹರ್ಷವರ್ಧನ್, ಮಾಜಿ ಮೇಯರ್ ಶಿವಕುಮಾರ್, ಮುಖಂಡ ಸತೀಶ್ ಅಮು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಕಾಂಗ್ರೆಸ್ ಮುಖಂಡನಿಗೆ ಕ್ರೀಡಾಂಗಣ ಗುತ್ತಿಗೆ; 60 ಪರ್ಸೆಂಟ್ ಕಮಿಷನ್ ಒಪ್ಪಂದ!

ತಿ.ನರಸೀಪುರದ ಕೆಎಸ್‌ಐಸಿ ಫಿಲೇಚರ್ ಫ್ಯಾಕ್ಟರಿ ಆವರಣದಲ್ಲಿ ನಿರ್ಮಾಣ ಮಾಡಲುದ್ದೇಶಿಸಿರುವ ಕ್ರೀಡಾಂಗಣದ ಗುತ್ತಿಗೆಯನ್ನು ಕಾಂಗ್ರೆಸ್‌ನ ಪ್ರಭಾವಿ ನಾಯಕನೊಬ್ಬನಿಗೆ ನೀಡಿದ್ದಾರೆ. ಆತನಿಂದಲೂ ಶೇಕಡ 60 ಪರ್ಸೆಂಟ್ ಕಮಿಷನ್ ಪಡೆಯಲು ಎಲ್ಲಾ ಸಿದ್ಧತೆ ಮಾಡಿಕೊಂಡಿದ್ದಾರೆ ಎಂದು ಅಶೋಕ್ ದೂರಿದರು.

ಕಾಂಗ್ರೆಸ್ ನಾಯಕನಿಗೆ ಗುತ್ತಿಗೆ ಕೊಡಲಿ ಅಥವಾ ಬೇರೆಯವರಿಗೆ ಕೊಡಲಿ, ಕಮಿಷನ್ ಅಂತೂ ಇವರ ಕೈ ಸೇರಬೇಕು. ಶೇಕಡ 60 ಪರ್ಸೆಂಟ್ ಕಮಿಷನ್ ಅಂದರೆ ಕನಿಷ್ಠ ಆರೇಳು ಕೋಟಿ ಸಿಗುತ್ತದೆ. ಆದ ಕಾರಣ ತರಾತುರಿಯಲ್ಲಿ ಕ್ರೀಡಾಂಗಣ ನಿರ್ಮಾಣಕ್ಕೆ ಮುಂದಾಗಿದ್ದಾರೆ.

ನಾನು ಒಬ್ಬ ಕಬಡ್ಡಿ ಕ್ರೀಡಾಪಟುವಾಗಿದ್ದು, ಕ್ರೀಡಾಂಗಣ ನಿರ್ಮಾಣಕ್ಕೆ ನನ್ನ ವಿರೋಧವಿಲ್ಲ. ಆದರೆ ಒಂದು ಕ್ರೀಡಾಂಗಣಕ್ಕೆ 112 ವರ್ಷಗಳ ಇತಿಹಾಸವಿರುವ ಕಾರ್ಖಾನೆ ಮುಚ್ಚಿಸುತ್ತಿರುವುದು ಎಷ್ಟು ಸರಿ ಎಂದು ಪ್ರಶ್ನಿಸಿದರು.

ಪ್ರತಿಯೊಂದು ಜಿಲ್ಲೆ ಹಾಗೂ ತಾಲೂಕು ಕೇಂದ್ರಗಳಲ್ಲಿ ಕಾಂಗ್ರೆಸ್ ಕಚೇರಿ ನಿರ್ಮಾಣ ಮಾಡಲು ಖರಾಬು ಭೂಮಿಯನ್ನು ಸರ್ಕಾರ ನೀಡುತ್ತಿದೆ. ಈಗ ಕಾರ್ಖಾನೆ ಜಾಗ ಬಿಟ್ಟು ಬೇರೆ ಕಡೆ ಇರುವ ಸರ್ಕಾರದ ಖರಾಬು ಭೂಮಿಯಲ್ಲಿ ಕ್ರೀಡಾಂಗಣ ನಿರ್ಮಾಣ ಮಾಡಲಿ, ಇಲ್ಲವೆಂದರೆ ಖಾಸಗಿಯವರಿಂದ ಖರೀದಿಸಲಿ ಎಂದು ಅಶೋಕ್ ಸಲಹೆ ನೀಡಿದರು.

ಇಲ್ಲೆ ಕ್ರೀಡಾಂಗಣ ನಿರ್ಮಾಣ ಮಾಡುವಂತೆ ದೇವರೇನು ಇವರ ಕನಸ್ಸಿನಲ್ಲಿ ಬಂದು ಹೇಳಿದ್ದಾನಾ ಅಥವಾ ಬೋರ್ ವೆಲ್ ಕೊರೆಸುವಾಗ ತೆಂಗಿನ ಕಾಯಿ ಹಿಡಿದು ಸುತ್ತಾಡಿ ಜಾಗ ನಿಗದಿ ಮಾಡಿದಂತೆ ಇಲ್ಲಿ ಏನಾದರೂ ಸಚಿವ ಡಾ.ಮಹದೇವಪ್ಪ ಅವರು ತೆಂಗಿನ ಕಾಯಿ ಹಿಡಿದು ಕ್ರೀಡಾಂಗಣಕ್ಕೆ ಜಾಗ ಗೊತ್ತು ಮಾಡಿದ್ದಾರೆಯೇ ಎಂದು ಅಶೋಕ್ ಗೇಲಿ ಮಾಡಿದರು.

ಮೈಸೂರಲ್ಲಿ 6ನೇ ಕಿಸಾನ್ ಸ್ವರಾಜ್ ಸಮ್ಮೇಳನ ಆರಂಭ

ನಾವೀಗ ಸೇವಿಸುತ್ತಿರುವ ಆಹಾರ ಪದಾರ್ಥಗಳು ವಿಷಕಾರಿ..!

● ಕೆಎಸ್‌ಓಯು ಕುಲಪತಿ ಪ್ರೊ. ಶರಣಪ್ಪ ವಿ.ಹಲಸೆ ಆತಂಕ ● ಭವಿಷ್ಯದ ಆಪತ್ತಿನಿಂದ ಪಾರಾಗಲು ಸಾವಯವ ಕೃಷಿಯೊಂದೇ ಪರಿಹಾರ

ಮೈಸೂರು, ಫೆ.27(ಎಂಟಿವೈ)– ಕೃಷಿಯಲ್ಲಿ ಮಿತಿ ಮೀರಿದ ರಸಾಯನಿಕ ಗೊಬ್ಬರ ಹಾಗೂ ಕೀಟನಾಶಕದ ಪರಿಣಾಮ ದವಸ–ಧಾನ್ಯ ಸೇರಿದಂತೆ ನಾವು ಸೇವಿಸುವ ಆಹಾರ ಪದಾರ್ಥಗಳು ವಿಷಯುಕ್ತವಾಗಿದ್ದು, ಭವಿಷ್ಯದ ನಾಶ ತಡೆಗಟ್ಟಲು ಸಾವಯವ ಕೃಷಿ ಪದ್ಧತಿಗೆ ಪ್ರೋತ್ಸಾಹ ನೀಡುವ ಅವಶ್ಯಕತೆಯಿದೆ ಎಂದು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಶರಣಪ್ಪ ವಿ.ಹಲಸೆ ಅಭಿಪ್ರಾಯಪಟ್ಟಿದ್ದಾರೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭವನದಲ್ಲಿ ಆಶಾ ಕಿಸಾನ್ ಸ್ವರಾಜ್, ಮುಕ್ತ ವಿವಿಯ ಪ್ರಸಾರಾಂಗದ ಸಹಯೋಗದಲ್ಲಿ ಆಯೋಜಿಸಿದ್ದ ಮೂರು ದಿನಗಳ '6ನೇ ಕಿಸಾನ್ ಸ್ವರಾಜ್ ಸಮ್ಮೇಳನ'ವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಉನ್ನತ ಶಿಕ್ಷಣ ನೀಡುವುದರೊಂದಿಗೆ ದೇಶದ ಬೆನ್ನೆಲುಬಾದ ರೈತರಿಗೆ ನೆರವಾಗುವ ನಿಟ್ಟಿನಲ್ಲಿ ಕಿಸಾನ್ ಸ್ವರಾಜ್ ಸಮ್ಮೇಳನಕ್ಕೆ ಮುಕ್ತ ವಿಶ್ವವಿದ್ಯಾನಿಲಯ ಸಹಕಾರ ನೀಡಿದೆ. ದೇಶಕ್ಕೆ 1947ರಲ್ಲಿ ಸ್ವಾತಂತ್ರ್ಯ ಸಿಕ್ಕ ನಂತರ ಆಹಾರಕ್ಕೆ ಹಾಹಾಕಾರ ಉಂಟಾಗಿತ್ತು. ಈ ಹಿನ್ನೆಲೆಯಲ್ಲಿ ಹಸಿರು ಕ್ರಾಂತಿ ಮೂಲಕ ಆಹಾರ ಉತ್ಪನ್ನಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಉತ್ಪಾದಿಸಲಾಯಿತು. ಈ ವೇಳೆ ರಾಸಾಯನಿಕ ಪದಾರ್ಥ ಬಳಸಿದ ಪರಿಣಾಮ ಬೆಳೆ ಹೆಚ್ಚಾಗಿ ಬಂದವು. ಅಂದು ಆರಂಭವಾದ ರಾಸಾಯನಿಕ ಪದಾರ್ಥ ಬಳಕೆ ಇಂದಿಗೂ ಮುಂದುವರೆಯುತ್ತಾ ಬಂದಿದೆ. ಇದರಿಂದ ಭವಿಷ್ಯ ವಿನಾಶದತ್ತ ಸಾಗುತ್ತಿದೆ. ತಿನ್ನುವ ಆಹಾರ ಪದಾರ್ಥಗಳೆಲ್ಲವೂ ವಿಷಯುಕ್ತವಾಗಿವೆ. ಇದರಿಂದ ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದೆ. ಆರೋಗ್ಯವಂತ ಸಮಾಜ ನಿರ್ಮಾಣ ಹಾಗೂ ಜನರ ಆರೋಗ್ಯ ಕಾಪಾಡಿಕೊಳ್ಳಲು ಸಾವಯವ ಪದ್ಧತಿಯಲ್ಲಿ ಬೆಳೆದ ಆಹಾರ ಉತ್ಪನ್ನಗಳನ್ನು ಬಳಸುವ ಅನಿವಾರ್ಯತೆ ಎದುರಾಗಿದೆ ಎಂದರು.

ಸಾವಯವ ಕೃಷಿ ಪದ್ಧತಿ ಉತ್ತೇಜಿಸಲು ಕ್ರಮ ಕೈಗೊಳ್ಳಬೇಕು. ಇದರಿಂದ ಜನರಿಗೆ ವಿಷಮುಕ್ತ ಆಹಾರ ಪದಾರ್ಥ ಸರಬರಾಜು ಮಾಡಬಹುದು. ಬೆಳೆದ ಬೆಳೆಗಳಿಗೆ ಸೂಕ್ತ ಬೆಲೆ ಸಿಗದ ಕಾರಣ ರೈತರು ಸಂಕಷ್ಟಕ್ಕೀಡಾಗಿದ್ದಾರೆ. ಈ ಹಿನ್ನೆಲೆಯಲ್ಲಿ ರೈತರನ್ನು ಹಾಗೂ ಸಾವಯವ ಕೃಷಿ ಪದ್ಧತಿಯನ್ನು ಉಳಿಸುವ ಮೂಲಕ ದೇಶ ಉಳಿಸಬೇಕಾಗಿದೆ. ಇಂತಹ ಸಮ್ಮೇಳನಗಳು ಹೆಚ್ಚಾಗಿ ಆಯೋಜಿಸಿ, ರೈತರು ಎದುರಿಸುತ್ತಿರುವ ಸಮಸ್ಯೆಗಳನ್ನು ಚರ್ಚಿಸಬೇಕು. ಅಲ್ಲದೆ, ರೈತರು ಹಾಗೂ ಕೃಷಿ ಕ್ಷೇತ್ರದ ಸಮಸ್ಯೆ ಬಗೆಹರಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಬೇಕು ಎಂದು ಸಲಹೆ ನೀಡಿದರು.



ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭವನದಲ್ಲಿ ಆರಂಭವಾದ ಮೂರು ದಿನಗಳ '6ನೇ ಕಿಸಾನ್ ಸ್ವರಾಜ್ ಸಮ್ಮೇಳನ'ದ ವಸ್ತುಪ್ರದರ್ಶನಕ್ಕೆ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಚಾಲನೆ ನೀಡಿದರು.

ರೈತರಿಗೆ ಮಾರಕ ಒಪ್ಪಂದ: ಕೇರಳ ಜೈವ ಕರ್ಷಕ ಸಮಿತಿ ಅಧ್ಯಕ್ಷ ವಿಶಾಲಾಕ್ಷನ್ ಮಾತನಾಡಿ, ಕೇಂದ್ರ ಸರ್ಕಾರ ರಾಜಕೀಯ ಕಾರಣಗಳಿಗೆ ವಿದೇಶಗಳಿಗೆ ಶರಣಾಗಿ ಒಪ್ಪಂದ ಮಾಡಿಕೊಳ್ಳುತ್ತಿರುವುದು, ಭಾರತದ ರೈತರಿಗೆ ಮಾರಕವಾಗಿದೆ. ಕೇಂದ್ರ ಸರ್ಕಾರದ ನೂತನ ಮಸೂದೆಗಳು ರೈತರ ಪರವಾಗಿಲ್ಲ. ಬೀಜ, ವಿದ್ಯುಚ್ಛಕ್ತಿ ಮಸೂದೆಗಳು ರೈತರಿಗೆ ಮಾರಕವಾಗಿವೆ. ಸಂಸತ್ತಿನಲ್ಲಿ ರೈತರ ಪರವಾಗಿ ಚರ್ಚೆ ನಡೆಯುತ್ತಿಲ್ಲ. ಅಮೆರಿಕದೊಂದಿಗೆ ವ್ಯಾಪಾರ ಒಪ್ಪಂದದ ಬಗ್ಗೆ ಚರ್ಚೆಯಾಗಬೇಕಿತ್ತು. ರೈತರಿಗಿಂತ ವ್ಯಾಪಾರ ಉದ್ದೇಶ ಮುಖ್ಯವಾಗಿರುವುದು ವಿಷಾದನೀಯ. ಜಲ ಮೂಲಗಳ ಸಂರಕ್ಷಣೆ, ಒಣ ಭೂಮಿ, ಹಿಮಾಲಯ ಪ್ರದೇಶ ಸೇರಿ ಭಾರತದ ಪ್ರಾಕೃತಿಕ ಪರಿಸರವನ್ನು ಸಂರಕ್ಷಿಸಬೇಕು. ಮಣ್ಣಿನ ಆರೋಗ್ಯ ಕಾಪಾಡಿಕೊಳ್ಳಬೇಕು. ನೈಸರ್ಗಿಕವಾದ ಆಹಾರ ಪದ್ಧತಿ ಅಳವಡಿಸಿಕೊಳ್ಳಬೇಕು. ಆರೋಗ್ಯಕರ ಜೀವನ ಕೊಡುವುದು ನಿಜವಾದ ರೈತನ ಜವಾಬ್ದಾರಿ ಎಂದು ಹೇಳಿದರು.

ಸ್ವಾವಲಂಬಿಯಾಗಬೇಕು: ರೈತರು ತಮ್ಮ ವ್ಯವಸಾಯ ಪದ್ಧತಿಯಲ್ಲಿ ಬದಲಾವಣೆ ಮಾಡಿದರೆ ನೆಮ್ಮದಿಯ ಜೀವನ ನಡೆಸಬಹುದು. ಕಂಪನಿ ವಸ್ತುಗಳನ್ನು ತ್ಯಜಿಸಿದರೆ ನೆಮ್ಮದಿಯ ಜೀವನ ನಡೆಸಬಹುದು. ರೈತರು ಕತ್ತೆ ದುಡಿಯುವಂತೆ ದುಡಿಯದೇ ಸಂತೋಷದಿಂದ ಬದುಕಬಹುದಾಗಿದೆ. ನಾಲ್ಕು ಕಂಪನಿಗಳು ಹಿಡಿತದಲ್ಲಿ ಶೇ.70 ಷೇರು ಇದೆ. ಇವರು ದೇಶದ ಜನರ ರಕ್ತ ಹೀರುತ್ತ ಲಾಭ ಮಾಡುತ್ತಿದ್ದಾರೆ. ರಸಾಯನಿಕ ಗೊಬ್ಬರ, ಕೀಟನಾಶಕ ಬಳಸಿ ವ್ಯವಸಾಯ ಮಾಡಿದರೆ ಅನಾರೋಗ್ಯ ಬರಲೇಬೇಕು ಎಂದು ಕಿಡಿಕಾರಿದರು.

ರೈತರಿಗೆ ಪಾರಂಪರಿಕ ಬೀಜ ಕೈಗೆ ಸಿಕ್ಕರೆ ವಿಷವರ್ತುಲದಿಂದ ಪಾರಾಗುತ್ತಾರೆ. ಗುಲಾಮ ಪದ್ಧತಿಯಿಂದ ಬಿಡುಗಡೆ ಪಡೆದರೆ ಸ್ವಾವಲಂಬಿಗಳಾಗಬಹುದು. ಸಹಜ ಕೃಷಿಗೆ ಶ್ರಮ ಕಡಿಮೆ. ಉಳುಮೆ ಮಾಡಬೇಕಿಲ್ಲ. ಗೊಬ್ಬರ ಹಾಕಬೇಕಿಲ್ಲ. ಕೀಟ ನಾಶಕ ಹಾಕುವಂತಿಲ್ಲ. ಕಳೆ ನಿರ್ಮೂಲನೆ ಮಾಡದೇ ಇಳುವರಿ ಪಡೆಯಬಹುದಾಗಿದೆ ಎಂದು ವಿವರಿಸಿದರು.

ಹೈದರಾಬಾದ್ ಸುಸ್ಥಿರ ಕೃಷಿ ಕೇಂದ್ರದ ನಿರ್ದೇಶಕ ಡಾ.ಜಿ.ವಿ.ರಾಮಾಂಜನೇಯುಲು ಮಾತನಾಡಿ, ಕಳೆದ 2 ದಶಕಗಳಲ್ಲಿ ರೈತರಲ್ಲದವರು ಭೂಮಿ ಖರೀದಿಸಿ ವ್ಯವಸಾಯದಲ್ಲಿ ತೊಡಗಿದ್ದಾರೆ. ರೈತ ಕಾರ್ಮಿಕರ ಕೂಲಿ ಹೆಚ್ಚಳವಾಗಿದೆ. ಪಾರಂಪರಿಕ ಬೇಸಾಯ ಪದ್ಧತಿಯ ಕೊಂಡಿ ಕಳಚಿದೆ. ಭವಿಷ್ಯದಲ್ಲಿ ಸಂಕಷ್ಟ ತರಲಿದೆ ಎಂದು ಹೇಳಿದರು.

ಈಕ್ವೇಟರ್ ಇನಿಷಿಯೇಟಿವ್ ಪ್ರಶಸ್ತಿ ಪುರಸ್ಕೃತೆ ಬೀಜ ತಜ್ಞರಾದ ಧಾರವಾಡದ ಬೀಬಿಜಾನ್ ಮಾತನಾಡಿ, ಸರ್ಕಾರಗಳು ಸಿರಿಧಾನ್ಯ ಬೆಳೆಯುವ ರೈತರನ್ನು ಪ್ರೋತ್ಸಾಹಿಸಬೇಕು. ಸಿರಿಧಾನ್ಯಗಳಿಗೆ ಬೆಂಬಲ ಬೆಲೆ ಕೊಡಬೇಕು. ರೈತ ಮಹಿಳೆಯರು ತಮ್ಮ ಕುಟುಂಬಕ್ಕೆ ಬೇಕಾದ ತರಕಾರಿ, ಸೊಪ್ಪು, ಹಣ್ಣುಗಳನ್ನು ಬೆಳೆದು ತಮ್ಮ ಕುಟುಂಬದ ಆರೋಗ್ಯ ಕಾಪಾಡಿಕೊಳ್ಳಬೇಕು. ನಾವು ಸಾವಯವ ಪದ್ಧತಿಯಲ್ಲಿ ಸಿರಿಧಾನ್ಯ ಬೆಳೆಯುತ್ತಿದ್ದೇವೆ. ಕೆಲವು ಜಮೀನುದಾರರಿಂದ ಭೂಮಿಯನ್ನು ಭೋಗ್ಯಕ್ಕೆ ಪಡೆದು ಸಿರಿಧಾನ್ಯ ಬೆಳೆಯುತ್ತಿದ್ದೇವೆ. ಆರೋಗ್ಯ ಕಾಪಾಡಿಕೊಳ್ಳಲು ಸಿರಿಧಾನ್ಯಗಳ ಬಳಕೆ ಮಹತ್ವದ್ದಾಗಿದ್ದು, ರೈತರು ಸಿರಿಧಾನ್ಯ ಬೆಳೆಯಲು ಮುಂದಾಗಬೇಕು. ಕೃಷಿ ಚಟುವಟಿಕೆಗಳಲ್ಲಿ ರೈತರು ಮಾಡುವ ಕೆಲಸಗಳಿಗೆ ಅವರ ಮನೆಯ ಮಹಿಳೆಯರೂ ಸಾಥ್ ನೀಡಿದರೆ, ಕೃಷಿ ಚಟುವಟಿಕೆ ಇನ್ನಷ್ಟು ಪರಿಣಾಮಕಾರಿ ನಡೆಯುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮುಕ್ತ ವಿಶ್ವವಿದ್ಯಾನಿಲಯದ ಕುಲಸಚಿವ ಪ್ರೊ.ಎಸ್.ಕೆ.ನವೀನ್ ಕುಮಾರ್, ಶೈಕ್ಷಣಿಕ ಡೀನ್ ಪ್ರೊ.ಎಂ.ರಾಮನಾಥ ನಾಯ್ಡು, ಪ್ರಸಾರಾಂಗ ನಿರ್ದೇಶಕ ಡಾ.ಸಂತೋಷ್ ನಾಯಕ್ ಆರ್, ಆಶಾ ಕಿಸಾನ್ ಸ್ವರಾಜ್ ಸಂಚಾಲಕಿ ಕವಿತಾ ಕುರುಗಂಟಿ, ಮಹಿಳಾ ಅಧಿಕಾರ್ ಮಂಚ್ ಕವಿತಾ ಶ್ರೀನಿವಾಸನ್, ಪ್ರಸಾರಾಂಗದ ಸಹಾಯಕ ನಿರ್ದೇಶಕ ಮುನಿಸ್ವಾಮಿ ಇನ್ನಿತರರು ಉಪಸ್ಥಿತರಿದ್ದರು.

ಗಮನ ಸೆಳೆದ ವಸ್ತುಪ್ರದರ್ಶನ

ಮುಕ್ತ ವಿಶ್ವವಿದ್ಯಾನಿಲಯದ ಆಟದ ಮೈದಾನದಲ್ಲಿ ಸಾವಯವ ಕೃಷಿ ಪದ್ಧತಿಯಲ್ಲಿ ಬೆಳೆದ ಕೃಷಿ ಉತ್ಪನ್ನಗಳ ಮಾರಾಟ, ಹಣ್ಣು–ತರಕಾರಿ, ಸಿರಿಧಾನ್ಯ, ಸಿರಿಧಾನ್ಯಗಳಿಂದ ಮಾಡಿರುವ ತಿನಿಸು ಮಾರಾಟ, ಪಾನೀಯ, ದೇಸಿ ಉಡುಪು ಮಾರಾಟ ಮಳಿಗೆ, ಎಣ್ಣೆ ತಯಾರಿಕಾ ಗಾಣದ ಪ್ರಾತ್ಯಕ್ಷಿಕೆ, ಒನಕೆಯಲ್ಲಿ ಭತ್ತ ಕುಟ್ಟುವ ಪ್ರಾತ್ಯಕ್ಷಿಕೆ, ಕೈ ತೋಟ ನಿರ್ಮಾಣದ ತರಬೇತಿ ಇನ್ನಿತರ ಪ್ರದರ್ಶನ ಗಮನ ಸೆಳೆಯುತ್ತಿದೆ. ಕರ್ನಾಟಕ, ಕೇರಳ, ತಮಿಳುನಾಡು, ಆಂಧ್ರ ತೆಲಂಗಾಣ, ಮಹಾರಾಷ್ಟ್ರ ಸೇರಿದಂತೆ ವಿವಿಧೆಡೆಯಿಂದ ರೈತರು ಆಗಮಿಸಿದ್ದಾರೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಭಾರತಿ ಟೀಚರ್ –1 ಪ್ರದರ್ಶನ (ಕ), ಫೋರ್ತ್ ಫ್ಲೋರ್–3 ಪ್ರದರ್ಶನ (ತಮಿಳು)	
ವುಡ್‌ಲ್ಯಾಂಡ್ಸ್	(ದೂ: 2422871)
ರೈಸ್ ಆಫ್ ಅಶೋಕ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಓ ರೋಮಿಯೋ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಹಯಗ್ರೀವ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಲ್ಯಾಂಡ್ ಲಾರ್ಡ್ (ಕ)	4 ಪ್ರದರ್ಶನಗಳು
ರಾಜಕಮಲ್	
ತಾಯಿ ಕಿಳವಿ (ತ)	4 ಪ್ರದರ್ಶನಗಳು
ಸಂಗಂ	
ಹಯಗ್ರೀವ (ಕ)	4 ಪ್ರದರ್ಶನಗಳು
ಲಿಡೋ	
ವೀರ ಕಂಬಳ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಸೂರಿ ಅಣ್ಣ (ಕ)	4 ಪ್ರದರ್ಶನಗಳು

ಇಮ್ಮಾವು ಜಮೀನಿನ ಗೇಣಿದಾರರಿಗೆ ಪರಿಹಾರಕ್ಕೆ ಆಗ್ರಹಿಸಿ ಮುಂದುವರೆದ ಧರಣಿ



ಭೂ ಪರಿಹಾರಕ್ಕೆ ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘದ ವತಿಯಿಂದ ಜಿಲ್ಲಾಧಿಕಾರಿ ಕಚೇರಿ ಎದುರು ಕೈಗೊಂಡಿರುವ ಅನಿರ್ದಿಷ್ಟಾವಧಿ ಧರಣಿ ಎರಡನೇ ದಿನಕ್ಕೆ ಕಾಲಿಟ್ಟಿದೆ.

ಮೈಸೂರು, ಫೆ.27(ಎಂಕೆ)– ನಂಜನಗೂಡು ತಾಲೂಕು ಇಮ್ಮಾವು ಗ್ರಾಮದ ಸರ್ವೆ ನಂ.390 ರಿಂದ 430ರವರೆಗಿನ ಜಮೀನು ಗೇಣಿದಾರರಿಗೆ ಪರಿಹಾರ ಪಾವತಿಸುವಂತೆ ಹಾಗೂ ಕಾನೂನು ಬಾಹಿರವಾಗಿ ಪರಿಹಾರ ಪಡೆದವರ ವಿರುದ್ಧ ಕಾನೂನು ಕ್ರಮಕ್ಕೆ ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘದ ವತಿಯಿಂದ ಜಿಲ್ಲಾಧಿಕಾರಿ ಕಚೇರಿ ಎದುರು ಕೈಗೊಂಡಿರುವ ಅನಿರ್ದಿಷ್ಟಾವಧಿ ಧರಣಿ ಎರಡನೇ ದಿನಕ್ಕೆ ಕಾಲಿಟ್ಟಿದೆ.

ಸರ್ಕಾರ ಹಾಗೂ ಕೆಐಎಡಿಬಿ (ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ) ವಿರುದ್ಧ ಧಿಕ್ಕಾರ ಕೂಗುತ್ತಾ ಆಕ್ರೋಶ ಹೊರಹಾಕುತ್ತಿರುವ ಪ್ರತಿಭಟನಾಕಾರರು, ಚಿತ್ರನಗರಿಗಾಗಿ ಭೂಮಿ ಕಳೆದುಕೊಂಡು ಅನ್ಯಾಯಕ್ಕೊಳಗಾದ ನೈಜ ರೈತರಿಗೆ ನ್ಯಾಯ ಒದಗಿಸಬೇಕು ಹಾಗೂ ಗಾಲ್ಫ್ ಕಂಪನಿಗೆ ಭೂಮಿ ಕಳೆದುಕೊಂಡ ಕೋಚನಹಳ್ಳಿ ರೈತರಿಗೆ ಉದ್ಯೋಗ ಮತ್ತು ನಿವೇಶನ ನೀಡುವಂತೆ ಆಗ್ರಹಿಸಿದರು.

ಕರ್ನಾಟಕ ರಾಜ್ಯ ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಿ.ಮರಂಕಯ್ಯ, ಯುವ ಘಟಕದ ಅಧ್ಯಕ್ಷ ಪ್ರೇಮ್ ರಾಜ್, ತಾಲೂಕು ಯುವ ಘಟಕದ ಅಧ್ಯಕ್ಷ ಮೈದನಹಳ್ಳಿ ಮಹೇಶ್, ಕೋಚನಹಳ್ಳಿ ಮತ್ತು ಇಮ್ಮಾವು ರೈತರು ಹಾಗೂ ರೈತ ಮಹಿಳೆಯರು ಭಾಗವಹಿಸಿದ್ದರು.

ಭಾರತ–ಇಸ್ರೇಲ್ ನಡುವೆ ವಿಶೇಷ ತಂತ್ರಾತ್ಮಕ ಪಾಲುದಾರಿಕೆ ಒಪ್ಪಂದ



ಇಸ್ರೇಲ್: ಭಾರತ ಮತ್ತು ಇಸ್ರೇಲ್ ಪರಸ್ಪರ ಸಂಬಂಧಗಳನ್ನು ವಿಶೇಷ ತಂತ್ರಾತ್ಮಕ ಪಾಲುದಾರಿಕೆ ಮಟ್ಟಕ್ಕೆ ಹೆಚ್ಚಿಸಿದ್ದು, ರಕ್ಷಣಾ, ವ್ಯಾಪಾರ, ತಂತ್ರಜ್ಞಾನ ಮತ್ತು ಪ್ರಾದೇಶಿಕ ಸಂಪರ್ಕ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸಹಕಾರವನ್ನು ಮತ್ತಷ್ಟು ಗಾಢಗೊಳಿಸುವ ಸಂದೇಶ ರವಾನಿಸಿವೆ.

ಕಳೆದ ಒಂಬತ್ತು ವರ್ಷಗಳಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಇಸ್ರೇಲ್‌ಗೆ ಎರಡನೇ ಭೇಟಿ ನೀಡಿದ್ದು, ಎರಡೂ ದೇಶಗಳು ಮಧ್ಯಪೂರ್ವ ಪ್ರದೇಶದಲ್ಲಿನ ಭಯೋತ್ಪಾದನೆ ಮತ್ತು ಅಸ್ಥಿರತೆಯ ಕುರಿತು ತಮ್ಮ ಹಂಚಿಕೆಯ ಚಿಂತನೆಗಳನ್ನೂ ನಡೆಸಿವೆ.

ಇಸ್ರೇಲ್ ಪ್ರಧಾನಮಂತ್ರಿ ಬೆಂಜಮಿನ್ ನೆತನ್ಯಾಹು ಅವರೊಂದಿಗೆ ಪ್ರತಿನಿಧಿ ಮಟ್ಟದ ಮಾತುಕತೆಗಳ ಬಳಿಕ ಮೋದಿ ಅವರು ಈ ಸಂಬಂಧವನ್ನು ಕಾಲಪರೀಕ್ಷೆಯನ್ನು ಎದುರಿಸಿದ ಮತ್ತು ನಂಬಿಕೆ ಹಾಗೂ ಪ್ರಜಾಸತ್ತಾತ್ಮಕ ಮೌಲ್ಯಗಳ ಮೇಲೆ ಆಧಾರಿತವಾಗಿದೆ ಎಂದು ವರ್ಣಿಸಿದ್ದಾರೆ.

ನಮ್ಮ ಸಂಬಂಧ ಗಾಢ ನಂಬಿಕೆ, ಹಂಚಿಕೆಯ ಪ್ರಜಾಸತ್ತಾತ್ಮಕ ಮೌಲ್ಯಗಳು ಮತ್ತು ಮಾನವೀಯ ಸಂವೇದನೆಗಳ ಬಲವಾದ ಅಡಿಪಾಯದ ಮೇಲೆ ನಿಂತಿದೆ. ಪ್ರತಿಯೊಂದು ಕಾಲಪರೀಕ್ಷೆಯನ್ನೂ ನಮ್ಮ ಬಾಂಧವ್ಯ ಯಶಸ್ವಿಯಾಗಿ ಎದುರಿಸಿದೆ ಎಂದು ಜಂಟಿ ಪತ್ರಿಕಾಗೋಷ್ಠಿಯಲ್ಲಿ ಮೋದಿ ಹೇಳಿದ್ದಾರೆ.

ಇಂದು, ನಮ್ಮ ಕಾಲಪರೀಕ್ಷಿತ ಪಾಲುದಾರಿಕೆಯನ್ನು ವಿಶೇಷ ತಂತ್ರಾತ್ಮಕ ಪಾಲುದಾರಿಕೆ ಮಟ್ಟಕ್ಕೆ ಏರಿಸುವ ಐತಿಹಾಸಿಕ ನಿರ್ಧಾರವನ್ನು ಕೈಗೊಂಡಿದ್ದೇವೆ. ಇಸ್ರೇಲ್‌ನಲ್ಲಿ ಯುಪಿಐ ಬಳಕೆಗೆ ಒಪ್ಪಂದ ಸಾಧಿಸಲಾಗಿದೆ. ಭಯೋತ್ಪಾದನೆ ಮತ್ತು ಅದನ್ನು ಬೆಂಬಲಿಸುವವರ ವಿರುದ್ಧ ನಾವು ಹೆಗಲಿಗೆ ಹೆಗಲು ಕೊಟ್ಟು ಹೋರಾಡುತ್ತೇವೆ ಎಂದು ಮೋದಿ ತಿಳಿಸಿದ್ದಾರೆ.

ಆಯುರ್ವೇದ, ಯುನಾನಿ, ಸಿದ್ಧ ವೈದ್ಯರ ಮೇಲೆ ದಂಡ ವಿಧಿಸುವ ಕ್ರಮಕ್ಕೆ ರಾಜ್ಯ ಹೈಕೋರ್ಟ್ ತಡೆ

ಮೈಸೂರು,ಫೆ.27(ಜಿಎ)–ಆರೋಗ್ಯ ಇಲಾಖೆಯೂ ಆಯುರ್ವೇದ, ಯುನಾನಿ ಮತ್ತು ಸಿದ್ಧ ವೈದ್ಯರ ಮೇಲೆ ದಂಡ ವಿಧಿಸುವ ಕ್ರಮಕ್ಕೆ ಹೈಕೋರ್ಟ್ ತಡೆ ನೀಡಿದೆ ಎಂದು ಭಾರತೀಯ ಸಂಯುಕ್ತ ವೈದ್ಯ ಪದ್ಧತಿಗಳ ಸಂಸ್ಥೆಯ ರಾಜ್ಯಾಧ್ಯಕ್ಷ ಸಿದ್ದಪ್ಪ ಮಾಗಾರಿ ತಿಳಿಸಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಿದ್ದಪ್ಪ ಮಾಗಾರಿ ಮಾತನಾಡುತ್ತಿರುವುದು

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹೈಕೋರ್ಟ್ ವಿಚಾರಣೆ ಪೂರ್ಣಗೊಳಿಸುವವರೆಗೂ ಜಿಲ್ಲಾ ಆರೋಗ್ಯ ಇಲಾಖೆ ಅಧಿಕಾರಿಗಳು ದಂಡ ವಿಧಿಸುವ ಕ್ರಮಕ್ಕೆ ಮುಂದಾಗಬಾರದು ಎಂದು ಮನವಿ ಮಾಡಿದರು.

ಸಮಗ್ರ ವೈದ್ಯಕೀಯ ಪದ್ಧತಿ ಆಧಾರದ ಮೇಲೆ ಆಯುಷ್ ವೈದ್ಯರು ಅಲೋಪತಿ ಚಿಕಿತ್ಸೆ ನೀಡುತ್ತಿದ್ದಾರೆ. ಇದು ಇವರ ವ್ಯಾಸಂಗದ ವೇಳೆಯ ಪಠ್ಯ ವಿಷಯವೂ ಆಗಿದೆ. ಆದರೂ ಯಾರು ಯಾರೋ ನೀಡುವ ದೂರನ್ನಾಧರಿಸಿ ಅವರ ಕ್ಲಿನಿಕ್‌ಗಳ ಮೇಲೆ ಆರೋಗ್ಯ ಇಲಾಖೆ ಅಧಿಕಾರಿಗಳು ದಾಳಿ ಮಾಡಿ ದಂಡ ವಿಧಿಸುತ್ತಿರುವುದು ಸರಿಯಲ್ಲ ಎಂದರು.

ಭಾರತೀಯ ವೈದ್ಯ ಪದ್ಧತಿಗಳ ವೈದ್ಯರು ಅವರ ಪಠ್ಯಕ್ರಮ ಮತ್ತು ತರಬೇತಿ ಆಧರಿಸಿ ಚಿಕಿತ್ಸೆ ನೀಡುತ್ತಿದ್ದಾರೆ ಮತ್ತು ಅವರ ಪಠ್ಯಕ್ರಮ ಸಂಯೋಜಿತ ಮಾದರಿಯಲ್ಲಿ ಇದ್ದು ಶೇ.40 ರಷ್ಟು ಆಧುನಿಕ ವೈದ್ಯ ವಿಜ್ಞಾನದ ವಿಷಯಗಳನ್ನು ಹೊಂದಿದೆ ಹಾಗೂ ಭಾರತೀಯ ವೈದ್ಯಕೀಯ ಪದ್ಧತಿಯ ರಾಷ್ಟ್ರೀಯ ಆಯೋಗ ಈ ವೈದ್ಯರುಗಳಿಗೆ ಹಲವಾರು ಹಕ್ಕುಗಳನ್ನು ಮತ್ತು ಸವಲತ್ತು ಗಳನ್ನು ನೀಡಿದೆ. ಇಂತಹ ಹಕ್ಕುಗಳನ್ನು ದಮನ ಮಾಡಿ ಅವರು ಅಧ್ಯಯನ ಮಾಡಿದ ಆಧುನಿಕ ವೈದ್ಯ ವಿಜ್ಞಾನದ ವಿಷಯವನ್ನು ಚಿಕಿತ್ಸೆಯಲ್ಲಿ ಅಳವಡಿಸಿದರೆ ಅದು ಅಪರಾಧ ಎಂದು ಪರಿಗಣಿಸುವುದು ಸರಿಯಲ್ಲ ಎಂದು ಬೇಸರಿಸಿದರು.

ಇದಲ್ಲದೆ ದಾಳಿ ಮಾಡಿದ ಬಳಿಕ ಅಂತಹವರನ್ನು ನಕಲಿ ವೈದ್ಯ ಎಂಬ ಶಬ್ದ ಬಳಸಿ ತೇಜೋವಧೆ ಮಾಡುವುದು ಶಿಕ್ಷಾರ್ಹವಾಗಿದೆ ಎಂದು ಎಚ್ಚರಿಸಿದರು.

ಸುದ್ದಿಗೋಷ್ಠಿಯಲ್ಲಿ ಮೈಸೂರು ಜಿಲ್ಲಾ ಘಟಕದ ಅಧ್ಯಕ್ಷರಾದ ಡಾ.ಜಗದೀಶ ನಾಯಕ ಮತ್ತು ಕಾರ್ಯದರ್ಶಿ ಡಾ.ಮಧುದರ್ಶನ್ ಮತ್ತಿತರರು ಉಪಸ್ಥಿತರಿದ್ದರು.

ಕ್ರಿಕೆಟರ್ ರಿಂಕು ಸಿಂಗ್‌ಗೆ ಪಿತೃ ವಿಯೋಗ



ಉತ್ತರ ಪ್ರದೇಶ: ಟೀಮ್ ಇಂಡಿಯಾದ ಸ್ಟಾರ್ ಬ್ಯಾಟರ್ ರಿಂಕು ಸಿಂಗ್ ತಂದೆ ಖಚಂದ್ರ ಸಿಂಗ್ ಅವರು ಗ್ರೇಟರ್ ನೋಯ್ಡಾದ ಯಥಾರ್ಥ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೆ ಇಂದು ಕೊನೆಯುಸಿರೆಳೆದಿದ್ದಾರೆ.

ಅನೇಕ ದಿನಗಳಿಂದ 4ನೇ ಹಂತದ ಲಿವರ್ ಕ್ಯಾನ್ಸರ್ ವಿರುದ್ಧ ಹೋರಾಡುತ್ತಿದ್ದ ಖಚಂದ್ರ ಸಿಂಗ್ ಸ್ಥಿತಿ ಕಳೆದ ಒಂದು ವಾರದಿಂದ ಅತ್ಯಂತ ಗಂಭೀರವಾಗಿತ್ತು. ಲಿವರ್ ಫೇಲ್ಯೂರ್ ಜೊತೆಗೆ ಕಿಡ್ನಿ ಸಮಸ್ಯೆಗಳೂ ಕಾಣಿಸಿಕೊಂಡಿದ್ದರಿಂದ ಅವರನ್ನು ವೆಂಟಿಲೇಟರನಲ್ಲಿ ಇರಿಸಲಾಗಿತ್ತು. ಮೂತ್ರಪಿಂಡ ಬದಲಿ ಚಿಕಿತ್ಸೆ ನೀಡುತ್ತಿದ್ದರೂ, ಅದಕ್ಕೆ ದೇಹ ಸ್ಪಂದಿಸಲಿಲ್ಲ. ಇಂದು ಮುಂಜಾನೆ ಅವರ ಸ್ಥಿತಿ ಮತ್ತಷ್ಟು ಹದಗೆಟ್ಟು ಮೃತಪಟ್ಟಿದ್ದಾರೆ ಎಂದು ಆಸ್ಪತ್ರೆಯ ಮೂಲಗಳು ದೃಢಪಡಿಸಿವೆ.

ಆರ್ಥಿಕ ಸಂಕಷ್ಟದ ಹಿನ್ನಲೆಯಲ್ಲಿ ಖಚಂದ್ರ ಸಿಂಗ್, ಅಲಿಗಢದಲ್ಲಿ ಮನೆ ಮನೆಗೆ ಗ್ಯಾಸ್ ಸಿಲಿಂಡರ್ ವಿತರಿಸುವ ಕೆಲಸ ಮಾಡುತ್ತಲೇ ಮಗನ ಕ್ರಿಕೆಟ್ ಕನಸಿಗೆ ನೀರೆರೆದಿದ್ದರು. ರಿಂಕು ಸಿಂಗ್ ಐಪಿಎಲ್ ಮತ್ತು ಟೀಮ್ ಇಂಡಿಯಾದಲ್ಲಿ ಕೋಟಿಗಟ್ಟಲೆ ಸಂಭಾವನೆ ಪಡೆಯುವ ಸ್ಟಾರ್ ಆಟಗಾರನಾದ ಮೇಲೂ ಅವರ ತಂದೆ ಖಚಂದ್ರ ತಮ್ಮ ಸಿಲಿಂಡರ್ ವಿತರಿಸುವ ವೃತ್ತಿಯನ್ನು ಮುಂದುವರಿಸಿದ್ದರು ಎನ್ನಲಾಗಿದೆ.

'ಪರಿಸರ ಸಂರಕ್ಷಣೆಯಲ್ಲಿ ಯುವ ಜನರ ಪಾತ್ರ' ವಿಚಾರ ಸಂಕಿರಣ

ಅಭಿವೃದ್ಧಿ ಹೆಸರಲ್ಲಿ ಪರಿಸರಕ್ಕೆ ಹಾನಿ ಗಂಭೀರ ವಿಷಯ

ಅಪರ ಜಿಲ್ಲಾಧಿಕಾರಿ ಡಾ. ಶಿವರಾಜ್ ಆತಂಕ

ಮೈಸೂರು, ಫೆ.27(ಎಂಟಿವೈ)– ಹವಾಮಾನ ಬದಲಾವಣೆ, ಅರಣ್ಯ ನಾಶ, ನೀರಿನ ಕೊರತೆ ಮತ್ತು ಪ್ಲಾಸ್ಟಿಕ್ ಮಾಲಿನ್ಯವು ನಮ್ಮ ಭವಿಷ್ಯಕ್ಕೆ ಸವಾಲಾಗಿ ಪರಿಣಮಿಸಿದ್ದು, ಯುವ ಜನರು ಪರಿಸರ ಸಂರಕ್ಷಣೆ ಪಣ ತೊಡಬೇಕು ಎಂದು ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜ್ ಸಲಹೆ ನೀಡಿದ್ದಾರೆ.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಗ್ರಾಮೀಣ ಶಿಕ್ಷಣ ಮತ್ತು ಆರೋಗ್ಯ ಸಂಸ್ಥೆ(ಆರ್‌ಎಲ್‌ಹೆಚ್‌ಪಿ), ಕರ್ನಾಟಕ ಸ್ಟೇಟ್ ಯೂತ್ ನೆಟ್‌ವರ್ಕ್ ಹಾಗೂ 'ಪರಿಸರಕ್ಕಾಗಿ ನಾವು' ಸಂಘಟನೆ ವತಿಯಿಂದ ಆಯೋಜಿಸಿದ್ದ 'ಪರಿಸರ ಸಂರಕ್ಷಣೆಯಲ್ಲಿ ಯುವಜನರ ಪಾತ್ರ' ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದ ಅವರು, ನಮ್ಮ ಬದುಕಿನ ಪ್ರತಿಯೊಂದು ಕ್ಷಣವೂ ಪರಿಸರದ ಆಶೀರ್ವಾದದಿಂದ ಸಾಗುತ್ತಿದೆ. ನಾವು ಉಸಿರಾಡುವ ಗಾಳಿ, ಕುಡಿಯುವ ನೀರು, ಬೆಳೆ, ಮಣ್ಣು ಮತ್ತು ನೆರಳು ನೀಡುವ ಮರ... ಎಲ್ಲವೂ ಪ್ರಕೃತಿ ನೀಡಿದ ಅಮೂಲ್ಯ ಕೊಡುಗೆಗಳೇ ಆಗಿವೆ. ಆದರೆ ಇಂದಿನ ವೇಗದ ಅಭಿವೃದ್ಧಿಯ ನಡುವೆಯೇ ಪರಿಸರಕ್ಕೆ ಹಾನಿಯಾಗುತ್ತಿರುವ ಸಂಕಟ ಗಂಭೀರವಾಗಿ ಕಾಡುತ್ತಿದೆ ಎಂದು ವಿಷಾದಿಸಿದರು.



ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಆರ್‌ಎಲ್‌ಹೆಚ್‌ಪಿ ಆಯೋಜಿಸಿದ್ದ 'ಪರಿಸರ ಸಂರಕ್ಷಣೆಯಲ್ಲಿ ಯುವಜನರ ಪಾತ್ರ' ವಿಚಾರ ಸಂಕಿರಣವನ್ನು ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜ್ ಉದ್ಘಾಟಿಸಿದರು.


ಪರಿಸರ ಸಂರಕ್ಷಣೆಯಲ್ಲಿ ಯುವಜನರ ಪಾತ್ರ ಅತ್ಯಂತ ಪ್ರಮುಖವಾಗಿದೆ. ಯುವಕರು ಕೇವಲ ನಾಳೆಯ ನಾಯಕರು ಮಾತ್ರವಲ್ಲ, ಇಂದಿನ ಬದಲಾವಣೆಯ ಶಿಲ್ಪಿಗಳೂ ಆಗಿರುವುದರಿಂದ ಹೆಚ್ಚಿನ ಜವಾಬ್ದಾರಿ ಯುವಜನರ ಮೇಲಿದೆ. ಯುವ ಜನರಲ್ಲಿನ ಶಕ್ತಿ, ಹೊಸ ಚಿಂತನೆ ಮತ್ತು ತಂತ್ರಜ್ಞಾನ, ಜ್ಞಾನವು ಪರಿಸರ ಸಂರಕ್ಷಣೆಗೆ ಬಲವಾದ ಸಾಧನಗಳಾಗಿ ಮಾರ್ಪಟ್ಟಿವೆ. ಪ್ರತಿಯೊಬ್ಬರೂ ಸಣ್ಣ ಸಣ್ಣ ಪ್ರಯತ್ನ ಮಾಡಿದರೆ ದೊಡ್ಡ ಬದಲಾವಣೆಯನ್ನೇ ತರಬಹುದು. ಒಂದು ಗಿಡ ನೆಟ್ಟು ಮರವಾಗಿ ಪೋಷಿಸುವುದು, ನೀರಿನ ಮಿತ ಬಳಕೆ, ಪ್ಲಾಸ್ಟಿಕ್ ತ್ಯಜಿಸುವುದು, ಸಾರ್ವಜನಿಕ ಸ್ಥಳಗಳನ್ನು ಸ್ವಚ್ಛವಾಗಿಡುವುದಕ್ಕೆ ಎಲ್ಲರೂ ಪಣ ತೊಡಬೇಕು. ಇವು ಸರಳ ಕ್ರಮಗಳಾಗಿದ್ದರೂ ಮಹತ್ತರ ಪರಿಣಾಮ ಉಂಟು ಮಾಡುತ್ತವೆ.

ಪರಿಸರ ಸಂರಕ್ಷಣೆ ಕೇವಲ ಸರ್ಕಾರದ ಹೊಣೆಗಾರಿಕೆಯಲ್ಲ, ಅದು ಪ್ರತಿಯೊಬ್ಬ ನಾಗರಿಕನ ಕರ್ತವ್ಯ. ಯುವಜನರು ತಮ್ಮ ಕುಟುಂಬ, ಸ್ನೇಹಿತರು ಮತ್ತು ಸಮುದಾಯದಲ್ಲಿ ಜಾಗೃತಿ ಮೂಡಿಸಿ ಪರಿಸರ ಸ್ನೇಹಿ ಜೀವನಶೈಲಿಯನ್ನು ರೂಢಿಸಬೇಕು. ಶಾಲಾ–ಕಾಲೇಜುಗಳಲ್ಲಿ ಹಸಿರು ಕ್ಲಬ್‌ಗಳನ್ನು ಸ್ಥಾಪಿಸಿ ನಿರಂತರ ಚಟುವಟಿಕೆಗಳನ್ನು ಹಮ್ಮಿಕೊಳ್ಳಬೇಕು. ನಾವು ಇಂದು ಕೈಗೊಂಡ ಸಂಕಲ್ಪವೇ ನಾಳೆಯ ಸುರಕ್ಷಿತ ಭವಿಷ್ಯವನ್ನು ರೂಪಿಸುತ್ತದೆ. ಹಸಿರು ಮತ್ತು ಸ್ವಚ್ಛ ಪರಿಸರವೇ ಸಮೃದ್ಧ ಸಮಾಜದ ಗುರುತು. ಆದ್ದರಿಂದ 'ಹಸಿರು ಭೂಮಿ 'ಸುಂದರ ಭವಿಷ್ಯ' ಎಂಬ ದೃಢ ನಂಬಿಕೆಯಿಂದ ಎಲ್ಲರೂ ಒಂದಾಗಿ ಕೆಲಸ ಮಾಡಬೇಕು ಎಂದರು.

ಇದಕ್ಕೂ ಮುನ್ನ ಆರ್‌ಎಲ್‌ಹೆಚ್‌ಪಿ ನಿರ್ದೇಶಕರಾದ ಸರಸ್ವತಿ ಮಾತನಾಡಿ, ಗ್ರಾಮೀಣ ಶಿಕ್ಷಣ ಮತ್ತು ಆರೋಗ್ಯ ಸಂಸ್ಥೆ ಕಳೆದ 40 ವರ್ಷಗಳಿಂದಲೂ ಕರ್ನಾಟಕದ 8 ಜಿಲ್ಲೆಗಳಲ್ಲಿ, ಮಕ್ಕಳಾಭಿವೃದ್ಧಿ, ಯುವ ಸಬಲೀಕರಣ, ಮಹಿಳಾಭಿವೃದ್ಧಿ, ಸಮುದಾಯ ಆರೋಗ್ಯ ಕಾರ್ಯಕ್ರಮ ಹಾಗೂ ಸರ್ಕಾರಿ ಯೋಜನೆಗಳ ಸದುಪಯೋಗ ಕುರಿತು 1.85 ಲಕ್ಷ ಜನರೊಂದಿಗೆ ಶ್ರಮಿಸುತ್ತದೆ. ಮೈಸೂರು, ಗುಂಡ್ಲುಪೇಟೆ, ಗುಲ್ಬರ್ಗ ಮತ್ತು ಬೀದರ್ ತಾಲೂಕಿನಲ್ಲಿ 40 ಯುವಕರ ಗುಂಪು ಹಾಗೂ ರಾಜ್ಯ ಮಟ್ಟದಲ್ಲಿ ಕರ್ನಾಟಕ ರಾಜ್ಯ ಯೂತ್ ನೆಟ್ವರ್ಕ್ ರಚಿಸಲಾಗಿದೆ. ಆ ಮೂಲಕ ಯುವಜನರ ಸಾಮರ್ಥ್ಯ ಅಭಿವೃದ್ಧಿ ಕಾರ್ಯಕ್ರಮ, ಪರಿಸರ ಸಂಬಂಧಿತ ಕಾರ್ಯಕ್ರಮ, ಸಾವಯವ ಗೊಬ್ಬರಗಳ ಬಳಕೆ ತ್ಯಜಿಸುವಿಕೆ, ಪ್ಲಾಸ್ಟಿಕ್ ಬಳಕೆಯ ನಿಷೇಧ, ಘನತ್ಯಾಜ್ಯ ಘಟಕ, ಜಾಗತಿಕ ತಾಪಮಾನ ಹಾಗೂ ಪ್ರಕೃತಿ ವಿಕೋಪ ಸೇರಿದಂತೆ ಪರಿಸರಕ್ಕೆ ಸಂಬಂಧಿಸಿದ ವಿಷಯಗಳ ಕುರಿತು ಮಕ್ಕಳು, ಮಹಿಳೆಯರು, ಯುವಜನರು ಮತ್ತು ಸಮುದಾಯಕ್ಕೆ ಜಾಗೃತಿ ಕಾರ್ಯಕ್ರಮಗಳ ಮೂಲಕ ಅರಿವು ಮೂಡಿಸುತ್ತಿದ್ದು, ಪರಿಸರ ಸಂರಕ್ಷಣೆಗೆ ಸಂಬಂಧಿಸಿದಂತೆ ವಿವಿಧ ಇಲಾಖೆಗಳ ಸಹಯೋಗದೊಂದಿಗೆ ಕಾರ್ಯ ನಿರ್ವಹಿಸುತ್ತಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ತೋಟಗಾರಿಕೆ ಜಂಟಿ ನಿರ್ದೇಶಕ ಮಂಜುನಾಥ ಅಂಗಡಿ, ಸಹಾಯಕ ಕೃಷಿ ನಿರ್ದೇಶಕ ಬಿ.ಡಿ. ಜಯರಾಮ್, ಪ್ರಾಸೋಧ್ಯಮ ಇಲಾಖೆ ಸಹಾಯಕ ನಿರ್ದೇಶಕ ವಿ.ಎಂ.ಪ್ರಭುಸ್ವಾಮಿ, ಡಯಟ್ ಉಪನಿರ್ದೇಶಕ ನಾಗರಾಜಯ್ಯ, ಪರಿಸರಕ್ಕಾಗಿ ನಾವು ಸಂಘಟನೆಯ ಪ್ರದಾನ ಕಾರ್ಯದರ್ಶಿ ಪರಶುರಾಮೇಗೌಡ ಅವರು ಯುವಜನರಿಗೆ ಪರಿಸರ ಸಂರಕ್ಷಣೆ ಕುರಿತು ಮಾತನಾಡಿದರು.

ಮಂಚೇಗೌಡನಕೊಪ್ಪಲು ವ್ಯಾಪ್ತಿ 5.82 ಕೋಟಿ ವೆಚ್ಚದ ವಿವಿಧ ಕಾಮಗಾರಿಗೆ ಶಾಸಕ ಹರೀಶ್‌ಗೌಡರಿಂದ ಚಾಲನೆ



ವಿವಿಧ ಅಭಿವೃದ್ಧಿ ಕಾಮಗಾರಿಗೆ ಶಾಸಕ ಕೆ.ಹರೀಶ್‌ಗೌಡ ಶುಕ್ರವಾರ ಗುದ್ದಲಿ ಪೂಜೆ ನೆರವೇರಿಸಿದರು.

ಮೈಸೂರು, ಫೆ.27(ಎಂಕೆ)– ಮುಖ್ಯಮಂತ್ರಿ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯಡಿ (ಸಿಎಂಐಡಿಪಿ) ಚಾಮರಾಜ ವಿಧಾನಸಭಾ ಕ್ಷೇತ್ರಕ್ಕೆ ಮಂಜೂರಾಗಿರುವ 50 ಕೋಟಿ ರೂ. ಅನುದಾನದಡಿ ನಗರಪಾಲಿಕೆ ವಾರ್ಡ್ ನಂ.2ರ ಮಂಚೇಗೌಡನಕೊಪ್ಪಲು ವ್ಯಾಪ್ತಿಯಲ್ಲಿ 5.82 ಕೋಟಿ ರೂ.ವೆಚ್ಚದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗೆ ಶಾಸಕ ಕೆ.ಹರೀಶ್‌ಗೌಡ ಶುಕ್ರವಾರ ಗುದ್ದಲಿ ಪೂಜೆ ನೆರವೇರಿಸಿದರು.

ಮಂಚೇಗೌಡನಕೊಪ್ಪಲು ವ್ಯಾಪ್ತಿಯ ಮಹಾಜನ ಲೇಔಟ್, ಸರ್ಕಾರಿ ಕಾಲೇಜು ಹಿಂಭಾಗ, ಮಾರಿಗುಡಿ ಮತ್ತು ಎಲ್ಲಮ್ಮ ತಾಯಿ ದೇವಸ್ಥಾನ, ಮಾವಿನ ತೋಪಿನ ರಸ್ತೆಯಿಂದ ಸೌದೇ ಡಿಪೋವರೆಗಿನ ಅಡ್ಡ ರಸ್ತೆಗಳು, ಚರಂಡಿ, ಒಳಚರಂಡಿ ಕೊಳವೆ ಮಾರ್ಗ ಹಾಗೂ ಯಂತ್ರ ಗುಂಡಿಗಳ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಿದರು.

ಹಾಗೆಯೇ ಮಂಚೇಗೌಡನಕೊಪ್ಪಲು ಆಟದ ಮೈದಾನಕ್ಕೆ ಹೊಸದಾಗಿ ನಿರ್ಮಿಸಿರುವ ಕಾಂಪೌಂಡ್ ಅನ್ನು ಉದ್ಘಾಟಿಸಿದರು. ಬಳಿಕ ನಡೆದ ವೇದಿಕೆ ಕಾರ್ಯ ಕ್ರಮದಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯಡಿ ಕ್ಷೇತ್ರಕ್ಕೆ ಮಂಜೂರಾದ 50 ಕೋಟಿ ರೂ. ಅನುದಾನವನ್ನು ಯಾವುದೇ ತಾರತಮ್ಯವಿಲ್ಲದೆ ಕ್ಷೇತ್ರದ ಎಲ್ಲಾ ವಾರ್ಡ್‌ಗಳ ಅಭಿವೃದ್ಧಿ ಕಾರ್ಯಕ್ಕೆ ಹಂಚಿಕೆ ಮಾಡಲಾಗಿದೆ ಎಂದರು.

ಕ್ಷೇತ್ರದಲ್ಲಿರುವ ಮೂಲ ಗ್ರಾಮಗಳ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ. ಪಾದಯಾತ್ರೆ ಸಂದರ್ಭದಲ್ಲಿ ಕಂಡುಬಂದ ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಅನುದಾನ ಸದ್ಬಳಕೆ ಮಾಡಲಾಗುತ್ತಿದೆ. ಮಂಚೇಗೌಡನಕೊಪ್ಪಲಿನಲ್ಲಿ ಯುಜಿಡಿ ಸಮಸ್ಯೆಯನ್ನು ಬಗೆಹರಿಸುವ ನಿಟ್ಟಿನಲ್ಲಿ ಕ್ರಮಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ಇಂದಿರಾಗಾಂಧಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರವಿ ಮಂಚೇಗೌಡನಕೊಪ್ಪಲು ಪ್ರಾಸ್ತಾವಿಕವಾಗಿ ಮಾತನಾಡಿದರು. ಮಾಜಿ ಮೇಯರ್‌ಗಳಾದ ಪುಷ್ಪಲತಾ ಚಿಕ್ಕಣ್ಣ, ಮೋದಾಮಣಿ, ಮಾಜಿ ಉಪ ಮೇಯರ್ ಮಹದೇವಪ್ಪ, ನಗರ ಪಾಲಿಕೆ ಮಾಜಿ ಸದಸ್ಯರಾದ ಪ್ರೇಮಾಶಂಕರೇಗೌಡ, ಪೈಲ್ವಾನ್ ಶ್ರೀನಿವಾಸ್, ಜೆ.ಗೋಪಿ, ನಗರಪಾಲಿಕೆ ಇಂಜಿನಿಯರ್‌ಗಳಾದ ಮಂಜುನಾಥ್, ಶ್ರೀನಿವಾಸ್, ವಾರ್ಡ್ ಅಧ್ಯಕ್ಷ ವಾರ್ಡ್ ಅಧ್ಯಕ್ಷ ಆರ್.ಶ್ರೀಧರ್, ಸ್ಥಳೀಯ ಮುಖಂಡರಾದ ಡಿ.ರಾಮಚಂದ್ರು, ಯು.ರಮೇಶ್, ಪಟೇಲ್ ಗೋವಿಂದರಾಜು, ಇರವೀಂದ್ರ ದೊಡ್ಡೇಗೌಡ, ಜಯರಾಮಚಾರಿ, ಪೈಲ್ವಾನ್ ನಾರಾಯಣ್, ಮಹದೇವಮ್ಮ, ಸುಜಾತ, ಲೋಕೇಶ್, ಪುಟ್ಟರಾಜು, ಅವಿನಾಶ್, ಡೆಲ್ಲಿ ರವಿ, ಆಟೋ ಸತೀಶ್ ಗೌಡ, ಯೂತ್ ಕಾಂಗ್ರೆಸ್‌ನ ನಿಶಾಂತ್ ಪಟೇಲ್ ಮತ್ತಿತರರು ಉಪಸ್ಥಿತರಿದ್ದರು.

ಉತ್ತರಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಶ್ರೀ ಪಿ. ಸಿದ್ದಾಚಾರ್

ಮೈಸೂರು ನಗರಾಧ್ಯಕ್ಷರು ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾ

ಮಾಲೀಕರು : ಶ್ರೀ ಸೋಮಶೇಖರ್ ವುಡ್ ಪ್ಲೇನಿಂಗ್, ಜೆ.ಪಿ ನಗರ, ಯಶ್ವಿನ್ ಟಿಂಬರ್ಸ್ & ಕಟ್ ಸೈಜ್, ವಿಶ್ವೇಶ್ವರ ನಗರ, ಮೈಸೂರು

ಇವರು ದಿನಾಂಕ 18-02-2026 ಬುಧವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧ ಉತ್ತರ ಕ್ರಿಯಾದಿ ಭೂಶಾಂತಿ ಕಾರ್ಯವನ್ನು ದಿನಾಂಕ 01-03-2026 ಭಾನುವಾರ ಬೆಳಿಗ್ಗೆ 11.30 ಗಂಟೆಗೆ ಮೃತರ ಸ್ವಗೃಹ ನಂ. 4/3ಎ, 1ನೇ ಮುಖ್ಯ ರಸ್ತೆ, 10ನೇ ಅಡ್ಡ ರಸ್ತೆ, ಜನತಾ ಬಡಾವಣೆ, ಜೆ.ಪಿ ನಗರ, ಮೈಸೂರು ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ದುಃಖತಪ್ತರು : ಶ್ರೀಮತಿ ಶಿವಮ್ಮ, ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು, ಲೇ॥ ಪುಟ್ಟಪ್ಪಚಾರ್(ಕುಳ್ಳಾಚಾರ್) ಕುಟುಂಬವರ್ಗದವರು ಹಾಗೂ ಜೆ.ಪಿ ನಗರ ಗ್ರಾಮಸ್ಥರು

ಮೊ: 9980737816 | ಭೋಜನ : ಮಧ್ಯಾಹ್ನ 1.00 ಗಂಟೆಗೆ



೩೫ನೇ ವಿವಾಹ ವಾರ್ಷಿಕೋತ್ಸವದ ಶುಭಾಶಯಗಳು

ಕರ್ನಾಟಕ ಸರ್ಕಾರದ ಮಾಜಿ ಸಚಿವರಾದ ಕೋಟೆ ಎಂ ಶಿವಣ್ಣರವರು ಧರ್ಮಸ್ಥಳದ ಶ್ರೀ ಮಂಜುನಾಥನ ಸನ್ನಿಧಿಯಲ್ಲಿ ಸರಳ ವಿವಾಹವಾಗಿ 34 ವರ್ಷಗಳನ್ನು ಪೂರೈಸಿ 35ನೇ ವರ್ಷಕ್ಕೆ ಕಾಲಿಡುತ್ತಿರುವ ಈ ಶುಭ ಸಂದರ್ಭದಲ್ಲಿ 27-02-2026 ನಂಜನಗೂಡಿನ ಶ್ರೀ ನಂಜುಂಡೇಶ್ವರನ ಸನ್ನಿಧಿಯಲ್ಲಿ ಪೂಜೆ ಸಲ್ಲಿಸಿ ದೇವರ ದರ್ಶನ ಪಡೆದು ನಂತರ ದೇವಸ್ಥಾನದ ಮುಂದೆ ಶಿವಣ್ಣ ರವರು ಮತ್ತು ದೇವಿಕಾ ಶಿವಣ್ಣ ರವರನ್ನು ಅಭಿಮಾನಿಗಳು ಶುಭ ಕೋರಿ ಹಾರೈಸಿದರು

ಶುಭಕೋರುವವರು:

ಕೋಟೆ ಎಂ ಶಿವಣ್ಣರವರ ಅಭಿಮಾನಿ ಬಳಗ, ಮೈಸೂರು ಮತ್ತು ಚಾಮರಾಜನಗರ ಜಿಲ್ಲೆ



॥ ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥

ಪರಶಿವನ ಪಂಚಮುಖದಲ್ಲಿ ಉದ್ಭವಿಸಿದ ಯುಗಯುಗಾಂತರದಲ್ಲಿ ಅವತರಿಸಿದ ಪಂಚಾಚಾರ್ಯರು

1-3-2026 ಫಾಲ್ಗುಣ ಶುದ್ಧ ತ್ರಯೋದಶಿ | 21-4-2026 ವೈಶಾಖ ಶುದ್ಧ ಪಂಚಮಿ | 20-4-2026 ಬಸವಜಯಂತಿ ವೈಶಾಖ ಶುದ್ಧ ತೃತೀಯ | 15-2-2026 ಮಹಾಶಿವರಾತ್ರಿಮಾಘ ಶುದ್ಧ ತ್ರಯೋದಶಿ | 15-2-2026 ಮಹಾಶಿವರಾತ್ರಿಮಾಘ ಶುದ್ಧ ತ್ರಯೋದಶಿ

ಕರ್ನಾಟಕ ಸರ್ಕಾರ, ಜಿಲ್ಲಾಡಳಿತ ಮತ್ತು ಕನ್ನಡ ಸಂಸ್ಕೃತಿ ಇಲಾಖೆ, ಮೈಸೂರು

ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತೋತ್ಸವ ಸಮಿತಿ

ಶ್ರೀ ರೇಣುಕಾಚಾರ್ಯ ದೇವಸ್ಥಾನ ರಸ್ತೆ, ಮೈಸೂರು., ಇವರ ಸಂಯುಕ್ತಾಶ್ರಯದಲ್ಲಿ

ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ 2026 ಮತ್ತು ಶ್ರೀ ಜಗದ್ಗುರು ಪಂಚಾಚಾರ್ಯರ ಯುಗಮಾನೋತ್ಸವ

1-3-2026ನೇ ಭಾನುವಾರ

ರುದ್ರಾಭಿಷೇಕ, ಅಷ್ಟೋತ್ತರ ಮತ್ತು ಮಹಾಮಂಗಳಾರತಿ ಬೆಳಿಗ್ಗೆ 8 ರಿಂದ 9 ರವರೆಗೆ

ಶ್ರೀ ರೇಣುಕಾಚಾರ್ಯ ದೇವಸ್ಥಾನ, ಮೈಸೂರು (ಕೆ.ಆರ್. ಪೋಲಿಸ್ ಸ್ಟೇಷನ್ ಎದುರು ರಸ್ತೆ)

ಕಲಾಮಂದಿರದಲ್ಲಿ ಬೆಳಗ್ಗೆ 10ಕ್ಕೆ ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ 11ಕ್ಕೆ ಸಭಾ ಕಾರ್ಯಕ್ರಮ

ಡಾ. ಮೀನಾಕ್ಷಿ ಖಂಡಿ ಮಠ, ನಿವೃತ್ತ ಪ್ರಾಧ್ಯಾಪಕರು ಮತ್ತು ಸಿಂಡಿಕೇಟ್ ಸದಸ್ಯರು ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು, ವಿಷಯ : ಮಹಾ ಮಾನವತಾವಾದಿ ಶ್ರೀ ಜಗದ್ಗುರು ರೇಣುಕಾಚಾರ್ಯರು

ಡಾ.ವಿಜಯಲಕ್ಷ್ಮಿ ಈಶ್ವರಪ್ಪ ಬಾಳೇಕುಂದಿ, ಪ್ರಾಧ್ಯಾಪಕರು ಎಮೆರೇಟ್ಸ್, ಮಕ್ಕಳ ಹೃದ್ರೋಗ ತಜ್ಞರು, ಶ್ರೀ ಜಯದೇವ ಹೃದ್ರೋಗ ಸಂಸ್ಥೆ, ಬೆಂಗಳೂರು, ಅಂಕಣಕಾರರು, ಆಧ್ಯಾತ್ಮಿಕ ಚಿಂತಕರು, ವಿಷಯ : ಸಮಾಜದ ಸ್ವಾಸ್ಥ್ಯಕ್ಕೆ ಸಿದ್ಧಾಂತ ಶಿಖಾಮಣಿ, (ಶ್ರೀ ರೇಣುಕಾಚಾರ್ಯರು ಅಗಸ್ತ್ಯ ಋಷಿಗಳಿಗೆ ಉಪದೇಶದಿಂದ)

ವಿಧಾನಸಭಾ, ಲೋಕಸಭಾ, ಮೈಸೂರು ಜಿಲ್ಲೆ ಮತ್ತು ಮೈಸೂರು ನಗರ, ಸದಸ್ಯರು ಜಿಲ್ಲಾಡಳಿತ, ಉಪಸ್ಥಿತರಿರುವವರು

ಸಿಗ್ಮಾ ಆಸ್ಪತ್ರೆಯಿಂದ ಉಚಿತ ಆರೋಗ್ಯ ತಪಾಸಣೆ ಪರೀಕ್ಷೆ ಬೆಳಿಗ್ಗೆ 9 ರಿಂದ 2ರವರೆಗೆ ಬಿ.ಪಿ. ಮಧುಮೇಹ ಮತ್ತು ಮೂಳೆಯ ಸಾಂದ್ರತೆ ಪರೀಕ್ಷೆ ಸರಸ್ವತಿಪುರಂ, ಮೈಸೂರು. ನೋಂದಣಿಗೆ ಆದ್ಯತೆ : 9108028661


ಶ್ರೀ ರೇಣುಕಾಚಾರ್ಯರ ಮೆರವಣಿಗೆ ಸಂಜೆ 6 ರಿಂದ

(ತ್ಯಾಗರಾಜ ರಸ್ತೆ, ಅಗ್ರಹಾರ ವೃತ್ತ, 101 ಗಣಪತಿ ದೇವಸ್ಥಾನ, ರಾಮಾನುಜ ರಸ್ತೆ, ಎಂ.ಜಿ ರಸ್ತೆ, ಸಿದ್ದಪ್ಪ ವೃತ್ತ)

ಶ್ರೀ ರೇಣುಕಾಚಾರ್ಯ ಉತ್ಸವ ಸಮಿತಿ : ಅಧ್ಯಕ್ಷರು, ಕಾರ್ಯದರ್ಶಿಗಳು ಮತ್ತು ಕಾರ್ಯಕಾರಿ ಸಮಿತಿಯ ಸದಸ್ಯರುಗಳು

ಸರ್ವರಿಗೂ ಸುಸ್ವಾಗತ

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಶ್ರೀಮಾನ್ ಆರ್. ಪದ್ಮನಾಭ ರವರು

ಯರಗನಹಳ್ಳಿ ಗ್ರಾಮ ಪಂಚಾಯಿತಿಯ ಮಾಜಿ ಅಧ್ಯಕ್ಷರು, ಮೈಸೂರು

ಇವರು ದಿನಾಂಕ 19-02-2026 ಗುರುವಾರ ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧ ಉತ್ತರ ಕ್ರಿಯಾದಿ ಭೂಶಾಂತಿ ಕಾರ್ಯವನ್ನು ದಿನಾಂಕ 01-03-2026 ಭಾನುವಾರ ಬೆಳಿಗ್ಗೆ 11.00 ಗಂಟೆಗೆ ಯರಗನಹಳ್ಳಿ ರುದ್ರಭೂಮಿಯಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ದುಃಖತಪ್ತರು:

ಮೃತರ ಪತ್ನಿ ಶ್ರೀಮತಿ ಹೇಮಾವತಿ, ಮಕ್ಕಳು, ಸೊಸೆಯರು, ಅಳಿಯ ಮತ್ತು ಮೊಮ್ಮಕ್ಕಳು, ಲೇ॥ ಆರ್. ರಂಗಯ್ಯನವರ ಕುಟುಂಬವರ್ಗದವರು ಹಾಗೂ ಯರಗನಹಳ್ಳಿ ಗ್ರಾಮಸ್ಥರು

ಮೈಸೂರು ನಗರ ಪೊಲೀಸ್ ಸ್ಪಂದನ ಪತ್ತಿನ ಸಹಕಾರ ಸಂಘ ನಿ., ಮೈಸೂರು

ಆಡಳಿತ ಮಂಡಳಿಯ ಚುನಾವಣೆ - 2026

ಆತ್ಮೀಯ ಮತ ಬಾಂದವರೇ,

ದಿನಾಂಕ: 01-03-2026ನೇ ಭಾನುವಾರ, ಬೆಳಗ್ಗೆ 9:00 ರಿಂದ ಸಂಜೆ 4:00 ಗಂಟೆಯವರೆಗೆ ನಗರದ **ಜಲಯಪುರಿಯಲ್ಲಿರುವ ಪೊಲೀಸ್ ಪಬ್ಲಿಕ್ ಶಾಲೆ**ಯಲ್ಲಿ ನಡೆಯಲಿರುವ **ನಿರ್ದೇಶಕರ ಚುನಾವಣೆಯ ಹಿಂದುಳಿದ ವರ್ಗ ಪ್ರವರ್ಗ-ಬಿ ಸ್ಥಾನದಲ್ಲಿ** ಸ್ಪರ್ಧಿಸುತ್ತಿದ್ದೇನೆ. ನಿಮ್ಮ ಅಮೂಲ್ಯವಾದ ಮತವನ್ನು ನೀಡಿ ಜಯಶೀಲರನ್ನಾಗಿ ಮಾಡಿ ನಿಮ್ಮ ಸೇವೆ ಮಾಡಲು ಅವಕಾಶ ಕಲ್ಪಿಸಿಕೊಡಬೇಕೆಂದು ತಮ್ಮಲ್ಲಿ ಕಳಕಳಿಯ ಮನವಿ.

ಕ್ರಮ. ಸಂ	ಭಾವಚಿತ್ರ	ಚಿಹ್ನೆ	ಮುದ್ರೆ
6	 ಶ್ರೀ ಚಿಕ್ಕಲಿಂಗೇಗೌಡ, ಎ.ಆರ್.ಎಸ್.ಐ (ನಿವೃತ್ತ) ಮೈಸೂರು ನಗರ, ಮೊ:70192 40349	ಸೀಲಿಂಗ್ ಫ್ಯಾನ್	

ಇಂತಿ ತಮ್ಮ ಸೇವಾಕಾಂಕ್ಷಿ:

ಶ್ರೀ ಚಿಕ್ಕಲಿಂಗೇಗೌಡ, ಎ.ಆರ್.ಎಸ್.ಐ (ನಿವೃತ್ತ) ಮೈಸೂರು ನಗರ

ಪ್ರಕಟಣೆ: ಶಶಿಕುಮಾರ್, ಮ್ಯಾನೇಜಿಂಗ್ ಡೈರೆಕ್ಟರ್, N.G. ಡೆವೆಲಪರ್ಸ್, ಮೈಸೂರು